ಬೆಲೆ: ಎರಡು ಆಣೆ

ಕರ್ಮವೀರ

ವರ್ಗಣಿ ದರ
(ಅಂಚೆವೆಚ್ಚ ಸೇರಿ)
ವರ್ಷಕ್ಕೆ ರೂ. ೩-೪-೦
೬ ತಿಂಗಳಿಗೆ ,, ೨-೪-೦
೩ ತಿಂಗಳಿಗೆ ,, ೧-೧೨-೦
ವ್ಹಿ. ಪಿ. ಮೂಲಕ
ತರಿಸಿಕೊಂಡಲ್ಲಿ ೫ ಆಣೆ
ಹೆಚ್ಚಿಗೆ ಬೀಳುವದು.

KARMAVEER
WEEKLY
HUBLI
★
MAR. 11
1946

ಸಂಪಾದಕರು :
ಹ. ರಾ. ಪುರೋಹಿತ, ಎಂ. ಎ.

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

Editor : H. R. Purohit, M. A.

ಸಂಪುಟ ೧೭] 卐 ಹುಬ್ಬಳ್ಳಿ ಸೋಮವಾರ ತಾರೀಖು ೧೧ — ೩ — ೧೯೪೬ 卐 [ಸಂಚಿಕೆ ೪೩

ಹಿಂದೀ ಸಮಸ್ಯೆಯ ತೀರ್ಮಾನವನ್ನೇ ನಾಗರಿಕತೆಯ ಭವಿತವ್ಯ ಅವಲಂಬಿಸಿದೆ : ಪೂರ್ಣ ಸ್ವರಾಜ್ಯವೇ ಮಾತುಕತೆಯ ತಳಹದಿಯಾಗಿರಬೇಕು : ಬ್ರಿಟಿಶ ಮಂತ್ರಿ ಸಮಿತಿಗೆ ಪ್ರೊ. ಹೆರಾಲ್ಡ ಲಾಸ್ಕಿಯವರ ಕಿವಿಮಾತು

ಪ್ರೊ. ಹೆರಾಲ್ಡ ಲಾಸ್ಕಿಯವರು ಬ್ರಿಟಿಶ ಕೂಲಿಕಾರ ಪಕ್ಷದ ಕಾರ್ಯಕಾರಿ ಮಂಡಲದ ಅಧ್ಯಕ್ಷರು. • ಸಾಮ್ಯವಾದಿ ಲೇಖಕರಲ್ಲಿ ಅಗ್ರಗಣ್ಯರೆಂದು ಅವರ ಪ್ರಸಿದ್ಧಿ. ನಿರ್ದಾಕ್ಷಿಣ್ಯ ಅಭಿಪ್ರಾಯಗಳನ್ನು ವ್ಯಕ್ತಮಾಡಲು ಹಿಂಜರಿಯದಿರುವ ಲಾಸ್ಕಿಯವರು ಎಷ್ಟೋ ವೇಳೆ ತಮ್ಮ ಪಕ್ಷದ ಮಂದಗಾಮಿಗಳಿಗೆ ಪಕ್ಕದ ಮುಳ್ಳಾಗಿ ಭಾಸವಾದುದುಂಟು. ಬ್ರಿ. ಕೂಲಿಕಾರ ಸರಕಾರವನ್ನು-ತಮ್ಮ ಪಕ್ಷದವರ ಕಾರ್ಯಭಾರವನ್ನು-ಕೂಡ ಟೀಕಿಸಲು ಅವರು ಹಿಂದೆಮುಂದೆ ನೋಡಿಲ್ಲ. ಹಿಂದೀ ಪ್ರಶ್ನೆಯ ತೀರ್ಮಾನದ ಅವಶ್ಯಕತೆ ಮತ್ತು ಅದರಲ್ಲಿರುವ ತೊಡಕುಗಳನ್ನು ವಿವೇಚಿಸಿ ಅವರು, ಈ ಲೇಖದಲ್ಲಿ ತೊಡಕು ಎಂಥದೇ ಇರಲಿ, ತೀರ್ಮಾನವಾಗಲೇ ಬೇಕು, ಇಲ್ಲದಿದ್ದರೆ ಅನರ್ಥ ನಿಶ್ಚಯವೆಂದು ಪ್ರತಿಪಾದಿಸಿದ್ದಾರೆ.

ಹಿಂದೀ ನೌಕಾಪಡೆಯಲ್ಲಿಯೂ ಹಿಂದೀ ವಿಮಾನ ಪಡೆಯಲ್ಲಿಯೂ ಉರಿದೆದ್ದ ಬಂಡಾಯಗಳು; ಕಲಕತ್ತೆ, ಮುಂಬಯಿ, ಕರಾಚಿಗಳಲ್ಲಾದ ಉಗ್ರ ಬೀದಿ—ದಂಗೆಗಳು, ಯುರೋಪಿಯನ್ನರ ವಿರುದ್ಧ ಉದ್ರಿಕ್ತವಾಗುತ್ತಿರುವ ದ್ವೇಷಭಾವನೆಯ ಏರಾಟ; ಮುಂಬರುವ ಬರಗಾಲ ಮತ್ತು ಅದು ಸಕಾಲದಲ್ಲಿ ತಡೆಹಿಡಿದು ನಿವಾರಿಸಲ್ಪಡಬಹುದಾದರೂ ಅಷ್ಟರೊಳಗೇ ನಿಶ್ಚಯವಾಗಿ ಅನೇಕ ಮರಣಗಳೊದಗುವ ದುರಂತದ ಭಯ;--ಇವೆಲ್ಲ ಸೇರಿ ರಾಜಕೀಯ ರಂಗದಲ್ಲಿ ಶೀಘ್ರವಾದ ಕ್ರಿಯೆಯನ್ನು ಅಪರಿಹಾರ್ಯವಾಗಿ ಮಾಡಿವೆ. ಕೆಲ ದಿನಗಳ ಹಿಂದೆ ಮರಳಿದ ಪಾರ್ಲಮೆಂಟರಿ ಶಿಷ್ಟಮಂಡಲದವರು, ತಡಮಾಡಿದರೆ ಪರಿಣಾಮ ದುರ್ದೈವದ್ದಾಗುವದೆಂಬ ಒಮ್ಮ... ಮನವರಿಕೆಯನ್ನು ವ್ಯಕ್ತಗೊಳಿಸಿ ... ತೀವ್ರವೇ ಒಪ್ಪಂದವಾಗಬೇಕು, ಇಲ್ಲದಿದ್ದರೆ ಅನರ್ಥ ಕಟ್ಟಿಟ್ಟದ್ದೆಂಬ ಕವಲುದಾರಿಯಲ್ಲಿ ಹಿಂದುಸ್ತಾನದ ಪರಿಸ್ಥಿತಿ ನಿಂತಿದೆ.

ಹೊತ್ತು ಮೀರಿದ ಮೇಲೆ ಬ್ರಿಟಿಶ ಕೂಲಿಕಾರ ಸರಕಾರ ನಿರ್ಧಾರಸ್ವರೂಪದ ಕಾರ್ಯವನ್ನು ಆರಂಭಿಸಿದೆ. ಹಿಂದುಸ್ತಾನದೊಡನೆ ಪೂರ್ಣ ಒಪ್ಪಂದದ ಮಾತುಕತೆಯನ್ನು ನಡೆಸುವಲ್ಲಿ ವ್ಹಾಯಿಸರಾಯರಿಗೆ ಬೆಂಬಲನೀಯುವ ಸಲುವಾಗಿ ಅದು ಹಿಂದುಸ್ತಾನಕ್ಕೊಂದು ಮಂತ್ರಿಮಂಡಲ ಸಮಿತಿಯನ್ನು ಕಳಿಸುತ್ತಿದೆ. ಅದು ಪ್ರಬಲವಾದ ಸಮಿತಿಯೇ ಸರಿ. ಭಾರತ ಮಂತ್ರಿ ಪೆಥಿಕ ಲಾರೆನ್ಸ, ನೌಕಾಮಂತ್ರಿ ಎ. ವಿ. ಅಲೆಗ್ಝಾಂಡರ, ಮತ್ತು ಮೂರು ವರ್ಷದ ಕೆಳಗೆ ತಾವು ನಡೆಸಿದ ಸಂಧಾನದಲ್ಲಿ ಸಾಫಲ್ಯಕ್ಕೆ ಬಹಳ ಸಮೀಪ ಹೋಗಿ ಸೋತ ಸರ್ ಸ್ಟ್ಯಾಫೋರ್ಡ ಕ್ರಿಪ್ಸ ಇವರು ಆ ಸಮಿತಿಯಲ್ಲಿದ್ದಾರೆ. ಈ ಸಮಿತಿಯವರು ಹಿಂದೀ ಮುಂದಾಳುಗಳನ್ನು ಒಡಂಬಡಿಸಬಲ್ಲ ಸಂಗತಿಗಳಿಗೆಲ್ಲ ಲಂಡನದಲ್ಲಿರುವ ಮಂತ್ರಿಮಂಡಲವೂ ಪಾರ್ಲಿಮೆಂಟೂ ಒಪ್ಪುವವೆಂಬುದು ತೊಂಬತ್ತು ಪಾಲು ನಿಶ್ಚಯ. ಈ ಸಮಿತಿಗೆ ಹಿಂದುಸ್ತಾನದಿಂದ ಮರಳಲು ಯಾವ ಅವಧಿ ನಿರ್ಬಂಧವೂ ಇಲ್ಲ. ಸರ್ ಸ್ಟ್ಯಾಫೋರ್ಡ ಕ್ರಿಪ್ಸರು ಹಿಂದೆ ಮಾಡಬೇಕಾಗಿದ್ದಂತೆ, ಬಿಗಿಯಾದ ಕಟ್ಟುಪಾಡುಗಳ ಆವರಣದೊಳಗೆ, ಆಮೂ ಲಾರ್ಡ ಲಿನಲಿಥಗೋ ಅವರಂಥ ದರ್ಪಶಾಲಿ, ಕಲ್ಪನಾದರಿದ್ರ ವ್ಹಾಯಿಸರಾಯರ ನೆರಳಲ್ಲಿ ಈ ಸಮಿತಿ ಕೆಲಸ ಮಾಡಬೇಕಾಗಿಲ್ಲ. ಲಾರ್ಡ ವೇವೆಲ್ಲರು ಶ್ಲಾಘನೀಯರಾದ ವ್ಹಾಯಿಸರಾಯರು. ಲಿನಲಿಥಗೋರಂತೆ ತಮ್ಮ ಪದವಿಯ ಸಂಪ್ರದಾಯ, ಶಿಷ್ಟಾಚಾರಗಳ ಮೋಹದಿಂದ ಸಂಕುಚಿತ ಮನೋವೃತ್ತಿಯವರಾಗಿಲ್ಲ. ಅವರು ವೈಯಕ್ತಿಕವಾಗಿಯೂ ಪ್ರೀತ್ಯಾಸ್ಪದರಾಗಿದ್ದಾರೆ.ಪರಿಸ್ಥಿತಿಯ ಗಂಭೀರತೆ ಅವರಿಗೆ ಮನವರಿಕೆಯಾಗಿದೆಯೆಂದು ಸಾಮಾನ್ಯವಾಗಿ ನಂಬಲಾಗಿದೆ. ಬ್ರಿಟಿಶ ಸರಕಾರಕ್ಕೆ ಈ ಸಮಸ್ಯೆಯನ್ನು ಬಿಡಿಸುವದರಲ್ಲಿ ಎಷ್ಟು ಆತುರವಿದೆಯೆಂಬ ಮಾತು ಮೊನ್ನೆ ಶುಕ್ರವಾರ ಮುಖ್ಯ ಮಂತ್ರಿ ಅಟ್ಲಿಯವರು ಪಾರ್ಲಮೆಂಟಿನಲ್ಲಿ ನಾವಿಕರ ಬಂಡಾಯವನ್ನು ಕುರಿತು ಕೊಟ್ಟ ಜಾಗರೂಕ ಕ್ಷಮಾಶೀಲ ಹೇಳಿಕೆಯಿಂದ ತಿಳಿದುಬರುತ್ತದೆಂದು ನನಗೆನಿಸುತ್ತದೆ. ಇಂಥ ಹೇಳಿಕೆಗಳಿಗೆ ಮಾದರಿಯೆಂಬತಿತ್ತು ಅವರ ಹೇಳಿಕೆ. ಅದು ಬಂಡಾಯವನ್ನು ಕ್ಷಮಿಸಲಿಲ್ಲ. ಆದರೂ ಅವರೆಂದುದರಲ್ಲಿ ರೋಷದ ಬಿಸಿಯಿದ್ದಿಲ್ಲ. ಬದಲಿಗೆ ಪೂರ್ಣ ವಿಚಾರಣೆಯ ಮಾತು ಕೊಟ್ಟರು ಅವರು. ೧೯೪೪ ರಲ್ಲಿ ಕೂಲಿಕಾರ ಪಕ್ಷ ವಿಶೇಷಾಧಿವೇಶನದಲ್ಲಿ ಸ್ಪಷ್ಟಗೊಳಿಸಿದಂತೆ, ಹಿಂದುಸ್ತಾನದ ಪ್ರಶ್ನೆಯ ತೀರ್ಮಾನವನ್ನೇ ಜಗತ್ತಿನ ಶಾಂತಿಯ ಭವಿತವ್ಯ ಅವಲಂಬಿಸಿದೆಯೆಂದು ಕೂಲಿಕಾರ ಸರಕಾರ ಈಗ ಮನಗಂಡಿದೆಯೆಂದು ನನಗೆ ತೋರುತ್ತದೆ. ೧೯೪೦ ರಲ್ಲಿ ಚರ್ಚಿಲ್ಲರ ಸರಕಾರ ಮಾಡಬೇಕಾಗಿದ್ದ ಎತ್ತುಗಡೆಯನ್ನು ಈಗ ಅಟ್ಲಿಯವರೂ ಅವರ ಸಂಗಡಿಗರೂ ಆರಂಭಿಸಿದ್ದಾರೆಂದು ಹೇಳಬಹುದು. ಇದರಲ್ಲಿ ಯಶಸ್ವಿಗಳಾದರೆ ಅವರು ಇಂಗ್ಲಂಡಿನದಷ್ಟೇ ಅಲ್ಲ, ಇಡಿ ಜಗತ್ತಿನ ಕೃತಜ್ಞತೆಯನ್ನು ಗಳಿಸಿದಂತಾಗುವದು.

ಗಹನ ಕಾರ್ಯ

ಬ್ರಿಟಿಶ ಸರಕಾರ ಕೈಕೊಂಡಿರುವ ಕೆಲಸದ ಗಹನತೆಯನ್ನು ಅಲ್ಲಗಳೆದು ಯಾರಿಗೂ ಲಾಭವಿಲ್ಲ. ನೊಂದು ರುಕ್ಷರಾದ ಹಿಂದೀ ಜನರೊಡನೆ, ಬ್ರಿಟಿಶ ಸೂಚನೆಗಳಲ್ಲಿ ಸಂಶಯಗ್ರಸ್ತರಾಗಲು ಕಲಿತಿರುವ ಬ್ರಿಟಿಶ ಸೂಚನೆಗಳೆಂದರೆ ಸಾಕು, ಅವು ಕೆಟ್ಟವೇ ಇರಬೇಕೆಂದು ಮನವರಿಕೆಗೊಂಡ, ಭವಿಷ್ಯತ್ತಿನ ಆಶೆಗಿಂತ ಹಿಂದಿನ ಅನ್ಯಾಯಗಳನ್ನೇ ಮತ್ತೂ ಮತ್ತೂ ಚಿಂತಿಸಿಕೊಳ್ಳುವ ಜನತೆಯೊಡನೆ,ಅವರು ವ್ಯವಹರಿಸಬೇಕಾಗಿದೆ. ಹಿಂದೀ ರಾಷ್ಟ್ರೀಯ ಕಾಂಗ್ರೆಸ ಮತ್ತು ಮುಸ್ಲಿಂ ಲೀಗಿನ ನಡುವಣ ಕ್ರುದ್ಧ ವಿರೋಧ, ಮತ್ತು ಮುಸ್ಲಿಂಲೀಗದ ಹಿಂದುಸ್ತಾನವನ್ನು ವಿಭಜಿಸಿ ಪಾಕಿಸ್ತಾನವೆಂಬ ಪ್ರತ್ಯೇಕ ಮುಸ್ಲಿಮ ರಾಷ್ಟ್ರವನ್ನು ನಿರ್ಮಿಸಬೇಕೆಂಬ—ನನ್ನ ಅಭಿಪ್ರಾಯದಲ್ಲಿ ಹುಚ್ಚುಚ್ಚಾರ— ಬೇಡಿಕೆಯಿದೆ. ಹಿಂದೂ ಸಂಪ್ರದಾಯವಾದಿ ಸಮಾಜದ ಪುರಾತನ ಕಾಲವಿರುದ್ಧ ಪದ್ಧತಿಯನ್ನು ನೆನಸಿಕೊಂಡರೆ ಬಹಳ ಕಠಿಣವೇ ಎನಿಸುವ ಹಿಂದುಳಿದ ವರ್ಗಗಳ ಸಾಮಾಜಿಕ ಸ್ಥಾನದ ಸಮಸ್ಯೆಯಿದೆ. ಆ ಮೇಲೆ ಆಂಗ್ಲೋ-ಇಂಡಿಯನ್, ಕ್ರಿಶ್ಚನ್ ಮತ್ತು ಸೀಖ ಮೊದಲಾದ ಅಲ್ಪಸಂಖ್ಯಾಕರ ವಿಶೇಷ ಹಕ್ಕುಗಳ ಪ್ರಶ್ನೆಯಿದೆ. ನರೇಂದ್ರರು ಬ್ರಿಟಿಶ ಚಕ್ರವರ್ತಿಯೊಡನೆ ಮಾಡಿಕೊಂಡ ಒಡಂಬಡಿಕೆಗಳುಂಟು. ಅವರು ತಮ್ಮ ವಂಶಪರಂಪರಾಗತವಾದ, ಬಹಳ ಮಟ್ಟಿಗೆ ಅಯೋಗ್ಯವಾದ ಅಧಿಕಾರಗಳನ್ನು ಉಳಿಸಿಕೊಳ್ಳಲು ಕೊನೆಯವರೆಗೂ ಹೆಣಗುತ್ತ ಹೋಗುವದರಲ್ಲಿ ಸಂದೇಹವಿಲ್ಲ. ಇನ್ನು ಹಿಂದುಸ್ತಾನದಲ್ಲಿರುವ ಯುರೋಪಿಯನ್ ಸಮಾಜದ ಹಿತಸಂಬಂಧ. ಇಂಗ್ಲಂಡಿನಲ್ಲೆ ಪ್ರಬಲ-ಶಕ್ತಿಗಳ ಬೆಂಬಲವುಳ್ಳ ಈ ಸಮಾಜದ ಶಕ್ತಿಯೂ ಲೆಕ್ಕಿಸತಕ್ಕದ್ದೆ. ನಾಳೆ ಯುರೋಪಿನಲ್ಲೆ ಹೇಗಾದರೂ ಒಪ್ಪಂದಗಳನ್ನು ಮಾಡಿಕೊಳ್ಳಬೇಕಾಗಿರುವ ಗುಂಪುಗಳಷ್ಟೆ ಸಂಕೀರ್ಣವೂ ಜಟಿಲವೂ ದುರಾರಾಧ್ಯವೂ ಆದ ಗಂಪುಗಳೊಡನೆ ಮಾತುಕತೆಗಳನ್ನು ನಡೆಸಬೇಕಾಗುವುದು.

ಮಹತ್ವವುಳ್ಳ ಎಲ್ಲ ಹಿಂದೀ ನಾಯಕರೂ ಹಿಂದುಸ್ತಾನದ ಸ್ವಾತಂತ್ರ್ಯದ ವಿಷಯಕ್ಕೆ ಒಂದೇ ಅಭಿಪ್ರಾಯವುಳ್ಳವರಾಗಿದ್ದಾರೆ. ಸಾಮಂತ ಸ್ವರಾಜ್ಯದ ಬಡಬಡಿಕೆಯಿಂದ ಕೆಲಸ ಬಗೆಹರಿಯುವ ದಿನ ಕಳೆದು ಹೋಗಿ ಇತಿಹಾಸ ಬಹಳ ಮುಂದುವರಿದಿದೆಯೆಂದು ಎಲ್ಲರೂ ಒಪ್ಪುತ್ತಾರೆ. ಹಿಂದುಸ್ತಾನ ಬ್ರಿಟಿಶ ಕಾಮನವೆಲ್ತದ ಸಂಬಂಧವನ್ನು ಅಂಗೀಕರಿಸುವದಿದ್ದರೆ ಸ್ವತಂತ್ರ ರಾಷ್ಟ್ರವಾಗಿ ಸ್ವೇಚ್ಛೆಯಿಂದ ಹಾಗೆ ನಿರ್ಧರಿಸಬೇಕು. ಬ್ರಿಟಿಶ ಮಂತ್ರಿಮಂಡಲ ಸಮಿತಿಯವರು ತಮ್ಮ ಮಾತುಕತೆಗಳಿಗೆ ಈ ನಿಲುಮೆಯ ಅಂಗೀಕಾರವನ್ನೆ ತಳಹದಿಯಾಗಿಟ್ಟುಕೊಂಡು ಕೆಲಸ ಪ್ರಾರಂಭಿಸಲು ಸಿದ್ಧರಾಗಿರದಿದ್ದರೆ ಅವರು ಮನೆಯಲ್ಲಿಯೇ ಉಳಿದುಬಿಡುವದು ಲೇಸು.

ಸ್ವಾತಂತ್ರ್ಯವೇ ತಳಹದಿ

ಹಿಂದುಸ್ತಾನದ ಸ್ಥಿತಿಗತಿಯ ಮನೋಭೂಮಿಕೆಯೇ, ನನ್ನ ಅಭಿಪ್ರಾಯದಲ್ಲಿ, ಸ್ವಾತಂತ್ರ್ಯದ ಹೊರತು ಬೇರಾವ ತಳಹದಿಯಿಂದಲೂ ಮಾತುಕತೆ ಮೊದಲು ಮಾಡಲು ಬ್ರಿಟಿಶ ಮಂತ್ರಿಸಮಿತಿಗೆ ಅವಕಾಶಕೊಡುವದಿಲ್ಲ. ಆಗ ಅವರನ್ನು ಎದುರಿಸುವ ಪ್ರಶ್ನೆಯಿದು: ತಾವು ಮಾತುಕತೆ ನಡೆಸಬಹುದಾದ ಜನರನ್ನು ಕಂಡುಹಿಡಿಯುವದು. ಇದು, ಕೆಲಮಟ್ಟಿಗೆ, ಸದ್ಯದ ಚುನಾವಣೆಗಳ ಫಲಿತಾಂಶವನ್ನು ಅವಲಂಬಿಸಿದ್ದರೆ ಇನ್ನು ಕೆಲಮಟ್ಟಿಗೆ ಪೂರ್ಣ ಹಿಂದೀಕೃತವಾದ ಕಾರ್ಯಕಾರಿ ಮಂಡಲವನ್ನು ಸ್ಥಾಪಿಸುವಲ್ಲಿ ವ್ಹಾಯಿಸರಾಯರು ಪಡೆಯುವ ಯಶಸ್ಸನ್ನೂ ಹೊಂದಿಕೊಂಡಿವೆ. ಈ ಕಾರ್ಯಕಾರಿ ಮಂಡಲ ವ್ಹಾಯಿಸರಾಯರ ಆಯ್ಕೆಯಿಂದಾಗಿರದೆ, ಹಿಂದೀ ಜನಾಭಿಪ್ರಾಯದ ವಿಶ್ವಾಸವಾದ ಗುಂಪುಗಳ ಪ್ರತಿನಿಧಿಗಳನ್ನೊಳಗೊಂಡಿರುವದು. ಇಲ್ಲಿ ಜಿನ್ನಾಸಾಹೇಬರು ಪಾಕಿಸ್ತಾನವನ್ನು ಮೂಲಭೂತ ತತ್ವವೆಂದು ಒಪ್ಪಿದ ಹೊರತು ಮಾತುಕತೆ ಪ್ರಾರಂಭಿಸಲು ಕೂಡ ಸಿದ್ಧರಿಲ್ಲದಿರುವುದೊಂದು ತೊಡಕು. ಸೂತ್ರಚಾಲನೆ, ಕುತಂತ್ರ ಮೊದಲಾದವುಗಳ ತೆಂದರೆಗಳು ಬೇರೆ. ಒಪ್ಪಂದಕ್ಕೆ ಬರುವ ಸುದೀರ್ಘ ಪ್ರಯತ್ನದ ಪ್ರತಿನಿಮಿಷದಲ್ಲಿಯೂ ಇವು ಮುನ್ನಡೆಯನ್ನು ಹಿಂಜಗ್ಗುತ್ತ ಹೋಗುವದರಲ್ಲಿ ಸಂದೇಹವಿಲ್ಲ. ಸಾಲದ್ದಕ್ಕೆ ಹಾರಿಕೆಯ ಸುದ್ದಿಗಳ ತಂಟೆ. ಜಗತ್ತಿನಲ್ಲಿ ಹಾರಿಕೆಯ ಸುದ್ದಿಗಳ ದೊಡ್ಡ ತವರೂರುಗಳಲ್ಲಿ ಹಿಂದುಸ್ತಾನವೂ ಒಂದು. ಸುದ್ದಿಗಳು ಬಾಯಿಂದ ಬಾಯಿಗೆ ಬೆಳೆಯುತ್ತ ಸಾಗುತ್ತ ಆದರಿಂದುಂಟಾಗುವ ಪ್ರಚಂಡ ಬೊಬ್ಬಾಟದಿಂದ ಮಾತುಕತೆಗಳ ಸಾಫಲ್ಯದ ದಾರಿಯಲ್ಲಿ ಇಲ್ಲದ ತೊಡಕುಗಳು ಎದ್ದು ನಿಲ್ಲುತ್ತವೆ.

ನಾಗರಿಕತೆ ಹಣೆಬರಹದ ನಿರ್ಣಯ

ಹೌದು, ಸಾಫಲ್ಯ—ಸಾಫಲ್ಯ ದೊರಕಿಯೇ ತೀರಬೇಕು. ಸಂಬಂಧಪಟ್ಟ ಪಕ್ಷಗಳಲ್ಲಿ ಯಾರಿಗೂ ಅಸಫಲತೆಯ ಚಿಂತನೆಯನ್ನು ಕೂಡಮಾಡುವ ಧೈರ್ಯವಿಲ್ಲ. ಆದ್ದರಿಂದ ಇದರಲ್ಲಿ ಬ್ರಿಟಿಶರ ಹೊಣೆ ಘನತರವಾಗಿದೆಯೆಂದು ಒಪ್ಪುವೆನಾದರೂ ಎಲ್ಲ ಅಭಿಪ್ರಾಯಗಳ ಹಿಂದೀಯರ ಹೊಣೆಯೇನು ಕಡಿಮೆಯಲ್ಲವೆಂದು ವಿನಯದಿಂದ ಹೇಳಬಯಸುತ್ತೇನೆ.

ಅವರೂ ಬ್ರಿಟಿಶ ಮಂತ್ರಿ ಸಮಿತಿಯೂ ಸಿದ್ಧಗೊಳಿಸುತ್ತಿರುವದು ಹಿಂದೀ ರಾಜ್ಯಘಟನೆಯನ್ನಷ್ಟೇ ಅಲ್ಲ: ಅವರು ನಾಗರಿಕತೆಯ ಹಣೆಬರೆಹವನ್ನೇ ಇದರಲ್ಲಿ ನಿರ್ಣಯಿಸುತ್ತಿರುವರು. ಆದುದರಿಂದ ಅವರಲ್ಲಿ ಪ್ರತಿಯೊಬ್ಬರೂ ಮಾತುಕತೆಗಳಲ್ಲಿ ಪ್ರವೇಶಿಸುವಾಗ ತನ್ನ ಬೇಡಿಕೆಯ ಪ್ರತಿಯೊಂದು ಭಾಗವನ್ನು ನೂರಕ್ಕೆ ನೂರರಷ್ಟು ಪಡೆದುತೀರುವೆನೆಂದು ಹಟ ತೊಡದೆ, ನಾಲ್ಕು ಜನ ಮೆಚ್ಚುವ ಯೋಗ್ಯ

ಪುಟ ೧೫ಕ್ಕೆ

★ ಪಾತಾಳ ಯಂತ್ರ

..........................(ಬರೆಹಗಾರ: ಶ್ರೀರಾಮು ಪಾಟೀಲ, ವಿಜಯಪುರ)..........................

ಮಾದನು ಗಟಾರ ಬಳಿಯುತ್ತಿದ್ದನು. ಎರಡು ಕೈಗಳು, ಎರಡು ಕಾಲ್ಗಳು, ಒಂದು ಮೊಂಡ ತೆಂಗಿನಹಿಡಿ ಮತ್ತು ಬಸಿಯಾಕಾರದ ಒಂದು ತಗಡು ಇಷ್ಟೇ ಅವನ ಸಾಧನಗಳು. ಗಟಾರದಲ್ಲಿ ಇಳಿದು ಒಂದು ಕಾಲ ಮುಂದೆ ಇನ್ನೊಂದಿಟ್ಟು ಎದುರು ಬರುತ್ತಿರುವ ನೀರಿನ ಪ್ರವಾಹವನ್ನು ಕಸಬರಿಗೆಯಿಂದ ಎಳೆದನು. ಬರಿ ಕರೇ ನೀರು— ಊರ ಪ್ರವಾಹೀಪಾಪವು– ಹರಿದುಹೋಯಿತು. ಬಾರಿಗೆಯನ್ನು ಬದಿಗಿಟ್ಟು ಕಾಲನಿಟ್ಟ ಎಡೆಯಲ್ಲಿ ಒಟ್ಟುಗೂಡಿದ ರಾಡಿಯನ್ನು, ಘನಪಾಪವನ್ನು, ತಗಡಿನಿಂದ ಕೆದರಿ, ಎಡಗೈ ಹಚ್ಚಿ, ಎತ್ತಿ, ಗಟಾರದಲ್ಲಿ ಬೀಳದಂತೆ ಗಟಾರದ ತುದಿಗೆ ಒಗೆದನು. ಅಲ್ಲಿಯ ರಾಡಿ ಮುಗಿದಕೂಡಲೇ ಮೇಲೆ ಬಂದು, ಬಗ್ಗಿ, ಬಾರಿಗೆಯನ್ನು ಗಟಾರದಲ್ಲಿ ಹಾಕಿ ಎಳೆಯುತ್ತ ರಾಡಿ ನುಗಿಸುತ್ತ, ನೀರು ಕಲಕಿಸುತ್ತ, ಹುಳ, ನೊಣ, ಸೊರಜಗಳನ್ನು ಗಮ್ಮನೇ ಎಬ್ಬಿಸುತ್ತ ಗಟಾರದ ತುದಿಗೆ ಬಂದನು. ಅಲ್ಲಿಗೆ ಗಟಾರ ಮುಗಿದಿರಲಿಲ್ಲ. ಅದು ಬೀದಿಯ ಕೆಳಗಿಂದ ಸಾಗಿ ಆಚೆಯ ಗಟಾರದೊಡನೆ ಬೆರೆತುಕೊಂಡಿತ್ತು. ಮಾದನ ಮೊಂಡ ಬಾರಿಗೆಯು ಸಾಲಲಿಲ್ಲ.

" ಹೀ! ಹೋ!! " ಮಾದ ಚೀರಿದನು.

ಬಲಕಿನ ಒಂದು ಬಾಗಿಲು ಮುಚ್ಚಿತ್ತು ಅದು ಒಮ್ಮೆಲೇ ತೆರೆದು, ಒಳಗಿಂದ ಒಬ್ಬ ಹೆಂಗಸು ಇಣುಕಿ ನೋಡಿದಳು. ಆ ಮೇಲೆ ಧೈರ್ಯವಾಗಿ ಹೊರಗೆ ಬಂದಳು.

" ಯಾರು ಚೀರಿದರು? '' ಅವಳು ಮಾದನನ್ನು ಕೇಳಿದಳು.

" ನಾ, ಯವ್ವಾ! "

" ಏನಾಯಿತು ಚೀರಲಿಕ್ಕೆ? "

" ಅಲ್ಲಿ.... ಅವಳಿಗೆ ಬಾಯೆಂದೆ. "

" ಹಾ! ಹೀ!! ಅಂದರೆ ಬಾ ಅಂತೇನು, ಅರ್ಥ? "

"ಹೌದು ಯವ್ವಾ....ಹಾ! ಅಕಾ!! ಬಂದಳು!!" ಎಂದನ್ನುತ್ತ ತನ್ನ ಹೆಂಡತಿ ಬರುವದನ್ನು ತೋರಿಸಿದನು. "ಬಾ! ಗಡಾನೇ ಬಾ!! "

ಅವಳ ಕಬ್ಬಿಣದ ಉಕ್ಕಾಡಿಯು ಬರುವಷ್ಟು ವೇಗದಿಂದ ಅವಳು ಹೆಜ್ಜೆಯನ್ನಿಕ್ಕುತ್ತಿದ್ದಳು. ಅದು ಬರುವಾಗ ಮುನಿಸಿಪಾಲಿಟಿಯ ಆಡಳಿತೆಯಲ್ಲಿದ್ದ ಹಳಿಗಾಡಿಯಂತೆ ಒದರುತಿತ್ತು. ಅದು ಕಸ, ರವದೆ, ಕಲ್ಲು, ಬಾಳೇಸೊಪ್ಪು, ಪತ್ರಾವಳಿ, ದೆಂಟು ಮತ್ತು ಕರೇ ಉಸುಕುಗಳಿಂದ ಅರ್ಧ ತುಂಬಿತ್ತು. ಅವಳು ಗಾಡಿಯನ್ನು ಮಾದನ ಹತ್ತಿರ ನಿಲ್ಲಿಸಿ, ತೆರೆದ ಮನೆಯ ಬಾಗಿಲದ ಹತ್ತಿರ ಬಂದಳು.

"ರೊಟ್ಟಿ ನೀಡಿರಿ ತಾಯಿ" ಅಂದಳು.

"ಅಲ್ಲಿ ನೋಡು!'' ಬಾಯಿ ಅಂದಳು. "ಗಟಾರದ ನೀರು ಕೆರೆ ನಿಂತಿದೆ. ಅದನ್ನು ಬಳಿ, ಬಕ್ಕರಿ ಬೇಡು."

"ಅದನ್ನು ನಾಳೆ ಬಳೀತೀನಿ, ಉದ್ದ ಕೋಲು ತರಾಕ ನೆಪ್ಪ ಆಗಲಿಲ್ಲ."

"ಅಂದರ ಈ ದಿನದ ಪಗಾರ ಹರಾಮೀ ತಿಂಕೀರೇನು?"

"ಏನ ತಾಯೀ. ಮಾದ ಮೂರು ಮೈಲು ಗಟಾರ ಬಳದಾನ. ನಾ ಎರಡ ಮೈಲು ಬಳದೀನಿ. ಈ ನಾಲ್ಕು ಮಾರ ಗಟಾರ ಬಳೀದಿದ್ದರ ಹರಾಮೀ ಪಗಾರ ಆಯಿತಾ? ಏನ ಬಾಯೀ?"

"ನಿಮಗ ಪಗಾರ ಅಲ್ಲದ ಬಕ್ಕರೆ ಯಾಕ?''

"ನೀವೇನು ನಮಗ ಮಾಡಿ ಇಡತೀರಾ ಬಾಯೀ? ಉಳದದ್ದು ಕೆಡಸಬಾರದು ಅಂತ ನಿಮ್ಮ ಮನೇ ಮುಂದೆ ಬಿದ್ದ ನಾಯಿಗೆ ಹಾಕುದುಲ್ಲ? ನಮಗೊಂದು ತುಣುಕು ಕೊಟ್ಟರ ನಿಮ್ಮದು ಕಮ್ಮೀ ಆಗತದ ನೋಡ್ರಿ!''

"ಹೀಗೆ ಬಿಕ್ಕೀಬೇಡಿ ತಿನ್ನೋದಕ್ಕಿಂತ ಉರುಲು ಹಾಕಿಕೊಂಡು ಸಾಯೋದೇನು ಕೆಡಕು!"

ಮಾದನು ಗಟಾರ ಬಳಿಯುತಿದ್ದನು. ಹೊಲಸಿನ ಕೂಡ ಬಂದ ಒಂದು ಹುಳು ಗಟಾರದ ದಂಡೆಗೆ ಬಿದ್ದು ಲಟಪಟನೆ ಒದ್ದಾಡುತ್ತ ಮತ್ತೆ ನೀರಿನಲ್ಲಿಯೇ ಬಿದ್ದು ಪ್ರವಾಹದ ಗುಂಟ ಹರಿದು ಹೋಯಿತು.

"ಅಕಾ ನೋಡು ತಾಯಿ,'' ಹರಿದುಹೋಗುತ್ತಿರುವ ಹುಳವನ್ನು ತೋರಿಸುತ್ತ ಅವಳೆಂದಳು. "ಆ ಹುಳ ಕೂಡ ಇರಬೇಕು ಅಂತ ಲಟಪಟ ಒದ್ದಾಡಿತು. ನಾವು ಸಾಯಬೇಕಂತೀರಿ, ಏನ ತಾಯಿ?''

ಬಾಯಿಯ ಮನಸ್ಸು ಕರಗಿತೇನೋ! "ಇಲ್ಲೇ ನಿಲ್ಲು" ಎಂದು ಒಳಕ್ಕೆ ಹೋದಳು. ಅವಳು ಒಳಗೆ ಹೋದ ತರುವಾಯ ಮಾದನು ಗಟಾರದ ಅಂಚಿಗಿರುವ ಎಲ್ಲ ಹೊಲಸನ್ನು ಕಬ್ಬಿಣದ ಉಕ್ಕುಗಾಡಿಯಲ್ಲಿ ತುಂಬಿ ಅದನ್ನು ಎರಡು ಕೈಗಳಿಂದ ಎತ್ತಿಹಿಡಿದು, "ನಾ ಆ ಫಾಟಕದ ಹಂತೀಕ ಇರತೀನಿ, ನೀಡಿಸಿಕೊಂಡು ಗಡಾನೇ ಬಾ" ಎಂದು ಅದನ್ನು ಮುಂಗಾಲಿಯ ಮೇಲೆ ಉರುಳಿಸುತ್ತ ಹೋದನು. ಅವನು ಹೋದ ಒಂದು ಮಿನಿಟಿನಲ್ಲಿ ಬಾಯಿಯ ಗಂಡ ರಾಯರು ಅಟ್ಟದಿಂದ ಕೆಳಗಿಳಿದು ಬಂದರು. ಆತ್ತಿತ್ತ ನೋಡಿದರು. ಮೂಲೆಯಲ್ಲಿ ಇರಬೇಕಾದ ಬೂಟುಗಳು ಇರಲಿಲ್ಲ.

"ಎನ ಏ! ನನ್ನ ಬೂಟು!!''

ಕೈಯಲ್ಲಿ ಬಕ್ಕರೆಯನ್ನು ಹಿಡಿದ ಹೆಂಡತಿಯು ಪಡಸಾಲೆಗೆ ಬಂದಳು. "ಎಲಾ! ನಾ ಹೋಗುವಾಗ ಇದ್ದವು! ಈಗ...." ಗಟಾರಗಿತ್ತಿಗೆ ಅಂದಳು, "ಏ ಕಳ್ಳೀ! ಒಳ್ಳೆ ಮಾತಿನಿಂದ ಕೊಡು.'' ಅವಳ ಗಂಡನು ಹೋದುದನ್ನು ನೋಡಿ, "ನೋಡಿರಿ! ಇವಳು ಇಲ್ಲಿ ನಿಂತು ಗಂಡನಕೂಡ ಬೂಟು ಸಾಗಿಸಿಬಿಟ್ಟಾಳ ನೋಡಿರಿ.''

"ಏ! ಸುಮ್ಮನೇ ಕೊಡು. ಇಲ್ಲದಿದ್ದರೆ ಪರಿಣಾಮ ಸರಿಯಾಗಲಿಕ್ಕಿಲ್ಲ ನೋಡು," ರಾಯರೆಂದರು.

"ಇದೇನ ಬಾಯಿ? ಬಕ್ಕರೀ ನೀಡತೀನಿ ನಿಲ್ಲೂ ಅಂತ ನಿಲ್ಲಿಸಿ ನಮ್ಮ ಮೇಲೆ ತುಡುಗು ಹೊರಸೋದಾ? ಮಾದ ಗಾಡಿ ತಗೊಂಡ ಹೋದ. ಅವನ್ನೂ ತಪಾಸಿಸರಿ. ಒದರತೀನಿ.... ಹೀ.... ಹೋ.... "

ಅವಳ ಎತ್ತರವಾದ ಧನಿಯು ಮಾದನನ್ನೂ ಓಣಿಯಲ್ಲಿರುವ ಬೇರೆಯವರನ್ನೂ ಕೂಡಿಸಿತು. ಬಂದ ಹೆಂಗಸರಲ್ಲಿ ತಲೆಗೊಬ್ಬರು ಮಾತನಾಡಹತ್ತಿದರು.

"ಮೊನ್ನೆ ನಾನು ಅಗದೀ ಹೊಸಾ ಕೋರಾ ಚಾದರು ಹಿತ್ತಲಲ್ಲಿ ಒಣಹಾಕಿದ್ದೆ. ಅಡುಗೇ ಮನೆಗೆ ಹೋಗಿ ಕುಂಕುಮಾ ಹಚ್ಚಿಕೊಂಡು ಬರೋದರೊಳಗೆ ಯಾರೊ ಹೊತ್ತಿದ್ದರು,'' ಒಬ್ಬಳೆಂದಳು.

"ನಾನು ಮುತ್ತೈದೆಯಾಗಿ ಆ ದೇಸಾಯರ ಮನೆಗೆ ಮೊನ್ನೆ ಮಧ್ಯಾಹ್ನ ಊಟಕ್ಕೆ ಹೋಗಿದ್ದೆ ಬರೇ ಅರ್ಧ ತಾಸು. ಬರೋದರೊಳಗೆ ಕಿಡಕಿಯಲ್ಲಿ ಇಟ್ಟ ಎರಡು ಕನ್ನಡಿ, ಒಂದು ಹಣಗೆ ಮತ್ತು ಒಂದು ಕುಂಕುಮ ಕರಡಿಗೆ ಎಲ್ಲವನ್ನೂ ನೆಗವಿಬಿಟ್ಟಿದ್ದರು. ಕೈಹಾಕಿದರೆ ನಿಲುಕತಿದ್ದವು,'' ಇನ್ನೊಬ್ಬಳೆಂದಳು.

"ನಿನ್ನಿನ ದಿನ ನಾ ಸಿನೇಮಾಕ್ಕೆ ಹೋಗಿದ್ದೆ. ನಾಡಾಗಿಲ್ಲದ ಮಂದಿ ಬಂದಿರತದ ಅಂತ ನಾನು ಮನೆಗೆ ಬಂದ ಮೇಲೆ ಸೀರೆ ಕಳೆದು ಪಡಸಾಲೆ ಮೂಲೆಯಲ್ಲಿ ಇಟ್ಟಿದ್ದೆ. ಪತ್ತೆಯಿಲ್ಲದ ಯಾರೋ ಹೊತ್ತರು ನೋಡಿರಿ," ಮೂರನೆಯವಳೆಂದಳು.

"ಈ ಗಟಾರ ಬಳಿವವರ ಹೊರತು ಈ ಸಣ್ಣ ಪುಟ್ಟ ತುಡುಗ ಆಗೋದೇ ಇಲ್ಲ," ನಾಲ್ಕನೆಯವಳು ಒಂದು ಸಿದ್ಧಾಂತಕ್ಕೆ ಬಂದಳು. "ಇವರು ಗಟಾರ ಬಳೆಯಲಿಕ್ಕೆ ಬಂದರೂ ಇವರ ಕಣ್ಣು ಯಾವಾಗಲೂ ಮಂದೀ ಮನೆ ಕಡೆಗಿರತದ ಸ್ವಲ್ಪ ಉಲುವು ಕಡಿಮೆ ಆಯಿತು ಅಂದರೆ, ಎತ್ತಿದರು. ಮತ್ತು ಇವರು ಎತ್ತಿದ ಸಾಮಾನು ಸಾಗಸಲಿಕ್ಕೆ ಒಬ್ಬನನ್ನು ಇಟ್ಟೇಬಿಟ್ಟಿರತಾರ. ಅವನ ಕೈಯಲ್ಲಿ ಕೊಟ್ಟು ಪಾರ, ಬೂಟು ಇವರ ಹೊರಹೊರತಾಗಿ ಎಲ್ಲಿಯೂ ಹೋಗಿಲ್ಲ.''

"ಹಾಗಾರ ಈ ತುಡುಗೆಲ್ಲ ನಾ ಮಾಡಿದ್ನಾ ಯವ್ವಾ?''

"ನಿನ್ನ ಹೊರತಾಗಿ ಹೋಗಿಲ್ಲ,'' ಬಕ್ಕರೆ ಬಾಯಿ ಉಸುರಿದಳು.

"ಏನು ಬಾಯಿ ಹೀಗ ಅಂದರ!" ಎಂದು ಮಾದನ ಹೆಂಡತಿ ಕೆಳಕ್ಕೆ ಕುಳಿತು ತಲೆ ಹಿಡಿದುಕೊಂಡು ದೊಡ್ಡ ದನಿಯಿಂದ ಅಳಹತ್ತಿದಳು.

"ಸಾಕು ಡೋಕಾರಿತನ!" ಬಕ್ಕರೆ ಬಾಯಿ ಅಂದಳು.

"ಬಾಯಿ!'' ಮಾದ ಹೆಂಡತಿಯನ್ನು ಎಬ್ಬಿಸುತ್ತ ಅಂದನು. "ನಾವು ತುಡುಗು ಮಾಡೀವಿ ಅಂತ ಇದ್ದರ ಪೋಲೀಸ ವರ್ದೀ ಕುಡರಿ. ಶಿಕ್ಷಾ ಮಾಡಸರಿ.... ಏಳ.... ಏಳು.''

"ಏ," ಮುಂದೆ ಬಂದು ರಾಯರು ಗುಡುಗಿದರು. "ನನಗ ಫೌಜದಾರರ ಗುರುತು ಅದ. ಚೀಫ ಆಫೀಸರರು ನನ್ನ ಗೆಳೆಯ. ನಿನಗ ಶಿಕ್ಷಾ ಆಗೂದಲ್ಲದ ದಂಡ ಆಗಿ ಕೆಲಸಾ ಕಳಕೊಂಡು ಹೋದೀ ನೋಡಿಕೋ!"

"ಮಾದೇವನ ಗುರುತು ಇದ್ದರ ನಮ್ಮ ಜೀವಾ ಅಟ ಗಡಾನ ಒಯ್ಯ ಅಂತ ಹೇಳರಿ,'' ಮಾದ ನುಡಿದನು.

"ಒಳ್ಳೆದು ನಿನ್ನ ಉದ್ಧಟತನ ನೋಡತೀನಿ,'' ಎಂದು ರಾಯರು ಹರಕ ಬೂಟುಗಳನ್ನು ಹಾಕಿಕೊಂಡು ಅವನ್ನೆಳೆಯುತ್ತ ಹೊರಕ್ಕೆ ಹೋದರು. ಬೂಟುಗಳೆಬ್ಬಿಸಿದ ಧೂಲಿಯ ಮೋಡವು ಗುಡುಗು ಅರಗಿಸಿದಂತೆ ಅವರನ್ನು ನುಂಗಿತು. ಜನಜಂಗುಳಿಯೂ ವಿಲೀನವಾಯಿತು. ಬಾಯಿಯು ತಂದ ಬಕ್ಕರೆಯನ್ನು ಒಳಕ್ಕೆ ಒಯ್ದಳು.

"ನೀರು ಹಿಂಗು ನಿಂತಿತಲ್ಲ'' ಮಾದ ಅಂದನು.

"ನಾಳೆ ಉದ್ದ ಕೋಲು ತಂದು ಬಳದರಾತ ಬಾ. ಈ ಓಣಿಯಾಗ ಏಟ ಮಾಡಿದರೂ ಅಟ ಐತಿ."

* * *

ಇಂದು ಬುಧವಾರ. ಮುನಿಸಿಪಾಲಿಟಿಯ ಎದುರು ಗಟಾರ ಬಳಿಪವರು, ಗುಡಿಸುವವರು, ಭಂಗಿಯವರು ಮತ್ತು ಚಿಲ್ಲರೆ ಭಂಗಿಯವರು ಕುರಿಗಳಂತೆ, ನೆಲದ ಮೇಲೆ, ಹರಳಿನ ಗುಂಪಿಗಳ ಮೇಲೆ, ಬಾಗಿಲುಗಳ ಮೆಟ್ಟಲುಗಳ ಮೇಲೆ ಮತ್ತು ಗೋಡೆಗಳಿಗೆ, ನೀರ ಗಾಡಿಗಳಿಗೆ ಅನಿ ನಿಂತಿದ್ದಾರೆ, ಕುಳಿತಿದ್ದಾರೆ. ತಮ್ಮಲ್ಲಿ ಒಕ್ಕಟ್ಟು ಇಲ್ಲವೆಂದು ಬಹಿರಂಗಪಡಿಸಲಿಕ್ಕೆ ಅಲ್ಲಲ್ಲಿ ನಾಲ್ಕು ನಾಲ್ಕು ಹತ್ತುಹತ್ತು ಜನರು ಕಲೆತಿದ್ದಾರೆ. ಕೆಲವು ಸ್ವಾತಂತ್ರ್ಯಪ್ರಿಯ ತರುಣ ಗಟಾರಿಗರು ಕುಂಬಿಗಳ ಮೇಲೆ ಆವಾರದ ಗೋಡೆಗಳ ಮೇಲೆ ಕುಳಿತಿದ್ದಾರೆ. ಅವರು ಮಾತನಾಡುವ ಒಟ್ಟು ಸಪ್ಪಳವು ಮುಂಜಾನೆ ಗಿಡಗಳ ಮೇಲೆ ಕಿಲಿಬಿಲಿಗುಡುವ ಗುಬ್ಬಿಗಳ ಒಟ್ಟು ಸಪ್ಪಳವನ್ನು ಹೋಲುವದು. ಚೀಫ ಆಫೀಸರರು ಬಂದರೂ ಕೂಡ ಅವರ ಮಾತುಗಳು ನಿಲ್ಲದೇ ಆದರ ಎತ್ತರ ಕಡಿಮೆಯಾಯಿತು ಮಾತ್ರ. ಒಬ್ಬ ಕಾರಕೂನನು ಎಲ್ಲ ತರದ ನಾಣ್ಯಗಳನ್ನು ಅಲ್ಲಲ್ಲಿ ಸುರುವಿದನು. ಇನ್ನೊಬ್ಬನು ನಗರ ಸಭೆಯ ವಿವಿಧ ಹೊಲಸು ಬಳಿಮೆಗಾರರ ಹೆಸರುಗೊಂಡು ಕರೆಯಹತ್ತಿದನು. ಮೊದಲು ಐದಾರು ಜನರು ವಾರಗೂಲಿ ತಕ್ಕೊಂಡು ಹೋದ ಮೇಲೆ ಮಾದನ ಪಾಳಿ ಬಂದಿತು.

"ನಿನ್ನ ಏಳು ದಿನದ ಕೂಲಿಯೊಳಗ ಎರಡು ದಿನ ಖಾಡಾ ಅದೆ."

"ನಾ ಒಂದಿನ ತಪ್ಪಿಲ್ಲ."

"ಕೆಲಸ ತಪ್ಪಸದಿದ್ದರೂ ಹಾಜರೀ ತಪ್ಪಿರಬೇಕು. ಎರಡೂ ಒಂದೇ. ನಿನ್ನ ಹೆಂಡತಿ ಐದು ದಿನ ತಪ್ಪಿಸಿದಳು. ಇಬ್ಬರದೂ ಕೂಡಿ ಎರಡೂವರೆ ರೂಪಾಯಿಯಾಯಿತು. ಇಸುಗೋ.''

"ಇದು ಅನ್ನೀ ಆಗತತೆ ಯಪ್ಪಾ. ನನ್ನ ಹೆಂಡತಿ....'' ಮುಂದೆ ಅವನ ಕಂಠ ರುದ್ಧವಾಗಿ, "ಯಪ್ಪಾ ನನ್ನ ಹೆಂಡತಿ ಪರಭಾರಾ ದಗದ ಬಂದಾಳ. ಆ ಕಂತ್ರಾಟೆನ್ನ ಕೇಳರಿ."

"ಹಾಜರೀ ತಪ್ಪಿಸಿದರ ಖಾಡಾ, ತಕ್ಕೋ....ಇನ್ನ ಮುಂದಿನವ.......''

ಮಾದನ ಬಾಯಿಂದ ಮಾತುಗಳು ಹೊರಡಲಿಲ್ಲ. ಆ ರೂಪಾಯಿಗಳನ್ನು ನೋವಿಗೆ ಪಟ್ಟಿ ಕಟ್ಟುವ ವಿಧಾನದಂತೆ ಮೆಲ್ಲಗೆ ಕೈಯಲ್ಲಿ ತಕ್ಕೊಂಡು ಒಂದು ಹರಕ ಅರಿವೆಯಲ್ಲಿ ಕಟ್ಟಿ ಅಲ್ಲಿಂದ ಈಚಿಗೆ ಸರಿದನು. ಜನಜಂಗುಳಿಯ ಕಡೆಗೆ ಒಂದು ಸಲ ಕಣ್ಣನೋಟವನ್ನು ಬೀರಿದನು. ತನ್ನ ವಿಷಯದಲ್ಲಿ ಅವರೆಲ್ಲರಲ್ಲಿ ಅನುಕಂಪವಿದ್ದಂತೆ ಅವನಿಗೆ ತೋರಿತು. ತನ್ನ ಮುಂದಾಳುತನವನ್ನು ಅವರೆಲ್ಲರೂ ಬಯಸುವಂತೆ ಅವರ ನೋಟಗಳಲ್ಲಿ ಬಾಯಾರಿಕೆ ತೋರಿತು. ಅವರೆಲ್ಲರನ್ನೂ ಒಂದೇ ಒಂದು ಹೊಡೆತದಿಂದ ಕುರಿಗಳಂತೆ ಸಾಗಿಸುವ ಹಂಚಿಕೆ ಹಾಕಿದನು. ಅವನಲ್ಲಿ ಅಸದಳವಾದ ಸ್ಫೂರ್ತಿ ನೆಲೆಯೂರಿತು. ಬದಿಯಲ್ಲಿ ಮೆಟ್ಟಲುಗಳಿದ್ದವು. ಭರ ಭರ ಮೆಟ್ಟಲುಗಳನ್ನೇರಿ ಮೇಲ್ಮಾಗದಲ್ಲಿ ನಿಂತು ಉಚ್ಚ ಸ್ವರದಿಂದ ನುಡಿದನು. "ಎಲ್ಲರೂ ಕೇಳರಿ. ನಮ್ಮ ಮುನಸಿಪಾಲಿಟಿ ನಮ್ಮ ಮ್ಯಾಲ ಅನ್ನೀ ಮಾಡೇತಿ. ದಗದಾ ಮಾಡಿದ್ರೂ ಕೂಲೀ ಕೊಡಾಣೆಲ್ಲಾ. ನನ್ನ ಸಂಗಾಡಿ ಬಾ ಸಂಪ ಮಾಡೂನು."

ಸಂಪು ಅಂದು ಕೂಡಲೆ ಬೇಟೆಯನ್ನು ಕಂಡ ಹುಲಿಯ ಕಿವಿಗಳಂತೆ ಎಲ್ಲ ದುಡಿಮೆಗಾರರ ಕಿವಿಗಳೂ ನಿಗರಿದವು. ಅವರು ಕುಳಿತಲ್ಲಿಂದ ಎದ್ದು ಮಾದನ ಹತ್ತಿರ ಬಂದರು. ನವಯುವಕನಾದ ಮಾದನು ಎದ್ದು ನಿಂತು ದೊಡ್ಡ ದನಿಯಿಂದ ಮುಂದರಿದನು, "ಸಂಪು ಮಾಡೂನು. ಮುನಸಿಪಾಲಟೀ ಬಗ್ಗಸೂನು. ಬೇರೆ ಊರಾಗಿನ ಕೂಲಿ ಹೆಚ್ಚು ಮಾಡಿಯಾರ. ಇದು ಕಾರಕೂನಿ ಮಸಲತ್ತ ಅತಿ. ನಾವು ಒಂದು ದಿನ ತಪ್ಪಿಸಿದರ ಖಾಡಾ. ಇವರು ವರುಷಕ್ಕೆ ೨೦ ದಿನ ಹಕ್ಕಿನಿಂದ ಖಾಡಾ. ಒಂದು ತಿಂಗಳು ಅರ್ಧ ಪಗಾರ ಖಾಡಾ ಇರತಾರ. ಇದು ಯಾಕ? ಇದ ಯಾಕ ಅಂತ ಅಂತೀನಿ? ನಾ ಹೆಂಡತಿ ಕೂಡಿ ದಿನಾ ಐದು ಮೈಲು ಏಳು ದಿನ ಗಟಾರ ಬಳದೀವಿ. ಈಗ ಕೊಟ್ಟದು ಕೂಲಿ ದಿನಾ ಐದಾಣೆ. ಒಂದು ಮೈಲಿಗೆ ಒಂದಾಣೆ. ಒಂದು ಚೀಲಾ ಎತ್ತಿ ಒಗದಾ ಅಂದರ ಹಮಾಲ ಒಂದಾಣೆ ತರತಾನ. ಒಂದು ಮೈಲು ಒಯ್ದಾಂದರ ಒಂದು ರೂಪಾಯಿ ತರತಾ. ಖಾಲೀ ಒಯ್ದು ಒಗಿಯಾಕ. ನಾವ ಗಟಾರ ಬಳೀತೀವಿ. ರಾಡಿ ಹೊರಗ ಹಾಕತೇವಿ. ನಾತಾ ಚಾದಂತೆ ಅಸರಂತ ಕುಡೀತೀವಿ. ಮತ್ತ ರಾಡಿ ಕೂಡಿಸಿ ತಿಪ್ಪಿಗೆ ಒಟ್ಟತೀವಿ. ಈಟ ಮಾಡಿ ಒಂದ ಮೈಲಿಗೆ ಒಂದಾಣೆ. ಆದೇನಿಲ್ಲಾ. ಒಂದ ಮೈಲ ಬಳದರ ನಾಲ್ಕಾಣೆ ಕೂಲಿ ಬೇಕು. ನಮಗೂ ವರ್ಷಕ್ಕ ೨೦ ದಿನ ಖಾಡಾದ ಕೂಲಿ ಬೇಕು. ಅಂದಾಗ ಬಳಿಯೋಣ. ಇಲ್ಲದಿದ್ದರೆ ಸಂಪ....ಸಂಪ....ಸಂಪ ಮಹಾರಾಜಕೀ ಜೈ........"

"ಸಂಪ ಮಹಾರಾಜಕೀ ಜೈ" ಎಂದು ಎಲ್ಲರೂ ಕೂಗಿದರು. ಇಬ್ಬರೂ ಕಾರಕೂನರು ಹೊರಗೆ ಬಂದರು.

"ಮಾದಾ, ಹೊರಗ ನಡಿ."

ಮಾದನು ಕೆಳಗಿಳಿದನು. ಹೊರಕ್ಕೆ ನ...

"ನಡೀರಿ ಎಲ್ಲರೂ ಸಂಪ." ಮಾದ ಹೊರ... ಡುತ್ತ ನುಡಿದನು.

"ಈಗ ಯಾರಾದರೂ ಹೊರಗ ಹೋದರ ಅವರ ಎಲ್ಲಾ ಪಗಾರ ಖಾಡಾ'' ಕಾರಕೂನ ಗದರಿದನು.

ದುಡಿಮೆಗಾರರ ತಂಡು ಹಿಂದೆಮುಂದೆ ನೋಡಿತು. ಒಂದು ಕ್ಷಣ ನಿಂತಲ್ಲಿಯೇ ನಿಂತಿತು. ಹೆಚ್ಚಿನ ಸವಲತ್ತುಗಳ ಕನಸು ಅವರನ್ನು ಮುಂದೆ ಮುಂದೆ ಎಳೆಯುತ್ತಿದ್ದರೂ ದುಡಿತದ ದುಡ್ಡು ಅವರನ್ನು ನೋಡಿ ಅಣಕಿಸುತ್ತಿತ್ತು. ಆ ಮೇಲೆ ನಿಧಾನದಿಂದ ಎಲ್ಲ ತಂಡವೂ ನಿರ್ಧಾರವಿಂದ ಹಿಂದಕ್ಕೆ ಸರಿಯಿತು. ತಂಡದೊಳಗಿನ ಒಬ್ಬ ಹಿರಿಯನು ಮಾದನ ಎದುರು ಬಂದನು. ಅವನನ್ನು ಅಡಿಯಿಂದ ಮುಡಿಯ ವರೆಗೆ ನೋಡಿದನು.

"ನಿನ್ನ ಪಗಾರ ಅಟ ತಕ್ಕೊಂಡ ನಮ್ಮದು ಖಾಡಾ ಮಾಡಬೇಕಂತ ಮಾಡೀದ್ಯಾ ಪೋರಾ" ಎಂದು ಫಡಾರನೇ ಅವನ ಮೊಸಡಿಗೊಂದು ಇಟ್ಟನು. ಅವನೊಬ್ಬ ವಿರುದ್ಧ ನಿಲ್ಲುವದೊಂದೇ ತಡ ಉಳಿದವರೂ ಅವನ ಭಾವನೆಗೆ ಶ್ರುತಿಗೂಡಿ "ಓಡಿಸಿರಿ ಅವನ ಇಲ್ಲಿಂದ!'' ಎಂದು ಒಂದೇ ಉಸುರಿನಿಂದ ಕೂಗಿದರು. ಮಾದನು ಜೀವದ ಆಶೆಗಾಗಿ ಅಲ್ಲಿಂದ ಓಡಿದನು. ಬೇಟೆಯು ಮೃ... ತಪ್ಪಿಸಿಕೊಂಡಂತೆ ಓಡಿದನು. ಊರನಾಯಿಗಳು ಬೆನ್ನಟ್ಟಿದ ಬಿಡಾಡಿ ನಾಯಿಯಂತೆ ಓಡಿದನು. ಮುನಸಿಪಾಲಟಿ ಹದ್ದು ದಾಟಿ ಓಡಿದನು. ಓಡಿ ಓಡಿ ಅವನಿಗೆ ತೇಕು ಹತ್ತಿತು. ಹಿಂತಿರುಗಿ ನೋಡಿದನು. ಯಾರೂ ಬೆನ್ನಟ್ಟಿದ್ದಿಲ್ಲ. ಸಾವಕಾಶವಾಗಿ ನಡೆಯುತ್ತ ಮನೆಗೆ ಬಂದನು. ಅವನ ಹೆಂಡತಿ ಅವನ ದಾರೀ ಕಾಯುತ್ತಿದ್ದಳು.

೧೬ನೇ ಪುಟಕ್ಕೆ

ಅಭಿನಂದನೀಯ ಯಶಸ್ಸು

ಕರ್ನಾಟಕದ ಎರಡು ಜಿಲ್ಲೆಗಳಾದ ಮಂಗಳೂರು ಮತ್ತು ಬಳ್ಳಾರಿಯ ಮತದಾರರು ಮದ್ರಾಸ ಶಾಸನ ಸಭೆಗೆ ತಮ್ಮ ಭಾಗಕ್ಕಿದ್ದ ಒಂದರಹೊರ್ತು ಎಲ್ಲ ಸ್ಥಳಗಳಿಗೂ ಕಾಂಗ್ರೆಸ ಹುರಿಯಾಳುಗಳನ್ನು ಅವಿರೋಧವಾಗಿ ಆರಿಸಿ ಕಳಿಸಿ ಕನ್ನಡನಾಡಿಗೆ ಹೆಮ್ಮೆ ತಂದುಕೊಟ್ಟಿರುವರು. ಮಂಗಳೂರು ಜಿಲ್ಲೆಗೆ ಮೂರು ಸಾಮಾನ್ಯ, ಒಂದು ಹರಿಜನ ಮತ್ತು ಒಂದು ಕ್ರಿಶ್ಚಿಯನ ಹೀಗೆ ೫ ಮುಸಲ್ಮಾನೇತರ ಸ್ಥಳಗಳಿದ್ದು ಅವುಗಳಿಗೆ ಅನುಕ್ರಮವಾಗಿ ಶ್ರೀಗಳಾದ ಡಾ. ಯು. ಪಿ. ಮಲ್ಯ, ಕೆ ಆರ್ ಕಾರಂತ, ಎ. ಬಿ. ಶೆಟ್ಟಿ, ಕೇ. ಈಶ್ವರ ಮತ್ತು ಪಾಯಸ್ ಇವರು ಪ್ರತಿಸ್ಪರ್ಧಿಗಳಿಲ್ಲದೆ ಆರಿಸಿ ಬಂದಿರುವರು. ಇದರಂತೆ ಬಳ್ಳಾರಿ ಜಿಲ್ಲೆಗೆ ನಾಲ್ಕು ಸ್ಥಳಗಳಿರುವವು. ಎರಡು ಸಾಮಾನ್ಯ. ಒಂದು ಹರಿಜನ ಮತ್ತು ಒಂದು ಸ್ತ್ರೀ. ಇವುಗಳಲ್ಲಿ ಮೊದಲಿನ ಮೂರು ಸ್ಥಳಗಳಿಗೆ ಶ್ರೀಗಳಾದ ಸೀತಾರಾಮ ರೆಡ್ಡಿ, ಬಿ. ಅನಂತಾಚಾರ್ಯ ಮತ್ತು ಗೋವಿಂದದಾಸ ಇವರು ಅವಿರೋಧವಾಗಿ ಚುನಾಯಿತರಾಗಿರುವರು. ಸ್ತ್ರೀ ಸ್ಥಳಕ್ಕೊಂದೇ ಸ್ಪರ್ಧೆ ಇದೆ. ಬಳ್ಳಾರಿ ತಾಲೂಕಿನ ಮತದಾರರು ಅವರನ್ನೂ ಪ್ರಚಂಡ ಬಹುಮತದಿಂದ ಆರಿಸಿ, ಕಾಂಗ್ರೆಸ ಬಗ್ಗೆ, ರಾಷ್ಟ್ರದ ಬಗ್ಗೆ, ರಾಷ್ಟ್ರೀಯ ಸ್ವಾತಂತ್ರ್ಯದ ಬಗ್ಗೆ ತಮ್ಮಲ್ಲಿ ಕಡಿಮೆ ಅಭಿಮಾನವಿಲ್ಲವೆಂಬುವದನ್ನು ವ್ಯಕ್ತಮಾಡುವರೆಂದು ನಮಗೆ ತುಂಬ ವಿಶ್ವಾಸವಿದೆ. ಇಂತು, ಮಂಗಳೂರು ಮತ್ತು ಬಳ್ಳಾರಿಯ ಕನ್ನಡಿಗರು ಕಾಂಗ್ರೆಸ್ಸಿನ ವಿಷಯದಲ್ಲಿ ತಮಗಿದ್ದ ನಿಸ್ಸೀಮ ಭಕ್ತಿ ವಿಶ್ವಾಸವನ್ನು ತೋರ್ಪಡಿಸಿ ಇತರ ಕನ್ನಡಿಗರಿಗೆ ಆದರ್ಶರಾಗಿರುವರು. ಮುಂಬೈ ಪ್ರಾಂತದ ಕನ್ನಡಿಗರಿಗೆ ಕಾಂಗ್ರೆಸ ಹುರಿಯಾಳುಗಳನ್ನು ಅವಿರೋಧವಾಗಿ ಕಳಿಸುವ ಭಾಗ್ಯ ದೊರಕದಿದ್ದರೂ ಪ್ರಚಂಡ ಬಹುಮತದಿಂದ ಆರಿಸುವ ಭಾಗ್ಯ ಅವರ ಕೈಯಲ್ಲಿಯೇ ಇದೆ. ಅದಕ್ಕವರು ಎರವಾಗುವದಿಲ್ಲವೆಂದು ನಾವು ಆಶಿಸುತ್ತೇವೆ.

ಮುಂದಿಟ್ಟ ಹೆಜ್ಜೆ ಹಿಂತೆಗೆಯಬೇಡಿರಿ

೧೯೪೬ ಮಾರ್ಚ ೧ ನೇ ತಾರೀಖಿಗೆ ಪ್ರಾರಂಭವಾಗಲಿದ್ದ ಮುಂಬೈ ಪ್ರಾಂತದ ೪೫೦೦೦ ಪ್ರಾಥಮಿಕ ಶಾಲಾ ಶಿಕ್ಷಕರ ಸಂಪಿಗೆ, ರಾಹುವಿನ ದೃಷ್ಟಿ ಅದಾವ ಮೂಲೆಯಿಂದ ಬಿದ್ದಿತ್ತೋ ನಾವು ಕಾಣೆವು. ಸಂಪಿಗಾಗಿ ಶಿಕ್ಷಕರು ಅತ್ಯಂತ ಹುರುಪಿನಿಂದ ಸಿದ್ಧರಾಗಿದ್ದರು. ಪೂರ್ವಸಿದ್ಧತೆಗಳನ್ನು ಯಾವುದೂ ತಪ್ಪದಂತೆ ಮಾಡಿಕೊಂಡು ವಿದ್ಯಾರ್ಥಿಗಳ ಸಹಕಾರ ಸಹ ತಗೆದುಕೊಂಡಿದ್ದರು. ಆದರೆ ಫೆಬ್ರುವರಿ ೨೮ ನೇ ತಾರೀಖು ಸಾಯಂಕಾಲ ಮುಂಬೈ ಪ್ರಾಂತದ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಶ್ರೀ ದೊಂದೆಯವರು, ಶಿಕ್ಷಣಾಭಿಮಾನಿಗಳೊಡನೆ ನಡೆದ ವಿಚಾರವಿನಿಮಯದ ಪರಿಣಾಮವಾಗಿ ಸಂಪನ್ನು ಅನಿಯಮಿತ ಅವಧಿಯ ವರೆಗೆ ಮುಂದೆ ಹಾಕಿರುವದಾಗಿ ಪ್ರಕಟಿಸಿದರು. ಈ ನಿರ್ಣಯವು ಕೆಲವು ಸ್ಥಳಗಳಿಗೆ ಸಮಯಕ್ಕೆ ಮುಟ್ಟದ್ದರಿಂದ ಅಲ್ಲಿ ಸಂಪು ಪೂರ್ವ ಕಾರ್ಯಕ್ರಮದಂತೆ ಪ್ರಾರಂಭವಾಯಿತು. ಸುದ್ದಿ ಮುಟ್ಟಿದ ಸ್ಥಳಗಳಲ್ಲಿ ಶಿಕ್ಷಕರು ದಿಙ್ಮೂಢರಾದರು. ಶ್ರೀ ದೊಂದೆಯವರು ಅದಕ್ಕೆ ಒಂದು ದಿನ ಮೊದಲು ಸಂಪಿನ ಬಗ್ಗೆ ದೃಢ ನಿರ್ಧಾರದ ಪ್ರಕಟಣೆ ಹೊರಡಿಸಿದ್ದರಿಂದ ಮತ್ತು ಮರುದಿನದ ಅವರ ನಿರ್ಣಯ ಅನಪೇಕ್ಷಿತವಾಗಿ ಅದಕ್ಕೆ ತೀರ ವಿರುದ್ಧವಾಗಿದ್ದರಿಂದ ಅನೇಕರಿಗೆ ಆಶ್ಚರ್ಯವಾಯಿತು. ಸಂಪನ್ನು ಕೈಕೊಳ್ಳಲಿದ್ದ ಹೊಣೆಗಾರ ವ್ಯಕ್ತಿಗಳಲ್ಲಿ ಏನೋ ದೋಷವಿದೆಯೆಂದು ಈ ನಿರ್ಣಯದಿಂದ ಜನರಲ್ಲಿ ತಪ್ಪು ತಿಳಿವಳಿಕೆಯಾಗಿದ್ದರೆ ಅದರಲ್ಲಿ ತಪ್ಪೇನೂ ಇಲ್ಲ. ಇರಲಿ, ಆ ನಂತರ ಪ್ರಾಂತಿಕ ಸಂಘದ ಕಾರ್ಯಕಾರಿ ಮಂಡಲವು ಪುಣೆಯಲ್ಲಿ ಸೇರಿ ಸಂಪನ್ನು ಪ್ರಾರಂಭಿಸಿಯೇ ತೀರಬೇಕೆಂದು ನಿರ್ಣಯಿಸಿತು. ಶ್ರೀ ದೊಂದೆಯವರೂ ಅದಕ್ಕೆ ಒಪ್ಪಿಗೆ ಕೊಟ್ಟರು. ಅದರನ್ವಯ, ಈ ಮೊದಲೇ ಸಂಪು ಪ್ರಾರಂಭಿಸಿದ್ದ ಶಿಕ್ಷಕರು ಅದನ್ನು ಮುಂದೆ ಸಾಗಿಸಿದರು; ಇನ್ನೂ ಪ್ರಾರಂಭ ಮಾಡದಿದ್ದವರು ಪ್ರಾರಂಭಿಸಿದರು. ಈಗ ಸಂಪು ಪ್ರಾಂತದ ತುಂಬ ಹಬ್ಬಿದೆಯೆಂದು ಹೇಳಬಹುದು. ಕರ್ನಾಟಕದ ಶಿಕ್ಷಕರು ಸಹ ಇದರಲ್ಲಿ ಹಿಂದುಳಿದಿರುವದಿಲ್ಲ. ಶಿಕ್ಷಕರ ಬೇಡಿಕೆ ನ್ಯಾಯವಾಗಿದೆ. ಅಂದ ಮೇಲೆ ಅವರ ಸಂಪು ಸಹ ನ್ಯಾಯ್ಯವಾಗಿರುವದು. ಎಂಥ ಕಠಿಣ ಪ್ರಸಂಗ ಬಂದರೂ ಶಿಕ್ಷಕರು ಮುಂದಿಟ್ಟ ಹೆಜ್ಜೆಯನ್ನು ಹಿಂತೆಗೆದುಕೊಳ್ಳದಿದ್ದರೆ ಅವರಿಗೆ ಯಶಸ್ಸು ನಿಶ್ಚಿತ. ಪರಮಾತ್ಮನು ಯಾವಾಗಲೂ ಸತ್ಯ ಮತ್ತು ನ್ಯಾಯ್ಯದ ಪಕ್ಷಪಾತಿಯೆಂಬುದನ್ನು ಮರೆಯಲಾಗದು.

ಸಂಪಾದಕೀಯ.

ಟೀಕೆ-ಟಿಪ್ಪಣಿಗಳು

ಕೇಂದ್ರದ ಮುಂಗಡ ಪತ್ರಿಕೆ

ಕೇಂದ್ರ ಸರಕಾರದ ಅರ್ಥಸಚಿವರಾದ ಸರ್ ಆರ್ಚಿಬಾಲ್ಡ ರೌಲಂಡ್ಸರು ಕಳೆದ ವಾರ ಶಾಸನ ಸಭೆಯಲ್ಲಿ ೧೯೪೬—೪೭ ನೇ ವರ್ಷದ ಮುಂಗಡ ಪತ್ರಿಕೆಯನ್ನು ಮಂಡಿಸಿದರು. ಬರುವ ವರ್ಷದಲ್ಲಿ ೩೦೭ ಕೋಟಿ ರೂ. ಆದಾಯವಾಗುವದೆಂದೂ ೩೫೫ ಕೋಟಿ ೭೧ ಲಕ್ಷ ರೂ. ವೆಚ್ಚವಾಗಿ ೪೮ ಕೋಟಿ ೭೧ ಲಕ್ಷ ರೂ. ಕೊರತೆಯಾಗುವದೆಂದೂ ಅಂದಾಜ ಮಾಡಿರುವರು. ಇದು ಯುದ್ಧೋತ್ತರದ ಮೊದಲನೆಯ ಮುಂಗಾಣಿ. ಯುದ್ಧದಲ್ಲಿ ವರ್ಷಂಪ್ರತಿ ಏರುತ್ತ ಹೋದ ಕರ ಮತ್ತು ಕೊರತೆಗಳು ಇದರಲ್ಲಿ ಕಡಿಮೆಯಾಗುವದು ಸ್ವಾಭಾವಿಕ ಮತ್ತು ಹಾಗೆ ಕಡಿಮೆಯಾಗತಕ್ಕದ್ದು ಯುಕ್ತವು. ಹೋದ ವರ್ಷವೇ ಮುಕ್ತಾಯವಾದುದರಿಂದ ೧೯೪೫-೪೬ರಲ್ಲಿ ೧೫೫ಕೋಟಿ ೨೯ ಲಕ್ಷ ರೂ. ಆಗತಕ್ಕ ಕೊರತೆ ೧೪೪ ಕೋಟಿ ಮತ್ತು ೯೫ ಲಕ್ಷ ರೂ. ಗೆ ಇಳಿದಿರುವದು. ಹೊಸ ವರ್ಷದಲ್ಲಿ ಕೊರತೆ ೪೮ ಕೋಟಿ ೭೧ ಲಕ್ಷ ರೂ. ಮಾತ್ರ. ಇನ್ನು ಕರಗಳನ್ನು ನೋಡೋಣ. ಈ ವಿಷಯದಲ್ಲಿ ಅರ್ಥಸಚಿವರು ಕೇವಲ ಶ್ರೀಮಂತರ ಪಕ್ಷಪಾತಿಗಳಾಗಿರುವರೆಂದು ಹೇಳಬಹುದು. ಅವರು ರದ್ದುಪಡಿಸಿದ ಅಥವಾ ಇಳಿಸಿದ ಕರಗಳು ಶ್ರೀಮಂತರಿಗೆ ಮಾತ್ರ ಸಂಬಂಧಿಸಿರುತ್ತವೆ. ವಿಶೇಷ ಲಾಭದ ಕರವನ್ನು ರದ್ದು ಮಾಡಬೇಕೆಂದಿದ್ದಾರೆ. ಉತ್ಪನ್ನ ಕರದಲ್ಲಿ ಒಟ್ಟು ೨೧॥ ಕೋಟಿ ರೂ. ಬಿಡಲು ಸೂಚಿಸಿದ್ದಾರೆ ಈ ಕರಗಳನ್ನು ಕೇವಲ ಶ್ರೀಮಂತರು ಕೊಡುತ್ತಿದ್ದರೆಂದು ಬೇರೆ ಹೇಳುವದು ಬೇಡ. ಬಡವರ ವಿಷಯವಾಗಿ ಹೇಳಿಕೊಳ್ಳುವದಕ್ಕೆ ಅರ್ಥಸಚಿವರಲ್ಲಿ ಏನೂ ಇರದಿದ್ದರೂ ಚಿಮಣಿ ಎಣ್ಣೆಯ ಮೇಲಿನ ಜಕಾತಿಯನ್ನು ಇಳಿಸಿರುವದಾಗಿ ಹೆಮ್ಮೆಯ ನುಡಿಗಳನ್ನಾಡಿದ್ದಾರೆ. ಬಡವರ ಜೀವನಕ್ಕೆ ಉಪ್ಪು, ಸಕ್ಕರೆ, ಕಡ್ಡಿಪೆಟ್ಟಿಗೆ, ಅಡಿಕೆ ಮೊದಲಾದವುಗಳಿಗಿಂತ ಚಿಮಣಿ ಎಣ್ಣೆಯ ಸಂಬಂಧ ವಿಶೇಷವಾಗಿರುವದೆಂದು ಅರ್ಥಸಚಿವರು ತಿಳಿದುಕೊಂಡದ್ದು ನೋಡಿ ನಮಗೆ ವಿಷಾದವಾಗುವದು. ಮೇಲೆ ಉದಾಹರಿಸಿದ ವಸ್ತುಗಳ ಮೇಲಿನ ಅಪ್ರತ್ಯಕ್ಷ ಕರಗಳು ಯುದ್ಧಕಾಲದಲ್ಲಿ ಒಂದಿಲ್ಲೊಂದು ರೀತಿಯಿಂದ ಏರಿರುತ್ತವೆ. ಅಡಿಕೆಯ ಮೇಲೆ ಹೊಸದಾಗಿ ಬಿದ್ದಿರುವದು. ಇವು ಅರ್ಥಸಚಿವರ ಗಮನಕ್ಕೆ ಬರದೇ ಚಿಮಣಿ ಎಣ್ಣೆ ಒಂದೇ ಬಂದುದು ಆಶ್ಚರ್ಯಕರವಾಗಿರುವದು. ತತ್ಪರಿಣಾಮವಾಗಿ ಅವರು ತೀಕ್ಷ್ಣ ಟೀಕೆ ಸಹಿಸಬೇಕಾಯಿತು ಮತ್ತು ಈ ಕರಗಳಲ್ಲಿ ಕೆಲವಂಶವಾದರೂ ಇಳಿಸಲು ಒಪ್ಪಬೇಕಾಯಿತು. ಈ ವಿಷಯವು ಮುಂಗಡಪತ್ರಿಕೆಯ ವಿಸ್ತೃತ ಚರ್ಚೆಯಲ್ಲಿ ಹೊರಡಲಿರುವದರಿಂದ ಇಲ್ಲಿ ಒಂದೆರಡು ಸೂಚನೆ ಮಾಡುವದು ಅಪ್ರಸ್ತುತವಾಗಲಿಕ್ಕಿಲ್ಲ. ಅಡಿಕೆ ಸುಂಕ ಅನ್ಯಾಯದ್ದಾಗಿದೆ. ಬಳಸುವವರ ಮೇಲೆ ಇದು ಬೀಳದೆ ಒಕ್ಕಲಿಗರ ಮೇಲೆ ಬಿದ್ದಿರುವದೆಂದು ಸ್ವತಃ ಅರ್ಥಸಚಿವರು ಒಪ್ಪಿಕೊಂಡಿರುವಾಗ ಅದನ್ನು ಉಳಿಸಿಕೊಳ್ಳುವದು ತತ್ವಸಮ್ಮತವಾಗಲಾರದು. ಆದುದರಿಂದ ಅದನ್ನು ಕೂಡಲೇ ರದ್ದು ಮಾಡುವದು ಅವಶ್ಯವಿರುತ್ತದೆ. ಅಲ್ಲದೆ ಕಡ್ಡಿಪೆಟ್ಟಿಗೆಯ ಮೇಲಿನ ಸುಂಕವನ್ನು ಹಾಗೂ ಅಂಚೆ ಕಾರ್ಡಿನ ಬೆಲೆಯನ್ನು ಇಳಿಸುವದೂ ಅತ್ಯಗತ್ಯವಿರುವದು.

ಸಹಾಯಕ ಸ್ತ್ರೀ ದಲ

ಬ್ರಿಟನದಲ್ಲಿರುವ ಸಹಾಯಕ ಸ್ತ್ರೀ ದಲದ ಮಾದರಿಯ ಮೇಲೆ ಈ ದೇಶದಲ್ಲಿಯೂ ಅಂಥ ದಲವೊಂದನ್ನು ೧೯೪೩ರಲ್ಲಿ ಸಂಘಟಿಸಲಾಯಿತು. ಇದರ ಧ್ಯೇಯವೇನೆಂಬುದು ಅತ್ಯಂತ ಗೂಢವಾಗಿದೆ. ಅಥವಾ ಅದಕ್ಕೆ ಧ್ಯೇಯವಿಲ್ಲವೆಂದೂ ಹೇಳಬಹುದು. ಇಂಗ್ಲಂಡದ ಓರ್ವ ಆಕಾಶವಾಣಿ ವಕ್ತಾರನು ಈ ದಲವನ್ನು ಕುರಿತು ಒಮ್ಮೆ ಭಾಷಣ ಮಾಡುವಾಗ, ಇದು ಸೈನಿಕರ ಸುಖ ಸಹವಾಸ ದಲ ಎಂದು ಹೇಳಿದ್ದು ನಮ್ಮ ನೆನಪಿನಲ್ಲಿರುತ್ತದೆ. ಮುಂದೆ ಆ ದಲಕ್ಕೆ ಕೊಟ್ಟ ಕೆಲಸವನ್ನು ನೋಡಿದರೆ ಅವರ ವರ್ಣನೆ ಅಕ್ಷರಶಃ ನಿಜವಿರುವದು ಗೊತ್ತಾಗದಿರದು. ಇಂಗ್ಲಂಡದ ಪರಿಸ್ಥಿತಿ ಏನೇ ಇರಲಿ, ಅದರ ಸಂಬಂಧ ನಮಗಿಲ್ಲ. ಆದರೆ ಹಿಂದುಸ್ಥಾನದಲ್ಲಿ ಅದರ ಪುನರಾವೃತ್ತಿಯಾದುದನ್ನು ಕಂಡು ನಮಗೆ ಅತೀವ ವಿಷಾದವಾಗಿರುವದು. ಕೇಂದ್ರ ಶಾಸನ ಸಭೆಯಲ್ಲಿ ಈ ವಿಷಯದ ಬಗ್ಗೆ ಕಳೆದ ವಾರ ಪ್ರಶ್ನೋತ್ತರಗಳು ನಡೆದವು. ಈ ದಲದ ಸ್ತ್ರೀಯರನ್ನು ಸೈನಿಕರ, ವಿಶೇಷತಃ ಬ್ರಿಟಿಶ್ ಸೈನಿಕರ ಮನರಂಜನೆಗೆ ಉಪಯೋಗಿಸಿದುದೂ ತತ್ಪರಿಣಾಮವಾಗಿ ಪತಿವ್ರತ್ಯ ಭಂಗ, ಬಲವಂತದ ತಾಯ್ತನ, ಆತ್ಮಹತ್ಯೆ ಮೊದಲಾದ ವಿಷಾದಕರ ಘಟನೆಗಳು ಸಂಭವಿಸಿದವೆಂದು ಯುದ್ಧ ಖಾತೆಯ ಕಾರ್ಯದರ್ಶಿಗಳಾದ ಫಿಲಿಪ್ ಮೇಸನ್ನರು ಕೊಟ್ಟ ಉತ್ತರದಿಂದ ತಿಳಿದು ಬರುತ್ತದೆ. ಇದು ಲಾಂಛನಾಸ್ಪದವೇ ಸರಿ. ಇಲ್ಲಿಯ ಈ ಹೊಲಸು ಪದ್ಧತಿಯನ್ನು ಕಂಡು ಕುಮಾರಿ ರಂಗರಾವ ಮೊದಲಾದ ನೂರು ಜನ ಮಾನಿನಿಯರು ರಾಜೀನಾಮೆ ಕೊಟ್ಟದ್ದು ಆಶ್ಚರ್ಯಕರವಲ್ಲ. ದಲದಲ್ಲಿಯ ಹೊಲಸನ್ನು ಮುಚ್ಚಿಕೊಳ್ಳುವದಕ್ಕೆ ಅಧಿಕಾರಿಗಳು ಆ ದಲವನ್ನೇ ಈಗ ವಿಸರ್ಜಿಸಲು ನಿರ್ಧರಿಸಿರುತ್ತಾರೆ. ದಲವನ್ನು ವಿಸರ್ಜಿಸಿದ ಮಾತ್ರಕ್ಕೆ ಹೊಲಸನ್ನು ತೊಳೆದುಕೊಂಡಂತಾಗುವದಿಲ್ಲ. ಆ ದಲದಲ್ಲಿ ಕಂಡು ಬರುತ್ತಿದ್ದ ಅನ್ಯಾಚಾರ, ಅನೀತಿ ವರ್ತನೆ ಮೊದಲಾದವುಗಳಿಗೆ ಕಾರಣರಾದವರ ವಿಚಾರಣೆಯಾಗಬೇಕು ಇಲ್ಲದಿದ್ದರೆ ಬ್ರಿಟನ-ಹಿಂದುಸ್ಥಾನಗಳ ಸಂಬಂಧದಲ್ಲಿ ಮತ್ತಷ್ಟು ವಿಷ ಬೆರೆಯುವದು. ಕೇಂದ್ರ ಶಾಸನಸಭೆಯ ಸದಸ್ಯರು ಸಹ ಬರಿ ಪ್ರಶ್ನೋತ್ತರಗಳಿಂದ ತೃಪ್ತರಾಗದೆ ಸರಕಾರದ ಧೋರಣವನ್ನು ನಿಷೇಧಿಸುವದು ಅವಶ್ಯವಿರುವದು.

ಹಿಂದೀಯರ ಆರೋಗ್ಯ

ಅನಾರೋಗ್ಯ ಮತ್ತು ಅಶಕ್ತಿಯಿಂದ ನೆಲ ಹಿಡಿಯುತ್ತಿರುವ ಹಿಂದುಸ್ಥಾನದ ಆರೋಗ್ಯವನ್ನು ಹೇಗೆ ಸುಧಾರಿಸಬೇಕು, ಅದಕ್ಕೆ ಯಾವ ಉಪಾಯಗಳನ್ನು ಕೈಕೊಳ್ಳಬೇಕು ಎಂಬವನ್ನು ವಿಚಾರಿಸಿ ವರದಿ ಮಾಡಲು ಹಿಂದುಸ್ಥಾನ ಸರಕಾರದವರು ವ್ಹಾಯಿಸರಾಯರ ಹಿಂದಿನ ಕಾರ್ಯಕಾರಿ ಮಂಡಲದ ಸದಸ್ಯರಾದ ಸರ್ ಜೋಸೆಫ್ ಭೋರರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನೇಮಿಸಿದ್ದರು. ಅವರೀಗ ವರದಿ ಒಪ್ಪಿಸಿದ್ದು ಅದರ ಮುಖ್ಯಾಂಶಗಳನ್ನು ಬೇರೆಡೆ ಕೊಟ್ಟಿರುತ್ತೇವೆ. ಆ ಸೂಚನೆಗಳಲ್ಲಿ ಹೊಸದೇನೂ ಇಲ್ಲ, ಇದ್ದ ಸೂಚನೆಗಳು ಅಪೂರ್ಣವಿರುತ್ತವೆಯೆಂದು ಹೇಳದೆ ಗತ್ಯಂತರವಿಲ್ಲ. ಈ ಸೂಚನೆಗಳನ್ನು ವಿಮರ್ಶಿಸುವ ಮೊದಲು ಹಿಂದುಸ್ಥಾನದ ಪರಿಸ್ಥಿತಿ ಏನಿದೆಯೆಂಬವನ್ನು ನೋಡುವಾ. ಆರೋಗ್ಯ ವಿಷಯದಲ್ಲಿ ಹಿಂದುಸ್ಥಾನವು ಕೊನೆಯದಾಗಿರುವದು. ಇಲ್ಲಿಯವರ ವಯೋಮಾನ ೨೬.೯೧, ಜಪಾನದ್ದು ೪೬.೯೨, ಆಸ್ಟ್ರೇಲಿಯದು ೬೩.೪೮ ಜರ್ಮನಿಯದು ೫೯.೪೬, ಬ್ರಿಟನದ್ದು ೬೦.೧೮ ಮತ್ತು ಅಮೇರಿಕೆಯದು ೬೦.೬೦ ಇರುತ್ತದೆ. ಈ ಅಂಕಿಗಳು ಪುರುಷರವಿದ್ದು ಸ್ತ್ರೀಯರದೂ ಹೆಚ್ಚುಕಡಿಮೆ ಇಷ್ಟೇ ಇರುತ್ತದೆ. ೧೦೦—೧೨೫ ವರ್ಷ ಬಾಳುತ್ತಿದ್ದವರ ಪೂರ್ವಜರೆತ್ತ ? ೨೬ ವರ್ಷಕ್ಕೇನೆ ಪರಂಧಾಮವನ್ನೈದುವ ನಾವೆತ್ತ ? ಹಿಂದುಸ್ಥಾನದ ಪರಿಸ್ಥಿತಿ ಹೀಗೇಕಾಗಿದೆಯೆಂಬುದು ವಿಚಾರಣೀಯವಿರುವದು. ಇದಕ್ಕೆ ಇಲ್ಲಿಯ ಅನಾರೋಗ್ಯವೇ ಮೂಲ ಕಾರಣ. ಜನರು ಬಹಳ ಬಡವರು. ಸಣ್ಣಪುಟ್ಟ ಬೇನೆಗಳನ್ನು ಎದುರಿಸುವ ಶಕ್ತಿಯು ಅವರಲ್ಲಿ ಉಳಿದಿಲ್ಲ ಪ್ಲೇಗು, ಮಾರಿ ಬೇನೆಗಳಂತೂ ಸರಿ, ವಿಷಮಜ್ವರ, ಚಳಿಜ್ವರ, ಆಮಶಂಕೆ, ವೈಲಿ, ಕ್ಷಯ ಮೊದಲಾದವುಗಳು ವರ್ಷಂಪ್ರತಿ ಲಕ್ಷಾಂತರ ಜನರನ್ನು ಆಹುತಿ ತೆಗೆದುಕೊಳ್ಳುತ್ತವೆ. ೧೯೩೭ರಲ್ಲಿ ಮೃತಪಟ್ಟ ೬೨೬೫೩೩೪ ಜನರಲ್ಲಿ ೧೪,೧೧,೬೧೪ ಜನರು ಚಳಿಜ್ವರಕ್ಕೂ, ೪೮,೧೨೩ ಜನರು ವೈಲಿಗೂ ೯೭,೫೬೬ ಜನರು ಮಾರಿ ಬೇನೆಗೂ [illegible],೬೦,೯೦೨ ಜನರೂ ಆಮಶಂಕೆಗೂ ಬಲಿಯಾಗಿರುತ್ತಾರೆ. ಕ್ಷಯರೋಗದ ಅಂಕೆಗಳು ಇದರಲ್ಲಿಲ್ಲ. ಬೇನೆಗಳು ಹೀಗೆ ಹುಯ್ಯುತ್ತಿದ್ದರೂ ಔಷಧೋಪಚಾರ ಸಾಕಷ್ಟಿರುವದಿಲ್ಲ. ೭ ಲಕ್ಷ ಹಳ್ಳಿಗಳಿದ್ದ ನಾಡಿನಲ್ಲಿ ಕೇವಲ ೭ ಸಾವಿರ ದವಾಖಾನೆಗಳಿರುವವು. ಮೇಲಾಗಿ ಇವು ಹೆಚ್ಚಾಗಿ ನಗರಗಳಲ್ಲಿರುತ್ತವೆ. ಡಾಕ್ಟರರ ಸಂಖ್ಯೆ ೪೭೦೦೦ ದಾದಿಯರದು ೪೫೦೦. ಆದರೆ ಇಂಗ್ಲಂಡು ಹಿಂದುಸ್ಥಾನದ ಒಂದು ಪ್ರಾಂತವಾದ ಬಂಗಾಲದಷ್ಟಿದ್ದರೂ ೬೧,೪೭೦ ಡಾಕ್ಟರರೂ ೧,೦೯,೫೭೦ ದಾದಿಯರೂ ಇರುತ್ತಾರೆ. ಇಂತು ರೋಗ ಪೀಡಿತವಾದ ಹಿಂದುಸ್ಥಾನವನ್ನು ಉದ್ಧರಿಸುವದೆಂತು? ದಾರಿದ್ರ್ಯ ಸಕಲ ರೋಗಗಳ ತವರುಮನೆಯಾಗಿರುವದರಿಂದ ಮೊದಲು ಅದನ್ನು ಹೋಗಲಾಡಿಸುವ ಪ್ರಯತ್ನ ಮಾಡಬೇಕು ಇಲ್ಲದಿದ್ದರೆ ನಿರ್ಜೀವ ದೇಹದ ವ್ಯರ್ಥ ಪೋಷಣೆ ಮಾಡಿದಂತಾಗುವದು. ಸಮಿತಿಯವರ ಸೂಚನೆಗಳು ಒಂದೊಂದು ದೃಷ್ಟಿಯಿಂದ ಮಹತ್ವದ್ದಿದ್ದರೂ ಮೂಲ ಕಾರಣವಾದ ದಾರಿದ್ರ್ಯ ಮೊದಲು ಹೋಗಬೇಕು. ಆರೋಗ್ಯ ವರ್ಧನೆಗೆ ಬಹಳ ಸಹಾಯಕವಾಗಿರುವ ಆಟಪಾಟ ವ್ಯಾಯಾಮಗಳನ್ನು ಸಹ ಸಮಿತಿಯವರು ವಿಚಾರಿಸಿದಂತೆ ತೋರುವದಿಲ್ಲ.

ಮೂರನೇ ಮಹಾ ಯುದ್ಧ?

ಎರಡನೇ ಮಹಾಯುದ್ಧ ಮುಗಿದು ತೋಫಿನ ಗರ್ಜನೆ ನಿಃಶಬ್ದವಾಗುವಷ್ಟರಲ್ಲಿ ಮೂರನೇ ಮಹಾಯುದ್ಧದ ಕಾರ್ಮೋಡಗಳು ಕವಿಯುತ್ತಿರುವದು ನಿಜವಾಗಿಯೂ ವಿಷಾದಕರವಾಗಿದೆ. ವರ್ಸಾಲಿಯಲ್ಲಿ ಜನ್ಮವೆತ್ತಿದ ಸುಂದೋಪಸುಂದರ ಅವತಾರ ಮುಗಿಯಿತೆನ್ನುವಷ್ಟರಲ್ಲಿ ಅವರ ಹೊಸ ಅವತಾರ ಇಂಗ್ಲಂಡ ಮತ್ತು ರಶಿಯಾದಲ್ಲಿ ಆಗುವ ಸಂಭವ ತೋರುತ್ತಿರುವದು. ಹಿಟ್ಲರನಿದ್ದಾಗ ಮಿತ್ರರಾಗಿದ್ದ ಬ್ರಿಟನ ಮತ್ತು ರಶಿಯಾಗಳು ಈಗ ತೆಕ್ಕೆಮುಕ್ಕಿ ಹಾಯುತ್ತಿರುವವು. ಇದೆಲ್ಲವೂ ಯುದ್ಧ ಸುಲಿಗೆ ಹಂಚಿಕೊಳ್ಳುವದಕ್ಕೆ. ಈ ತಿಕ್ಕಾಟದಲ್ಲಿ ಅಟಲಾಂಟಿಕ ಘೋಷಣೆ, ರೂಜವೆಲ್ಟರ ಚತುಃ ಸ್ವಾತಂತ್ರ್ಯ ಮೊದಲಾದ ಉದ್ದುದ್ದ ತತ್ವಗಳು ಗಾಳಿಗೆ ತೂರಲ್ಪಟ್ಟಿರುವವು. ಜಾಗತಿಕ ಭದ್ರತೆಗಾಗಿ ಸ್ಥಾಪಿತವಾದ ಮಂಡಲವು ಬ್ರಿಟಿಶ್ ಮತ್ತು ರಶಿಯನರ ಭದ್ರತೆಗಾಗಿ ಹೋರಾಡುತಿದೆ. ಮೋಕ್ಷ ಸಿಕ್ಕೀತೆಂದು ಬಾಯಿ ತೆರೆದಿದ್ದ ಗ್ರೀಸ, ಇರಾಣ, ಸಿರಿಯಾ, ಲೆಬನಾನ ಮತ್ತು ಇಂಡೋನೇಶಿಯಾ ರಾಷ್ಟ್ರಗಳು ನಿರಾಶೆಯಿಂದ ಬಾಯಿ ಮುಚ್ಚಿಕೊಂಡು ತಿರುಗಬೇಕಾಯಿತು. ಯಜಮಾನನನ್ನು ಸಂತಯಿಸದೆ ಅವುಗಳಿಗೆ ಮುಕ್ತಿಯಿಲ್ಲದಾಗಿದೆ. ಇತ್ತ ಅವುಗಳ ಗೋಳಾಟ, ಅತ್ತ ಬ್ರಿಟನ ಮತ್ತು ರಶಿಯಗಳ ಚಿನ್ನಾಟ ಹಾಗೂ ತಿಕ್ಕಾಟ. ಈ ಘರ್ಷಣದಿಂದ ಕಿಡಿ ಹೊತ್ತುವದಿಲ್ಲವೆಂದು ಯಾರು ಹೇಳಬಲ್ಲರು? ರಶಿಯಾವು ಇದೇ ಎಪ್ರಿಲದಲ್ಲಿ ತುರ್ಕಸ್ತಾನದ ಮೇಲೆ ಯುದ್ಧ ಹೂಡುವದು ನಿಶ್ಚಿತವೆಂದು ಡ್ರ್ಯೂ ಪಿಯರ್ಸನ್ನರೆಂಬ ಅಮೇರಿಕೆಯ ಪ್ರಸಿದ್ಧ ಸುದ್ದಿಗಾರರು ಭವಿಷ್ಯ ನುಡಿದಿರುವರು. ಅದೇಕೆ, ಜಾಗತಿಕ ಯುದ್ಧವೇ ಪ್ರಾರಂಭವಾಗಲಿದೆಯೆಂದು ಡಂಟರ ವಾಕರು 'ವಾಶಿಂಗ್ಟನ್ ಜರ್ನಲ್' ಪತ್ರಿಕೆಯಲ್ಲಿ ಬರೆದಿದ್ದಾರೆ ರಶಿಯವು ತುರ್ಕಸ್ತಾನದ ಮೇಲೆ ದಾಳಿ ಮಾಡುವದು ಮತ್ತು ಬ್ರಿಟನ ತುರ್ಕಸ್ತಾನದ ನೆರವಿಗೆ ಧಾವಿಸುವದರಿಂದ ವಿಶ್ವಮೇಧ ಹೊತ್ತಿಕೊಳ್ಳುವದೆಂದು ಅವರ ಅಭಿಪ್ರಾಯ. ಯುದ್ಧವು ಪ್ರಾರಂಭವಾಗಲಿ ಅಥವಾ ಆಗದಿರಲಿ, ಎರಡನೆಯ ಮಹಾಯುದ್ಧದಿಂದ ಉದ್ಬೋಧದ ರಾಕ್ಷಸೀ ಮಹತ್ವಾಕಾಂಕ್ಷೆಯ ರಾಷ್ಟ್ರಗಳಿಗೆ ಬುದ್ಧಿ ಬರಲಿಲ್ಲವೆಂದು ಹೇಳಲು ನಮಗೆ ದುಃಖವಾಗುತ್ತದೆ.

“ಇದು ಶ್ರೀಮಂತರ ಮುಂಗಡ ಪತ್ರಿಕೆ”

ಕೇಂದ್ರ ಶಾಸನ ಸಭೆಯಲ್ಲಿ ಕಠೋರ ಟೀಕೆ, ಅರ್ಥಸಚಿವರ ಸಮಾಧಾನದ ಉತ್ತರ, ರೇಲ್ವೆ ಅಪಘಾತದ ಬಗ್ಗೆ ನಿಲುವಳಿ

ಹೊಸ ಮುಂಗಡಪತ್ರ

ಕೇಂದ್ರ ಸರಕಾರದ ಆರ್ಥಿಕ ಮಂತ್ರಿಗಳಾದ ಆರ್ಚಿಬಾಲ್ಡ ರೌಲಂಡ್ಸರು ತಮ್ಮ ಮೊದಲನೆ ಮತ್ತು (ಅವರು ಬಣ್ಣಿಸಿದಂತೆ) ಕೊನೆಯ ಮುಂಗಡ ಪತ್ರವನ್ನು ತಾ. ೨೮ಕ್ಕೆ ಮಂಡಿಸಿದರು. ಒಟ್ಟಿನ ಮೇಲೆ ಅದರಲ್ಲಿ ಕೆಲ ಗುಣಗಳಿದ್ದರೂ ಅದು ಶ್ರೀಮಂತನಿಗೆ ಪ್ರಿಯವಾದ ಮುಂಗಡ ಪತ್ರಿಕೆಯಾಗಿತ್ತೆಂಬಲ್ಲಿ ಸಂದೇಹನಿಲ್ಲ. ಅದು ಕೊಟ್ಟ ಅತಿ ಮಹತ್ವದ ಕರಪರಿಹಾರವೆಂದರೆ ಅಧಿಕ ಲಾಭದ ಮೇಲಿನ ವಿಶೇಷ ಕರವನ್ನು ತಾ. ೩೧-೩-೪೬ ರಿಂದ ರದ್ದುಗೊಳಿಸುವದು.

ಇದಲ್ಲದೆ ಅದು ಕೊಟ್ಟ ಕರ ಪರಿಹಾರದ ವಿವರ ಈ ಕೆಳಗಿನಂತಿದೆ.

ಚಿಮಣಿಎಣ್ಣೆ ಸುಂಕವನ್ನು ಗ್ಯಾಲನ್ನಿಗೆ ರೂ. ೦-೪-೬ ರಿಂದ ೦-೩-೯ ಗಿಳಿಸುವದು- ಪೆಟ್ರೋಲಿನ ಸುಂಕವನ್ನು ೧೫ ಆಣೆಯಿಂದ ೧೨ ಆಣೆಗಿಳಿಸುವದು.

೩೫೦೦ ವರೆಗಿನ ಎರಡನೆ ವರ್ಗದ ಉತ್ಪನ್ನದ ಮೇಲಿನ ಕರವನ್ನು ರೂಪಾಯಿಗೆ ೧೫ ಪೈಯಿಂದ ೧೨ ಪೈಗಿಳಿಸುವದು. ೫೦೦೦ ವರೆಗಿನ ಮೂರನೆ ವರ್ಗದ ತೆರಿಗೆಯನ್ನು ೨೫ ಪೈಯಿಂದ ೨೪ ಪೈಗಿಳಿಸುವದು. ಇನ್‌ಕಂ ಟ್ಯಾಕ್ಸ ಸುಪರ ಟ್ಯಾಕ್ಸಗಳ ಮೇಲಿನ ಸರ್ ಚಾರ್ಜಗಳನ್ನು ಸೇರಿಸಿ ಒಂದೇ ಮಾಡಬೇಕು.

ಕಂಪನಿಗಳ ಮೇಲಿನ ಇನ್‌ಕಂಟ್ಯಾಕ್ಸ ಮತ್ತು ಸುಪರ ಟ್ಯಾಕ್ಸ ರೂಪಾಯಿಗೆ ೦-೭-೯ ಯಿಂದ ೦-೬-೦ ಗಿಳಿಯಬೇಕು.

ಸಂಪಾದಿತ ಉತ್ಪನ್ನದ ಮೇಲೆ ಪರಿಹಾರಕೊಡುವ ಪ್ರಮಾಣವನ್ನು ನೂರಕ್ಕೆ ೨೦ ರಿಂದ ೧೦೦ಕ್ಕೆ೧೦ಕ್ಕೇರಿಸುವದು. ಆದರೆ ಪರಿಹಾರಯೋಗ್ಯ ಉತ್ಪನ್ನದ ಪರಮಾವಧಿ ರೂ. ೪೦೦೦ ಇರಬೇಕು. ಸಂಪಾದಿತ ಅಸಂಪಾದಿತ ಉತ್ಪನ್ನಗಳ ಮೇಲಿನ ಕರದಲ್ಲಿನ ಈ ಪಕ್ಷಪಾತ ಸುಪರಟ್ಯಾಕ್ಸಿಗೂ ಅನ್ವಯಿಸಲ್ಪಡಬೇಕು.

ವಿಮಾ ಕಂಪನಿಗಳ ಮೇಲಿನ ಕರ ೦-೫-೩ ಯಿಂದ ೦-೫-೦ ಗಿಳಿಸಬೇಕು.

೬೦೦೦ ವರೆಗಿನ ಉತ್ಪನ್ನಗಳ ಮೇಲಿನ ಕರದಿಂದ ಕೆಲ ಅಂಶಗಳನ್ನು ನಿಧಿಯಾಗಿಡುವದನ್ನು ನಿಲ್ಲಿಸುವದು.

ಹೊಸ ಕಟ್ಟಡಗಳ ಮೇಲೆ ನೂರಕ್ಕೆ ೧೦ ಮತ್ತು ಹೊಸ ಯಂತ್ರ ಸಾಮುಗ್ರಿಗಳ ಮೇಲೆ ನೂರಕ್ಕೆ ೨೦ ರಂತೆ ಸವಕಳಿ ವಜಾ ಮಾಡಲು ಮತ್ತು ವೈಜ್ಞಾನಿಕ ಸಂಶೋಧನದ ವೆಚ್ಚದ ಬಗ್ಗೆ, ಸವಲತ್ತು ಕೊಡುವದು.

ಉದ್ಯೋಗಗಳಿಗಾಗಿ ಆಯಾತ ಮಾಡಿದ ಯಂತ್ರ ಸಾಮುಗ್ರಿಗಳ ಮೇಲೆ ಸುಂಕದಲ್ಲಿ ಪರಿಹಾರ.

ಅರ್ಥಸಚಿವರು ಸೂಚಿಸಿದ ಹೊಸ ಕರಭಾರ ಹೀಗಿದೆ—

ಚಿನ್ನದ ಮೇಲೆ ತೊಲೆಗೆ ರೂ. ೨೫ ಮತ್ತು ಬೆಳ್ಳಿಯ ಮೇಲೆ ಈಗಿರುವ ೩ ಆಣೆ ೭-೧/೫ ಪೈ ಬದಲಿಗೆ ೦-೮-೦ ಆಯಾತ ಸುಂಕ.

೧೫೦೦೦ ಕ್ಕಿಂತ ಮಿಕ್ಕಿದ ಹೆಚ್ಚಿನ ಉತ್ಪನ್ನದ ಮೇಲಿರುವ ಕರವನ್ನು ೦-೪-೯ ಯಿಂದ ೦-೫-೦ ಗೇರಿಸುವದು.

ಆಯಾತ ಮಾಡಿದ ಅಡಿಕೆಯ ಕರ ಪೌಂಡಿಗೆ ೦-೫-೦ ಗೇರಿಸುವದು. ಸರಚಾರ್ಜ ಇಲ್ಲ.

೧೯೪೨ ರ ಅರಳೆ ನಿಧಿ ಆರ್ಡಿನೆನ್ಸದನ್ವಯ ಹಾಕಿದ ಹೆಚ್ಚಿನ ಅರಳೆ ಆಯಾತ ಸುಂಕವನ್ನು ಸಾಮಾನ್ಯ ಸುಂಕದೊಡನೆ ಸೇರಿಸುವದು. ಅದೀಗ ಒಟ್ಟು ಪೌಂಡಿಗೆ ೦-೨-೦ ಆಗುವದು. (ಇದರಿಂದ ಹೆಚ್ಚು ಉತ್ಪನ್ನ ಬರುವ ನಿರೀಕ್ಷೆಯಿಲ್ಲ.)

ಸಿನೆಮಾ ಫಿಲ್ಮಗಳ ಮೇಲಿನ ಸುಂಕವನ್ನು ಫೂಟ ಅಳತೆಯ ಆಧಾರದ ಮೇಲೆ ವಿಶಿಷ್ಟ ಕರವೆಂದು ಹೇರುವದು.

ಹೆಚ್ಚಿನ ಮಾನದಲ್ಲಿ ಕಂಪನಿಗಳು ಲಾಭ ಹಂಚದಂತೆ ಲಾಭ ಹಂಚಿಕೆಯ ಮೇಲೆ ಹೆಚ್ಚಿನ ಕರ ಹೊರಿಸಬೇಕೆಂಬ ಸೂಚನೆಯೂ ಇದೆ.

ಆಯ-ವ್ಯಯ

೧೯೪೬—೪೭ ರಲ್ಲಿ ನಾಗರಿಕ ವೆಚ್ಚ ರೂಪಾಯಿ ೧೧೧.೯೪ ಕೋಟಿ, ಸಂರಕ್ಷಣ ವೆಚ್ಚ ರೂ. ೨೪೩.೭೭ ಕೋಟಿ ಒಟ್ಟು ರೂ. ೩೫೫.೭೧ ಕೋಟಿ. ಈಗಿನ ಉತ್ಪನ್ನ ದರದಲ್ಲಿ ಉತ್ಪನ್ನ ೩೦೭ ಕೋಟಿ, ಕೊರತೆ ರೂ. ೪೮.೭೧ ಕೋಟಿ, ಎಂದು ರೌಲಂಡ್ಸರು ಹೇಳಿದರು. ಸಂರಕ್ಷಣ ವೆಚ್ಚದ ಅಂಕೆ ಕಳೆದ ವರ್ಷಕ್ಕಿಂತ ಕಡಿಮೆಯಾಗಿದ್ದರೂ ಒಟ್ಟು ವೆಚ್ಚದ ದೊಡ್ಡ ಅಂಶವಾಗಿಯೆ ಉಳಿದಿದೆ. ಹಿಂದಿನ ವರ್ಷ ಬ್ರಿ. ಸರಕಾರ ಸಂರಕ್ಷಣ ವೆಚ್ಚದಲ್ಲಿ ೪೮೯ ಕೋಟಿಯಷ್ಟು ಭಾಗ ಹೊತ್ತಿದ್ದರೆ, ಮುಂದಿನ ವರ್ಷ ಬರಿ ೪೨ ಕೋಟಿ ಮಾತ್ರ ಹೊರುವದು.

ಹೊಸ ಕರ ಯೋಜನೆಗಳ ಪರಿಣಾಮವನ್ನು ವಿವರಿಸುತ್ತ, ಉತ್ಪನ್ನ ಕರ ಇಳಿಸಿದ್ದರಿಂದ ೨೧.೫ ಕೋಟಿ ಉತ್ಪನ್ನ ಕಡಿಮೆಯಾಗಿ ಜಕಾತಿ ಮತ್ತು ಸುಂಕಗಳ ಏರಿಕೆಯಿಂದ ೫ ಲಕ್ಷ ಉತ್ಪನ್ನ ಹೆಚ್ಚುವದೆಂದೂ ಹೀಗೆ ನಿಜವಾದ ಕೊರತೆ ೭೦.೧೬ ಕೋಟಿಯಾಗುತ್ತಿದ್ದು ಯುದ್ಧ ಗಂಡಾಂತರ ವಿಮಾ ನಿಧಿಯಿಂದ ೨೬.೧೦ ಕೋಟಿ ತೆಗೆದುಕೊಂಡು ಕೊರತೆಯನ್ನು ರೂ. ೪೪.೦೬ ಕೋಟಿಗಿಳಿಸಲಾಗುವದೆಂದೂ ಅವರು ಹೇಳಿದರು.

ಈ ವರ್ಷದ ಕೊರತೆಯಲ್ಲಿ ಹಿಂದಿನಂತೆ ಹೆಚ್ಚಿನ ಅಂಶವನ್ನು ಸಾಲಗಳಿಂದಲೇ ತುಂಬಿಕೊಳ್ಳಬೇಕೆಂದು ಅರ್ಥ ಸಚಿವರು ಸೂಚಿಸಿದರು.

ಸ್ಟರ್ಲಿಂಗ್ ಸಾಲಗಳ ಬಗ್ಗೆ ಬ್ರಿಟಿಶ ಸರಕಾರದೊಡನೆ ಯಾವುದೇ ಬಗೆಯ ಗುಪ್ತ ಒಪ್ಪಂದವನ್ನು ಹಿಂದುಸ್ತಾನ ಸರಕಾರ ಮಾಡಕೊಂಡಿಲ್ಲವೆಂದೂ ಆ ಪ್ರಶ್ನೆ ಮುಂದಿನ ಸರಕಾರದ ಕೈಯಲ್ಲಿದೆಯೆಂದೂ ಅರ್ಥಸಚಿವರು ಸ್ಪಷ್ಟಗೊಳಿಸಿದರು.

ಟೀಕೆಗಳು

ಮುಂಗಡ ಪತ್ರಿಕೆಯ ಮೇಲೆ ತಾ. ೪-೫ಕ್ಕೆ ನಡೆದ ಸಾಮಾನ್ಯ ಚರ್ಚೆಯಲ್ಲಿ ಮುಖ್ಯವಾಗಿ ಟೀಕೆ ಮುಂಗಡ ಪತ್ರಿಕೆಯ ಶ್ರೀಮಂತ ಪಕ್ಷಪಾತ ಮತ್ತು ಸರಕಾರಿ ದುಂದುಗಾರಿಕೆಯ ಅಂಶಗಳ ಮೇಲೆಯೇ ಇತ್ತು. ಚರ್ಚೆಯನ್ನು ಪ್ರಾರಂಭಿಸಿದ ಲೀಗ ಪಕ್ಷದ ಯಾಮೀನಖಾನರು ವಾಯಿಸರಾಯರ ವೆಚ್ಚ ಕಳೆದ ವರ್ಷಕ್ಕಿಂತ ಅರ್ಧ ಕೋಟಿ ಹೆಚ್ಚಿ ಈ ವರ್ಷ ೨ ಕೋಟಿಗೆ ಮುಟ್ಟಿದ್ದನ್ನು ಟೀಕಿಸಿ, ಇದು ವಾಯಿಸರಾಯರ ಗುಪ್ತ ಖಾತೆಯ ವೆಚ್ಚವಾಗಿದ್ದು ಅದರ ಮೇಲೆ ಶಾಸನ ಸಭೆಯ ನಿಯಂತ್ರಣವಿಲ್ಲದಿದ್ದರೂ ಆ ಹಣ ಬೋರೇಗೌಡನಿಂದ ಬಂದದ್ದೆಂದು ನೆನವರಿಕೆ ಮಾಡಿಕೊಟ್ಟರು. ಕಾಂಗ್ರೆಸ ಧುರೀಣ ಆಸಫಅಲ್ಲಿಯವರು “ಬ್ರಿಟಿಶ ಹಿಂದುಸ್ತಾನ” ಶಬ್ದಕ್ಕೇ ಆಕ್ಷೇಪ ತೆಗೆದುಕೊಂಡರು. ಲೆ. ಕ. ಚತರ್ಜಿ (ನಾಮಕರಣ ಕ್ರಿಶ್ಚಿಯನ್) ಯವರು ಇಂದಿನ ಹಿಂದುಸ್ತಾನ ಸರಕಾರಕ್ಕೆ “ರದ್ದೀ ಕಾಗದದ ಸರಕಾರ” ವೆಂದು ಹೆಸರಿಟ್ಟು ದಿಲ್ಲಿಯಲ್ಲಿ ಅಪಾರವಾಗಿ ಹೆಚ್ಚಿರುವ ಸರಕಾರಿ ಕಚೇರಿಗಳು ಮತ್ತು ಅಲ್ಲಿಯ ನೌಕರರ ಗೀಚಿದ ಕಾಗದಗಳ ರದ್ದೀ ರಾಶಿಯನ್ನು ವಿನೋದದಿಂದ ಟೀಕಿಸಿದರು. ಅಧಿಕ ಲಾಭದ ಕರವನ್ನು ರದ್ದುಗೊಳಿಸಿದ್ದಕ್ಕೆ ಅವರ ಆಕ್ಷೇಪವಿತ್ತು. ಶ್ರೀ ನಾರಾಯಣಮೂರ್ತಿ (ಕಾಂ) ಅಡಿಕೆ ಮತ್ತು ತಂಬಾಕದ ಮೇಲಿನ ಕರವನ್ನು ವಿರೋಧಿಸಿದರು ಲೀಗ ಪಕ್ಷದ ನೌಮನ್ನರು ಮುಂಗಡ ಪತ್ರಿಕೆಯನ್ನು “ಶ್ರೀಮಂತರನ್ನು ಮತ್ತೂ ಶ್ರೀಮಂತರಾಗಿಯೂ ಬಡವರನ್ನೂ ಇನ್ನೂ ಬಡವರಾಗಿಯೂ ಮಾಡುವ”ದೆಂದು ನಿಂದಿಸಿದ್ದಲ್ಲದೆ ಬ್ರಿಟಿಶರು ಸ್ಟರ್ಲಿಂಗ ಸಾಲಗಳನ್ನು ತೀರಿಸಲಾರದಿದ್ದರೆ ಹಿಂದುಸ್ತಾನದಲ್ಲಿರುವ ಬ್ರಿಟಿಶ ಸೊತ್ತುಗಳನ್ನು ನಮಗೆ ಮಾರಿ ಸಾಲ ತೀರಿಸಲೆಂದು ಕಠೋರವಾಗಿ ಹೇಳಿದರು. ಖಾನ ಅಬ್ದುಲ್ ಗನಿಖಾನರು (ಕಾಂ) ಗಡಿನಾಡಿನ ಬಗ್ಗೆ ಸರಕಾರ ತೋರಿಸಿದ ಅನಾಸ್ಥೆಯನ್ನು ಖಂಡಿಸಿದರು. ಶ್ರೀ ದ. ಪ. ಕರಮರಕರರು ತಮ್ಮ ಸಮರ್ಥ ಭಾಷಣದಲ್ಲಿ ಮುಂಗಡ ಪತ್ರಿಕೆಯ ಶ್ರೀಮಂತ ಪಕ್ಷಪಾತವನ್ನು ಪೃಥಕ್ಕರಿಸಿ ತೋರಿಸಿ ಸುದ್ದಿ ಖಾತೆಯನ್ನು ವಿಸ್ತರಿಸಿದ ಕಡೆಗೆ ಬೊಟ್ಟು ಮಾಡಿ ಇಂದು ಹಿಂದುಸ್ತಾನಕ್ಕೆ ಬೇಕಾಗಿರುವದು ಆಹಾರ, ಹೆಚ್ಚು ಸುದ್ದಿಯಿಲ್ಲ ಎಂದರು (ನಗು) ಶ್ರೀ ಗುರುಸ್ವಾಮಿಯವರು ಯುದ್ಧದ ಒತ್ತಡದಿಂದ ಕೂಲಿಕಾರರಿಗೆ ಕೊಟ್ಟಿದ್ದ ಸವಲತ್ತುಗಳು ಮಾಯವಾಗುವ ಭಯವನ್ನು ವ್ಯಕ್ತಗೊಳಿಸಿ ಅಧಿಕಲಾಭದ ತೆರಿಗೆ ರದ್ದುಗೊಳಿಸಿದ್ದನ್ನು ಟೀಕಿಸಿದರು. ಅಹ್ಮದ ಜಾಫರ (ಲೀಗ) ರಿಗೆ ಪಾಕಿಸ್ತಾನ ಭಾಗದಲ್ಲಿ ಉದ್ಯೋಗಗಳಿಲ್ಲದಿರುವುದಕ್ಕೆ ವಿಷಾದವಾಯಿತು. ಅರ್ಥಸಚಿವರು, ಯಾರೂ ತಮಗೆ ಶಭಾಸಗಿರಿ ಕೊಡದಿದ್ದರೂ ಅದಕ್ಕಾಗಿ ವ್ಯಸನಪಡಲಿಲ್ಲ. ಅಧಿಕ ಲಾಭದ ಕರ ಕಿತ್ತಿಹಾಕಿದ್ದರಿಂದ ಶ್ರೀಮಂತರಿಗೆ ಉಪಕಾರ, ಬಡವರಿಗೆ ಅಪಕಾರವಾಯಿತೆಂಬುದನ್ನು ಅವರು ನಿರಾಕರಿಸಿದರು. ಈ ತೆರಿಗೆ ತೆಗೆದುಹಾಕಿದ್ದರಿಂದ ಉದ್ಯೋಗಗಳ ಬೆಳವಣಿಗೆಯಾಗಿ ಜನಹಿತವಾಗುವದೆಂದು ಅವರು ಸಾಧಿಸಿದರು. ಅಪ್ರತ್ಯಕ್ಷಕರ ಇಳಿಸಲು ಅವರು ಸಿದ್ಧರಾಗಿದ್ದರು. ಇದನ್ನು ಹೇಗೆ ಕಾರ್ಡುಗಳನ್ನು ಸೋವಿ ಮಾಡಿಯೋ, ಕಡ್ಡಿಪೆಟ್ಟಿಗೆ ದರ ಇಳಿಸಿಯೋ ಇನ್ನಾವ ವಿಧದಲ್ಲಿಯೊ—ಮಾಡಬೇಕೆಂಬುದನ್ನು ಮುಂದೆ ನಿರ್ಧರಿಸೋಣವೆಂದರು. ಸರಕಾರಿ ನೌಕರರ ಸಂಬಳ ಹಿಂದುಸ್ತಾನದಲ್ಲಿ ಅತಿ ಹೆಚ್ಚೆಂಬುದನ್ನು ಅವರು ಒಪ್ಪಿಕೊಂಡರು. ಅದನ್ನು ಪುನರ್ವಿಮರ್ಶೆ ಮಾಡುವದವಶ್ಯವೆಂದು ಅವರು ಹೇಳಿದರು ಕೊನೆಯಲ್ಲಿ ಅವರು ಹಿಂದುಸ್ತಾನದ ಆಹಾರ ಪೂರೈಕೆಗೆ ಬೇಕಾದ ಹಣವನ್ನೊದಗಿಸುವದಾಗಿಯೂ ಬಡತನದ ನಿವಾರಣೆಗಾಗಿ ಪ್ರಯತ್ನಿಸುವದಾಗಿಯೂ ಆಶ್ವಾಸನವಿತ್ತರು.

ಇತರ ಕಾರ್ಯಕಲಾಪ

ಮುಂಗಡ ಪತ್ರಿಕೆಯೇ ಈ ವಾರ ಶಾಸನಸಭೆಯ ದೊಡ್ಡ ಸಂಗತಿಯಾಗಿತ್ತು. ಆದರೆ ತಾ. ೬ ಕ್ಕೆ ಶ್ರೀ ಅನಂತಶಯನಂ ಅಯ್ಯಂಗಾರರು ಭಾಗಾವಲ್ಲಿ ಭಾಗದಲ್ಲಿ ಎರಡು ರೇಲು ಗಾಡಿಗಳು ಢಿಕ್ಕಿ ಹೊಡೆದು ೪೩ ಜನ ಸತ್ತು ೫೬ ಕ್ಕಿಂತಲೂ ಹೆಚ್ಚು ಜನರಿಗೆ ನೋವಾದ ಸಂಬಂಧದಲ್ಲಿ ಮಂಡಿಸಿದ ನಿಲುವಳಿ ಸೂಚನೆ ಬಹುಮತದಿಂದ ಅಂಗೀಕೃತವಾಗಿ ಸರಕಾರಕ್ಕೆ ಸೋಲಾಯಿತು. ಮೇಲಿಂದ ಮೇಲೆ ರೇಲ್ವೆ ಅಪಘಾತಗಳು ಆಗುತಿದ್ದು ಅದನ್ನು ತಡೆಯಲು ಸರಕಾರ ಅಸಮರ್ಥವಾದುದನ್ನು ಟೀಕಿಸಲು ಅಯ್ಯಂಗಾರರು ನಿಲುವಳಿ ಮಂಡಿಸಿದ್ದರು.

ತಾ. ೧ಕ್ಕೆ ಬ್ರಿಟನವುಡನ ಒಪ್ಪಂದದಲ್ಲಿ ಹಿಂದುಸ್ತಾನ ಭಾಗಿಯಾಗುವ ವಿಷಯದಲ್ಲಿ ಉಪಸಮಿತಿ ಸಿದ್ಧಗೊಳಿಸಿದ ವರದಿ (ವಿವರಕ್ಕೆ ಹಿಂದಿನ ಕರ್ಮವೀರ ನೋಡಿರಿ) ಯ ಮೇಲೆ ಚರ್ಚೆಯಾಗಿ ಅದು ಸ್ವೀಕೃತವಾಗಬೇಕಾದರೆ ಸ್ವಲ್ಪ ಬಿಸಿ ಬಿಸಿ ಚರ್ಚೆಯಾಯಿತು. ಶ್ರೀ ಮನು ಸುಬೇದಾರರು ಸ್ಟರ್ಲಿಂಗ್ ಶಿಲ್ಕುಗಳನ್ನು ತೀರಿಸಲು ಹಿಂದುಸ್ತಾನದಲ್ಲಿರುವ ಬ್ರಿಟಿಶ ಪ್ರಜೆಗಳ ಆಸ್ತಿಗಳನ್ನು ಹಿಂದುಸ್ತಾನಕ್ಕೆ ಒಪ್ಪಿಸಬೇಕಾಗಿತ್ತೆಂದು ಹೇಳಿದ್ದಕ್ಕೆ ಯುರೋಪಿಯನ್ ಪಕ್ಷದ ಟಾಯಸನ್ನರು ವಿರೋಧವೆತ್ತಿ ಬ್ರಿಟನ್ನು ಹೇಗಾದರೂ ತನ್ನ ಸಾಲ ತೀರಿಸಿ ಗೌರವ ಉಳಿಸಿಕೊಳ್ಳುವದೆಂದೂ ಆದರೆ ಈ ಸಾಲಗಳ ನೆವ ಹೇಳಿ ಬ್ರಿಟಿಶ ಆಸ್ತಿಗಳನ್ನು ಕಸಿದುಕೊಂಡು ನಮ್ಮನ್ನು ಶೋಷಿಸುವದನ್ನು ಸಹಿಸಲಾರೆವೆಂದೂ ಹೇಳಿದರು. ಮನು ಸುಬೇದಾರರು ಅದಕ್ಕುತ್ತರವಾಗಿ ಹಿಂದುಸ್ತಾನದಲ್ಲಿರುವ ಬ್ರಿಟಿಶರು ಹಿಂದೀಯರೆಂದು ಕರೆಸಿಕೊಳ್ಳಲು ಬಯಸುವದಿಲ್ಲವಾದುದರಿಂದಲೇ ಅವರ ಆಸ್ತಿಗಳನ್ನು ಕಲೆ ಹಾಕಿ ತೆಗೆದುಕೊಳ್ಳುವ ಅವಶ್ಯಕತೆ ಬಂತೆಂದೂ ಇಲ್ಲದಿದ್ದರೆ ಬ್ರಿಟಿಶರನ್ನು ಶೋಷಣೆ ಮಾಡುವ ಉದ್ದೇಶ ತಮಗಿಲ್ಲವೆಂದೂ ಹೇಳಿದರು. ಲೀಗದ ಝಿಯಾವುದ್ದೀನರು “ಸ್ಟರ್ಲಿಂಗ್ ಶಿಲ್ಕು ಬ್ರಿಟಿಶರಿಗೆ ದಾನವಾಗಿ ಕೊಟ್ಟದ್ದಲ್ಲ”ವೆಂದು ಕಟೂಕ್ತಿಯನ್ನಾಡಿದರೆ ಸಿದ್ದಿಕಿಯವರು ಸ್ಟರ್ಲಿಂಗ್ ಶಿಲ್ಕುಗಳು ಹಿಂದೀ ಬಡವನಿಂದ ಬ್ರಿಟಿಶರುಸುಲಿದ ಹಣವೆಂದು ಹೇಳಿದರು. ಹಣಕಾಸಿನ ಮಂತ್ರಿಗಳು ಹಿಂದೀ ಬೇಡಿಕೆಗೆ ಬೆಂಬಲವಿತ್ತರು.

ಪ್ರಾಂತ ರಾಜಕಾರಣ

ಪಂಜಾಬದಲ್ಲಿ ಸಮ್ಮಿಶ್ರ ಮಂತ್ರಿಮಂಡಲ

ಕಾಂಗ್ರೆಸ್ಸಿಗೆ ಪೂರ್ಣ ಬಹುಮತವಿಲ್ಲದ ಪ್ರಾಂತಗಳಲ್ಲಿ ಕಾಂಗ್ರೆಸ್ ಸೇರಿ ಸಮ್ಮಿಶ್ರ ಮಂತ್ರಿಮಂಡಲವಾಗುತ್ತಿರುವದು ಪಂಜಾಬದಲ್ಲಿಯೇ ಮೊದಲನೆಯದೇನು ತೋರುತ್ತದೆ. ಒಂದು ವಾರಕ್ಕಿಂತಲೂ ಮಿಕ್ಕಿದ ಚರ್ಚೆ ಸಂಧಾನ, ಮಾತುಕತೆಗಳ ನಂತರ ಅಧ್ಯಕ್ಷ ಅಜಾದರ ಪ್ರಯತ್ನದಿಂದ ಕಾಂಗ್ರೆಸ್, ಅಕಾಲಿ ಮತ್ತು ಯೂನಿಯನಿಸ್ಟ ಪಕ್ಷಗಳನ್ನೊಳಗೊಂಡ ಸಮ್ಮಿಶ್ರ ಪಕ್ಷವನ್ನು ಸ್ಥಾಪಿಸಿ ಯೂನಿಯನಿಸ್ಟ ಮುಖಂಡರಾದ ಮಲಿಕ ಖಿಜರ ಹಯಾತರನ್ನು ನಾಯಕರಾಗಿ ಮಾಡಲಾಯಿತು. ಮೂರು ಯೂನಿಯನಿಸ್ಟ, ಎರಡು ಕಾಂಗ್ರೆಸ್, ಒಬ್ಬ ಆಕಾಲಿ ಸಭಾಸದರನ್ನೊಳಗೊಂಡು ೬ ಜನರ ಮಂತ್ರಿಮಂಡಲ ರಚಿಸಬೇಕೆಂದು ಒಪ್ಪಂದವಾಗಿದೆ. ಗವ್ಹರ್ನರರು ಖಿಜರಹಯಾತರನ್ನು ಮಂತ್ರಿ ಮಂಡಲ ರಚಿಸಲು ಕರೆದಿದ್ದಾರೆ. ಇದರಿಂದ ಲೀಗ ವರ್ಗಗಳಲ್ಲಿ ಬಹಳಉದ್ವೇಗವುಂಟಾಗಿದೆ. ಯಾವ ಆಧಾರದಿಂದಲೋ ಏನೋ ತಮಗೆ ೮೮ಜನ ಸದಸ್ಯರ ಬಹುಮತದ ಬೆಂಬಲವಿದೆಂದು ಲೀಗ ಪಕ್ಷದ ಮುಂದಾಳಾದ ಮಮದೋತ ನವಾಬರು ಹೇಳುತಿದ್ದಾರೆ. ನವಾಬಜಾದಾ ಲಿಯಾಕತ್ ಅಲ್ಲಿಖಾನರು ಬಹುಸಂಖ್ಯಾಕ ಮುಸ್ಲಿಮ ಪ್ರಾಂತದಲ್ಲಿ ಅಲ್ಪಸಂಖ್ಯಾಕರ ಮಂತ್ರಿಮಂಡಲ ರಚಿಸುವದರಿಂದ “ಭಯಂಕರ” ಪರಿಣಾಮವಾಗದಿರದೆಂದು ಗವರ್ನರರಿಗೆ ಬೆದರಿಕೆ ಹಾಕಿದ್ದಾರೆ. ಖಿಜರ ಹಯಾತರ ವಿರುದ್ಧ ಮುಸ್ಲಿಮ ವಿದ್ಯಾರ್ಥಿಗಳ ಪ್ರದರ್ಶನವೂ ಆಯಿತು, ಆದರೆ ಮೊದಲು ಲೀಗ ಕಾಂಗ್ರೆಸ್ ಸಹಕಾರದಿಂದ ಮಂತ್ರಿಮಂಡಲ ರಚಿಸಲು ಕಾಂಗ್ರೆಸ್ಸು ಸಿದ್ಧವಿತ್ತು. ಲೀಗ, ಆಕಾಲಿ, ಕಾಂಗ್ರೆಸ್ ಪಕ್ಷಗಳಿಗೆ ಸಮಾನ ಮಂತ್ರಿಪದಗಳು ದೊರಕಬೇಕು, ಕಾಂಗ್ರೆಸ್ ಚುನಾವಣೆ ಘೋಷಣೆಯೇ ಮಂತ್ರಿಮಂಡಲದ ಕಾರ್ಯಕ್ರಮವಿರಬೇಕು, ಶಾಸನ ಸಭೆಯಲ್ಲಿ ಪಾಕಿಸ್ತಾನದ ಪ್ರಶ್ನೆಯೆತ್ತಬಾರದು, ಎಂಬ ಕಾಂಗ್ರೆಸ್ ಕರಾರಿಗೆ ಲೀಗು ಒಪ್ಪದ್ದರಿಂದಲೇ ಆ ಮಾತು ಅಯಶಸ್ವಿಯಾಯಿತೆಂದು ಅಧ್ಯಕ್ಷ ಅಝಾದರು ಪ್ರಕಟಿಸಿದ್ದಾರೆ.

ವಿಜಯ ಮಾಲೆ

ಚುನಾವಣೆ ಆಗುತ್ತಾಗುತ್ತ ಕಾಂಗ್ರೆಸ್ಸಿಗೆ ವಿವಿಧ ಪ್ರಾಂತಗಳಲ್ಲಿ ಅಪೂರ್ವ ಯಶಸ್ಸು ಗೋಚರವಾಗುತ್ತಿದೆ. ಯುಕ್ತಪ್ರಾಂತದಲ್ಲಿ ಕಾಂಗ್ರೆಸ್ಸು ... ಅವಿರೋಧ ಸ್ಥಾನಗಳನ್ನು ದೊರಕಿಸಿದ್ದರೆ ಮ... ಸದಲ್ಲಿ ೬೪ ದೊರೆತಿವೆ. ಓಡಿಸಾ ಚುನಾವಣೆ ಮುಗಿದಿದ್ದು ೬೦ ಸ್ಥಳಗಳ ಶಾಸನ ಸಭೆಯಲ್ಲಿ ೩೪ ಸ್ಥಾನಗಳು ಕಾಂಗ್ರೆಸ್ಸಿಗೆ ಸಿಕ್ಕಿವೆ. ಇನ್ನೂ ಹಲವು ಸ್ಥಾನಗಳಪರಿಣಾಮ ಹೊರಬೀಳಬೇಕಷ್ಟೆ. ಮಧ್ಯಪ್ರಾಂತದಿಂದಲೂ ಅಷ್ಟೇ ಸಂತೋಷದಸುದ್ದಿಗಳು ಬರುತ್ತಿವೆ.

ಗುಂಡಾಗಿರಿ

ಮುಸ್ಲಿಮರ ಭೋಳೇ ಧಾರ್ಮಿಕ ಭಾವನೆಗಳನ್ನು ಉದ್ರೇಕಿಸಿ ಚುನಾವಣೆಗಳಲ್ಲಿ ಹೆಚ್ಚಿನ ಯಶಸ್ಸು ಸಂಪಾದಿಸಿದರೂ ಹಿಂದುಸ್ತಾನದ ವಿಶಿಷ್ಟ ಪರಿಸ್ಥಿತಿಯ ಮತ್ತು ಕಾಂಗ್ರೆಸ್ಸದ ಹೊಸ ಧೋರಣೆಯ ಫಲವಾಗಿ ಅಧಿಕಾರದ ಗದ್ದುಗೆಯನ್ನೇರಲು ಲೀಗಕ್ಕೆ ಸಾಧ್ಯವಾಗದುದರಿಂದ, ಮತ್ತು ಸಿಂಧದಂತೆ ಸಾಧ್ಯವಾದಲ್ಲಿ ಅದರ ಶಾಶ್ವತತೆಯ ಬಗ್ಗೆ ಸಂದೇಹವುಂಟಾಗಿರುವದರಿಂದ ಲೀಗ್ ವರ್ಗಗಳಲ್ಲಿ ಉಂಟಾದ ನಿರಾಶೆ ಗುಂಡಾಗಿರಿಯಲ್ಲಿ ಪರಿಣತವಾಗುತ್ತಿದೆ. ಬಂಗಾಲ ಶಾಸನಸಭೆಗೆ ಕಾಂಗ್ರೆಸ್ ಹುರಿಯಾಳಾಗಿರುವ ಹಬೀಬುರ್‍ರಹಮಾನರು ತಮ್ಮ ಮತದಾರ ಸಂಘದಿಂದ ಚುನಾವಣೆ ಪ್ರಚಾರಕ್ಕೆ ನಾಯಲಪುರಕ್ಕೆ ಹೊರಟಾಗ ದಾರಿಯಲ್ಲಿ ರೇಲು ಸರಪಳಿ ಜಗ್ಗಿ ಗಾಡಿ ನಿಲ್ಲಿಸಿ ೧೦೦ ಜನ ಸಶಸ್ತ್ರ ಜನರು ಅವರನ್ನು ತಮ್ಮ ಡಬ್ಬಿಯಿಂದ ಹೊರಜಗ್ಗಿ ಹೊಡೆದು ಅವರ ಮಗ ಮತ್ತು ಇತರ ಬೆಂಬಲಿಗರೊಡನೆ ಗಂಗಾನಗರ ಹಳ್ಳಿಯಲ್ಲಿ ೮ ತಾಸುಗಳ ವರೆಗೆ ಬಂಧಿಸಿಟ್ಟು ಆ ಮೇಲೆ ಬಿಟ್ಟರೆಂದೂ ಅವರ ಸಂಗಡಿಗರಲ್ಲಿ ಇನ್ನೂ ಮೂವರು ಸಿಕ್ಕಿಲ್ಲವೆಂದೂ ವರದಿಯಾಗಿದೆ.

ಅಂತರ್ ರಾಷ್ಟ್ರೀಯ

ಮುಷ್ಟಿ ಬಿಗಿದ ದೈತ್ಯರು

ಜಗತ್ತಿನಲ್ಲಿ ಶಾಂತಿಯನ್ನು ಶಾಶ್ವತಗೊಳಿಸುವ ತ್ರಿಮೂರ್ತಿಗಳು ಫ್ಯಾಸಿಸ್ಟ ರಕ್ಕಸನನ್ನು ಮುರಿಬಡಿದು ತಿಂಗಳು ಆರು ಕಳೆದಿದೆಯಷ್ಟೆ-ಯುರೋಪ ದೂರಪೂರ್ವಗಳಲ್ಲಿ ಇನ್ನೂ ಶಾಂತಿ ಸ್ಥಾಪನೆಯಾಗಿಲ್ಲ, ಸಮಾಧಾನದ ಮಾತು ದೂರವುಳಿಯಿತು; ಶಾಂತಿ ಒಪ್ಪಂದಗಳು ಇನ್ನೂ ಭವಿತವ್ಯದ ಗರ್ಭದಿಂದ ಹೊರ ಹಣಕಿಲ್ಲ; ಭೀಕರ ಬರಗಾಲದ ಬಿಸುದಿಂದ ಯುರೋಪು ನಡುಗುತ್ತಿದೆ--ವಿಜಯೀ ತ್ರಿಮೂರ್ತಿಗಳು ತಮ್ಮೊಳಗೆ ಯಾದವಿಯ ಎತ್ತುಗಡೆ ನಡೆಸಿದ್ದಾರೆ. ಮುಷ್ಟಿಬಿಗಿದು ಒಬ್ಬರನೊಬ್ಬರು ಸಿಟ್ಟಿಸುತಿದ್ದಾರೆ.

ಒಂದು ಕಡೆ ರಶಿಯನ್ ಕರಡಿ; ಇನ್ನೊಂದೆಡೆ ಬ್ರಿಟಿಶ ಸಿಂಹ ಮತ್ತು ಅಮೇರಿಕನ್ ಗರುಡ;--ಈ ಎರಡು ಪಕ್ಷಗಳು ಅಟ್ಲಾಂಟಿಕ ಸಾಗರದ ಆ ದಡದಿಂದ ಈ ದಡಕ್ಕೆ, ಇಂಗ್ಲೀಷ ಕಡಲುಗಾಲಿವೆಯೆಂದು ಆ ದಡದಿಂದ ಈ ದಡಕ್ಕೆ, ಯುರೋಪಿನ ಹಾಳುಬಿದ್ದ ಭೂಮಿಯಲ್ಲಿ ಅತ್ತಿಂದತ್ತ ಪರಸ್ಪರ ಅತ್ಯಂತ ಕಠೋರ ವಚನಗಳಲ್ಲಿ ಆರೋಪ-ಪ್ರತ್ಯಾರೋಪಗಳನ್ನು ನಡೆಸಿವೆ.

ಈಗಾಗಲೆ ಮೂರನೆ ಮಹಾಯುದ್ಧದ ಮಾತು--ಅದೂ ಬರುವ ಒಂದೆರಡು ತಿಂಗಳಲ್ಲಿಯೇ ಎಂದು--ಗುಜುಗಜಿಸತೊಡಗಿದೆ.

ತುರ್ಕಿಯ ಮೇಲೆ ರಶಿಯಾ ಎಪ್ರಿಲದಲ್ಲಿ ದಂಡೆತ್ತಿ ಹೋಗುವದು; ಆಗ ಬ್ರಿಟಿಶ ತುರ್ಕಿಯ ಸಹಾಯಕ್ಕೆ ನಿಲ್ಲುವದು, ಅಮೇರಿಕೆಯೂ ಇದರಲ್ಲಿ ಸೆಳೆಯಲ್ಪಡುವದು ಎಂದು ಅಮೇರಿಕೆಯ ರಾಜಧಾನಿ ವಾಶಿಂಗಟನ್ನಿನಲ್ಲಿ ಬಹಿರಂಗವಾಗಿ ಹೇಳಲಾಗುತ್ತಿದೆ.

ಅಮೇರಿಕೆಯ ವಿದೇಶ ಮಂತ್ರಿ ಬಾಯರ್ನ್ಸರು ರಶಿಯಾಕ್ಕೊಂದು "ಸೌಹಾರ್ದಪೂರ್ಣ" ಎಚ್ಚರಿಕೆಯನ್ನು ಕೊಟ್ಟಿದ್ದಾರೆ.

"ಅಕ್ಷಮ್ಯವಾದ ತಪ್ಪುಗಳ ದುರಂತ ಸಂಭವಿಸಿದರೆ ಮಾತ್ರ ರಶಿಯಾದೊಡನೆ ಅಮೇರಿಕೆಗೆ ತೀಕ್ಷ್ಣ ಹೋರಾಟವೊದಗಬಹುದು" ಎಂಬ ಡ್ರಾವಿಡೀ ಪ್ರಾಣಾಯಾಮ ರೀತಿಯಿಂದ ಅವರು ರಶಿಯಾದೊಡನೆ ಅಮೇರಿಕೆ ಯುದ್ಧ ಹೂಡಬಹುದೆಂದು ಅಪ್ರತ್ಯಕ್ಷ ಸೂಚನೆ ಕೊಟ್ಟಿದ್ದಾರೆ.

ಅಟ್ಲಾಂಟಿಕ ಘೋಷಣೆ ಮತ್ತು ಯುಕ್ತರಾಷ್ಟ್ರಗಳ ಸನದಿನ ತತ್ವಗಳನ್ನು ರಕ್ಷಿಸಲು ಅಮೇರಿಕೆ ಕಂಕಣಬದ್ಧವಾಗಿದೆಯೆಂದೂ ಅವರು ಸಾರಿದ್ದಾರೆ. ಬಡರಾಷ್ಟ್ರಗಳಲ್ಲಿ ದೊಡ್ಡರಾಷ್ಟ್ರಗಳು ಒಪ್ಪಂದದಿಂದಲ್ಲದೆ ಸೈನ್ಯಗಳನ್ನಿಡುವದು ಅಪರಾಧವೆಂದು ಮುಂತಾದ ಅವರು ಉಪದೇಶಗಳನ್ನಿತ್ತು ಪರೋಕ್ಷವಾಗಿ ರಷ್ಯನ್ನರು ಇರಾಣ, ಮಂಚೂರಿಯಾಗಳಲ್ಲಿ ವಹಿಸಿದ ಧೋರಣೆಯನ್ನು ಟೀಕಿಸಿದ್ದಾರೆ.

ಚಿಂತಾಜನಕ ಸಂಗತಿಗಳು

ಯುಕ್ತರಾಷ್ಟ್ರಗಳ ಲಂಡನ್ ಅಧಿವೇಶನದಲ್ಲಿ ತ್ರಿಮೂರ್ತಿಗಳಲ್ಲಿ ಉಂಟಾದ ಪ್ರಚಂಡ ಭಿನ್ನಾಭಿಪ್ರಾಯಗಳ ನಂತರ ಜಗತ್ತಿನ ರಾಜಕಾರಣ ರಂಗದಲ್ಲಿ ಕೆಲ ಚಿಂತಾಜನಕ ಘಟನೆಗಳು ಸಂಭವಿಸಿವೆ. ಇವು ಈಗ ಕೆಡುತ್ತಿರುವ ರಶಿಯಾ--ಬ್ರಿಟಿಶ ಅಮೇರಿಕನ್ ಸಂಬಂಧದ ಕಾರಣವೂ ಆಗಿರಬಹುದು, ಪರಿಣಾಮವೂ ಆಗಿರಬಹುದು. ಆ ಘಟನೆಗಳಾವುವೆಂದರೆ--

- ಇಟಲಿಯ ಗಡಿಯಲ್ಲಿ, ಆಸ್ಟ್ರಿಯಾದ ರಶಿಯನ್ ಆಕ್ರಮಣ ಭಾಗದಲ್ಲಿ ರಶಿಯನ್ ಮತ್ತು ಯುಗೋಸ್ಲಾವ ಪಡೆಗಳು ಸಂಗ್ರಹಿಸಲ್ಪಟ್ಟಿವೆಯೆಂದು ವರದಿಯಾಗಿದೆ.

- ಮಾರ್ಚ ತಾ. ೨ ಕ್ಕೆ ಇರಾಣದಿಂದ ಇಂಗ್ಲೀಷ ರಶಿಯನ್ ಪಡೆಗಳು ಪೂರ್ಣ ಹೊರಟು ಹೋಗಬೇಕೆಂದು ಒಪ್ಪಂದವಾಗಿದ್ದರೂ ಬ್ರಿಟಿಶ ಪಡೆಗಳು ಹಿಂತೆಗೆದುಕೊಳ್ಳಲ್ಪಟ್ಟಿದ್ದರೂ ರಶಿಯನ್ನರು ಮಾತ್ರ ಈಶಾನ್ಯ ಇರಾಣನ್ನಷ್ಟೆ ತೆರವು ಮಾಡಿ ವಾಯುವ್ಯದಲ್ಲಿ ಹಾಗೆಯೆ ಉಳಿದಿದ್ದಾರೆ. ಇದಕ್ಕೆ ಅವರು ಬೇರಾವ ಸಮರ್ಪಕ ಕಾರಣ ಕೊಡದೆ "ಪರಿಸ್ಥಿತಿ ಸ್ಪಷ್ಟವಾಗುವ ವರೆಗೆ" ರಶಿಯನ್ ಸೈನ್ಯ ಉಳಿಯುವದೆಂದು ಸಾರಿದ್ದಾರೆ; ಈರೀತಿ "ವಚನಭಂಗ" ಮಾಡಿದ್ದರಿಂದ ಬ್ರಿಟಿಶರಿಗೆ "ಘನಚಿಂತೆ" ಯುಂಟಾಗಿದೆಯೆಂದು ಹೇಳಲಾಗಿದೆ. ಯೋಗ್ಯ ಕಾರಣ ಕೊಡದೆ ಇನ್ನೂ ಈಶಾನ್ಯ ಇರಾಣನ್ನು ತೆರವು ಮಾಡದೆ ಕುಳಿತರೆ, ಭದ್ರತಾ ಮಂಡಲದ ಮುಂದಿನ ಅಧಿವೇಶನದಲ್ಲಿ ಈ ಪ್ರಶ್ನೆಯನ್ನು ಬ್ರಿಟಿಶರು ತರಬಹುದು.

- ಮಂಚೂರಿಯಾದಿಂದ ರಶಿಯನ್ನರು ಇನ್ನೂ ಹೊರಟು ಹೋಗಿಲ್ಲವಾದುದರಿಂದ ಚೀನದಲ್ಲಿ "ಮಂಚೂರಿಯಾದಿಂದ ಚಲೇಜಾವ!" ಚಳವಳಿ ಪ್ರಬಲವಾಗಿದೆ ಸೋವಿಯೆಟ್ ಸರಕಾರ ಮಂಚೂರಿಯಾದಲ್ಲಿ ಜಪಾನಿಗಳು ಸ್ಥಾಪಿಸಿದ ಕಾರಖಾನೆಗಳಿಂದ ಯಂತ್ರಸಾಮುಗ್ರಿಗಳನ್ನು ರಶಿಯಾಕ್ಕೆ ಸಾಗಿಸಲು ಸಿದ್ಧತೆ ನಡೆಸಿದೆ. ಅವುಗಳನ್ನು ಮಂಚೂರಿಯಾದಲ್ಲಿಯೆ ಬಿಡಬೇಕಾದರೆ ಸೋವಿಯೆಟ್ ತಜ್ಞರನ್ನೆ ಚೀನಿ ಸರಕಾರ ಉಪಯೋಗಿಸಿಕೊಳ್ಳಬೇಕೆಂದು ಬಾಯಿ ಕರಾರು ಹಾಕಿದೆಯೆಂದು ಹೇಳಲಾಗಿದೆ. ಇದಲ್ಲದೆ ಪರಿಸ್ಥಿತಿ ಇನ್ನಷ್ಟು ಕೆಟ್ಟ ನಂತರ ಮಂಚೂರಿಯಾದಲ್ಲಿ ಈಗಾಗಲೆ ಇರಬಹುದೆಂದು ಊಹಿಸಲಾದ ೬೦೦,೦೦೦ ರಶಿಯನ್ ಪಡೆಗಳನ್ನು ಇನ್ನಷ್ಟು ಹೆಚ್ಚಿಸುವ ಲಕ್ಷಣ ಕಾಣುತ್ತಿದೆ.

- ಡೈರೆನ್ (ಮಂಚೂರಿಯಾ) ಬಂದರದ ಮೇಲೆ ಹಾರಾಡುತ್ತಿದ್ದ ಅಮೇರಿಕನ್ ವಿಮಾನದ ಮೇಲೆ ರಶಿಯನ್ ವಿಮಾನ ಗುಂಡು ಹಾರಿಸಿದ್ದರಿಂದ ಅಮೇರಿಕನ್ ಸರಕಾರ ಪ್ರತಿಭಟಿಸಿದೆ. ಇದಕ್ಕೆ ಕಾರಣ ಗೊತ್ತಾಗಿಲ್ಲ.

- ಪರಮಾಣು ಬಾಂಬುಗಳ ಗುಟ್ಟನ್ನು ತಿಳಿದುಕೊಳ್ಳಲು ಕೆನಡಾದಲ್ಲಿ ಆದ ಒಳಸಂಚು ರಶಿಯನ್ ಸರಕಾರದಿಂದಲೇ ಅಧಿಕೃತವಾಗಿ ಸಂಘಟಿಸಲ್ಪಟ್ಟಿತ್ತೆಂದು ವಿಚಾರಣಾಂತ್ಯದಲ್ಲಿ ಸಿದ್ಧವಾಗಿದೆ.

ರಶಿಯನ್ ವಾದ

ಮೇಲಿನ, ಮೇಲ್ನೋಟಕ್ಕೆ ಅಸಮರ್ಥನೀಯವಾಗಿ ಕಾಣುವ, ಕೃತಿಗಳನ್ನು ಸಮರ್ಥಿಸಿಕೊಳ್ಳಲು ಮತ್ತು ಅವುಗಳಿಂದ ಜನದೃಷ್ಟಿಯನ್ನು ಹೊರಳಿಸಲು ರಶಿಯಾದಲ್ಲಿ ಪ್ರಚಂಡ ಬ್ರಿಟಿಶ-ಅಮೇರಿಕನ್ ವಿರೋಧಿ ಪ್ರಚಾರ ಪ್ರಾರಂಭವಾಗಿದೆ.

- ಬ್ರಿಟಿಶ ಸಾಮ್ರಾಜ್ಯದ ಹುಳುಕುಗಳನ್ನು ಎತ್ತಿ ತೋರುವ ಉಗ್ರ ಲೇಖನಗಳು ಸೋವಿಯಟ್ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಯುಕ್ತರಾಷ್ಟ್ರಗಳ ಸಭೆಯ ನಂತರ ಸ್ವಾತಂತ್ರ್ಯದ ವಿಷಯಕ್ಕೆ ಆಸೆಯನ್ನಿಟ್ಟುಕೊಂಡಿದ್ದ ಪರಾಧೀನ ರಾಷ್ಟ್ರಗಳ "ಭ್ರಮನಿರಸನ"ವಾದಂತಾಗಿದೆಯೆಂದು ಸೋವಿಯೆಟ್ ಪತ್ರಿಕೆಗಳು ಬರೆಯುತ್ತಿವೆ.

- ಅಮೇರಿಕೆ ಶಾಂತಸಾಗರದಲ್ಲಿ ಕಟ್ಟಿಕೊಂಡ ಆಯಕಟ್ಟಿನ ಕೋಟೆಗಳ ಮೇಲೆ ಸಂಶಯದೃಷ್ಟಿಯನ್ನು ಬೀರುವ ಲೇಖ ಪೃಥಕ್ಕರಣಗಳು ಪ್ರಸಿದ್ಧವಾಗುತ್ತಿವೆ.

- ಮಂಚೂರಿಯಾದಿಂದ ರಶಿಯನ್ನರು ಹೊರಟು ಹೋಗಬೇಕೆಂದು ಹೇಳುತ್ತಿರುವ ಅಮೇರಿಕನ್ನರು ಚೀನದಿಂದ ಹೊರಬೀಳುವ ಲಕ್ಷಣಗಳಿಲ್ಲ. ಸೀರಿಯಾ, ಲೆಬನಾನ್, ಪಾಲಿಸ್ತಾನ, ಗ್ರೀಸಗಳಿಂದ ಬ್ರಿಟಿಶರು ಹೊರಟುಹೋಗಿಲ್ಲ. ಸಾಮ್ರಾಜ್ಯದಲ್ಲೆಲ್ಲ ಗಲಭೆಗಳಾಗುತ್ತಿವೆ. ಈ ಅಂಶಗಳಿಗೆ ಹೆಚ್ಚು ಮಹತ್ವ ಕೊಡಲಾಗುತ್ತಿದೆ.

- ಸೋವಿಯಟ್ಟಿನ ಬದ್ಧ ವಿರೋಧಿ ಜನರಲ್ ಆಂಡರ್ಸನ ಪೋಲಿಶ ಸೇನೆಯನ್ನು ಆಂಗ್ಲೋ-ಅಮೇರಿಕನ್ನರು ಇಟಲಿಯಲ್ಲಿ ಸಾಕುತಿದ್ದಾರೆ.

- ಜರ್ಮನಿಯಲ್ಲಿ ನಾಜೀ ತತ್ವಜ್ಞಾನವನ್ನೂ ಅದರ ಪುರಸ್ಕರ್ತರನ್ನೂ ನಿರ್ನಾಮ ಮಾಡುವ ಕೆಲಸ ಆಂಗ್ಲೋ-ಅಮೇರಿಕನ್ ಆಕ್ರಮಣ ಭಾಗಗಳಲ್ಲಿ ಸಾಗುತ್ತಲೇ ಇಲ್ಲ. ಬದಲಿಗೆ ನಾಜಿಗಳ ಬೆಂಬಲಿಗರಾದ ಜಮೀನುದಾರರನ್ನು ಅಧಿಕಾರದಲ್ಲಿಡಲಾಗಿದೆಯೆಂದು ಆಪಾದಿಸಲಾಗಿದೆ.

ಚರ್ಚಿಲ್ಲರ "ಚಾನ್ಸ!"

ಬ್ರಿಟಿಶ ಸಾಮ್ಯವಾದಿಗಳೂ ರಶಿಯನ್ ಕಮ್ಯುನಿಷ್ಟರೂ ಹೀಗೆ ಪರಸ್ಪರ ಸಂಶಯ, ತಿಕ್ಕಾಟಗಳಲ್ಲಿ ಆಸಕ್ತರಾಗಿರುವದು ಅಧಃಪತಿತ ದೇವತೆಯಾದ ಚರ್ಚಿಲ್ಲರಿಗೆ ಪುನಃ ತಲೆಯೆತ್ತಲು ಅವಕಾಶವೊದಗಿಸಿದೆ. ಅಮೇರಿಕೆಯಲ್ಲಿ ಆರೋಗ್ಯಪ್ರವಾಸ ನಡೆಸಿರುವ ಅವರು ತಮ್ಮ ಹಳೆಯ ಆಂಗ್ಲೋ-ಸ್ಯಾಕ್ಸನ ಐಕ್ಯದ ಕನಸು ಕಾಣತೊಡಗಿದ್ದಾರೆ. ಇಂಗ್ಲಂಡ ಅಮೇರಿಕೆಗಳನ್ನ ಒಂದಾಗಿ ಕೂಡಿಸಿ ಸಂಯುಕ್ತ ರಾಷ್ಟ್ರದ ರಚನೆ, ಆಂಗ್ಲೋ-ಸ್ಯಾಕ್ಸನ ರಾಷ್ಟ್ರಗಳಿಗೆಲ್ಲ ಸಮಾನವಾದ ಒಂದೇ ನಾಗರಿಕತ್ವ ಬೇಕೆಂದು ಅವರು ವೆಸ್ಟಮಿನಿಸ್ಟರ ಕಾಲೇಜದ ಒಂದು ಭಾಷಣದಲ್ಲಿ ಹೇಳಿದರು. ಯುದ್ಧ ವಿಷಯದಲ್ಲಿ ಪರಸ್ಪರರಲ್ಲಿ ನಿಕಟ ಸಂಬಂಧ ಬೇಕು; ಉಭಯ ರಾಷ್ಟ್ರಗಳೂ ಒಂದೇಬಗೆಯ ಆಯುಧಗಳಿಂದ, ಅವೇ ನಿಲ್ದಾಣಗಳಿಂದ, ಹೋರಾಡಬೇಕು, ಎಂದು ಹೇಳಿ ಅವರು ಪರಮಾಣು ಬಾಂಬಿನ ಗುಟ್ಟುಗಳನ್ನು ಹೊರಗೆಡಹಬಾರದೆಂದು ಸಾರಿದರು. ಯುರೋಪಿನ ಸದ್ಯದ ಪರಿಸ್ಥಿತಿಯ ಕಡೆಗೆ ಹೊರಳಿ ಅವರು "ನಾವು ಹೋರಾಡಿದ್ದು ಈ ಯುರೋಪಿನ ನಿರ್ಮಾಣಕ್ಕಾಗಿ ಅಲ್ಲ" ಎಂದರು. "ರಶಿಯಾಕ್ಕೆ ಯುದ್ಧ ಬೇಕಾಗಿಲ್ಲ. ಯುದ್ಧದ ಫಲ ಬೇಕಾಗಿದೆ"ಯೆಂದು ಅವರು ಹೇಳಿದ್ದು ಸತ್ಯವಾಗಿದ್ದರೂ ಇರಬಹುದು.

ಪರಮಾಣು ರಹಸ್ಯ

ಪರಮಾಣು ರಾಜ್ಯದಲ್ಲಿ ಗಹನತರ ಸಂಗತಿಗಳು ಘಟಿಸುತ್ತಿವೆ. ಕೆನಡಾದಲ್ಲಿ ಕಂಡುಹಿಡಿಯಲ್ಪಟ್ಟ "ಪರಮಾಣು ಚೋರರ ಒಳಸಂಚಿನ" ವಿಚಾರಣೆ ಮಾಡಿದ ಸಮಿತಿಯ ತತ್ಕಾಲಿಕ ವರದಿ ಇದೀಗ ಪ್ರಸಿದ್ಧವಾಗಿದೆ. ಒಟಾವಾ (ಕೆನಡಾ) ದಲ್ಲಿರುವ ರಶಿಯನ್ ರಾಯಭಾರಿಗೃಹದ ನೇತೃತ್ವದಲ್ಲಿ ಸೋವಿಯಟ್ ಸರಕಾರದ ನೇರವಾದ ಆಜ್ಞೆಗನುಸಾರವಾಗಿ, ಸೋವಿಯಟ್ ರಾಯಭಾರ ಗೃಹದ ಮಿಲಿಟರ ಅಧಿಕಾರಿ ಕರ್ನಲ್ ಝುಬೋಟಿನ್ನನ ಕೈಕೆಳಗೆ, ಈ ಒಳಸಂಚಿನ ಸಂಘಟನೆಯಾಗಿತ್ತೆಂದು ಆ ವರದಿ ಹೊರಗೆಡಗಿದೆ. ಇದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಸೋವಿಯಟ್ ರಾಯಭಾರಿಗೃಹದ ಕಾರಕೂನ ಐವರ್ ಗೌಝೆಂಕೋ ತಂದೊಪ್ಪಿಸಿದ್ದಾನೆ. ಅದರಲ್ಲಿ ಹೇಳಲಾಗಿದ್ದ ನಾಲ್ವರು ಅಧಿಕಾರಿಗಳನ್ನು ನ್ಯಾಯಸ್ಥಾನದಲ್ಲಿ ಹಾಜರು ಮಾಡಲಾಗಿದೆ.


ಮಾಸ್ಕೋದಿಂದ ತಂತಿ ಮುಖಾಂತರ ಈ ವಿಷಯ ಆಜ್ಞೆಗಳು ಬರುತಿದ್ದವು. ಯುರೇನಿಯಂ ಲೋಹದಿಂದ ಪರಮಾಣು ಬಾಂಬನ್ನು ತಯಾರಿಸುವ ವಿಧಾನದ ಸಚಿತ್ರ ವರದಿಗಳನ್ನು ಕಳಿಸಲು ಅವುಗಳು ಆಜ್ಞಾಪಿಸಿದ್ದವೆಂಬದಾಗಿ ಆ ವರದಿ ಆರೋಪಿಸಿದೆ.

ಕೆನಡಾದಲ್ಲಿ ಈ ವರದಿ ಪ್ರಸಿದ್ಧವಾದ ಹೊತ್ತಿಗೆ ಸರಿಯಾಗಿ ಇಂಗ್ಲಂಡಿನಲ್ಲಿ ಬ್ರಿಟಿಶ ವಿಜ್ಞಾನಿ ಡಾ. ಅಲನ್ ಅನ್ ಇವನ ಬಂಧನ, ಇದೇ ಸಂಬಂಧವಾಗಿ, ಅದುದು ಕೋಲಾಹಲವನ್ನೇ ಎಬ್ಬಿಸಿದೆ. ಈ ವಿಜ್ಞಾನಿ ಕೆನಡಾದಲ್ಲಿ ಪರಮಾಣು ಸಂಶೋಧನೆಗಾಗಿ ಬ್ರಿಟಿಶ ಸರಕಾರದಿಂದ ನಿಯೋಜಿತನಾಗಿದ್ದನು. ೧೯೪೫ ರಲ್ಲಿ ಪರಮಾಣು ರಹಸ್ಯವನ್ನು ಅವನು ಇನ್ನೊಬ್ಬನಿಗೆ ಅರುಹಿ, ಅದು ಶತ್ರುವಿಗೆ ಸಹಾಯವಾಗುವಂತೆ ಮಾಡಲು ಕಾರಣನಾದನೆಂದು ಅವನ ಮೇಲೆ ಆರೋಪ ಹೊರಿಸಲಾಗಿದೆ. ಅವನು ಈ ಸಂಗತಿಯನ್ನೊಪ್ಪಿಕೊಂಡಿದ್ದರೂ ಗುಟ್ಟನ್ನು ಯಾರಿಗೆ, ಯಾವ ದೇಶದವನಿಗೆ ಅರುಹಿದೆನೆಂಬ ಬಗ್ಗೆ ಬಾಯಿಬಿಡಲು ಸಿದ್ಧವಿಲ್ಲ.

ಸ್ಪೇನದಲ್ಲಿ ಮತ್ತೆ ಯಾದವಿ ?

ಕಳೆದ ಶುಕ್ರವಾರದಿಂದ ಫ್ರೆಂಚರು ಸ್ಪೇನ--ಫ್ರಾನ್ಸ ಗಡಿಯನ್ನು ಮುಚ್ಚುವದಾಗಿ ಸಾರಿದ್ದರೆ ಅದಕ್ಕಿಂತ ೪೮ ತಾಸು ಮೊದಲೇ ತಾನೇ ಫ್ರೆಂಚ ಗಡಿಯನ್ನು ಮುಚ್ಚುವ ಮೂಲಕ ಜನರಲ್ ಫ್ರಾಂಕೋ ಧೃಷ್ಟತೆಯನ್ನು ತೋರಿದ್ದಾನೆ. ಫ್ರೆಂಚ ಗಡಿಯ ಸೈನ್ಯವನ್ನು ಅವನು ಹೆಚ್ಚಿಸಿದ್ದು ಅಲ್ಲದೆ ಫಲೇಂಜಲಿಸ್ಟ ಪಕ್ಷದ ಸೈನಿಕರಿಗೆ ತನ್ನ ಸರಕಾರಕ್ಕೆ ಬೆಂಬಲ ಕೂಡುವ ಪ್ರದರ್ಶನಗಳನ್ನು

೬ನೇ ಪುಟಕ್ಕೆ



ಲಂಡನದ ಯುಕ್ತ ರಾಷ್ಟ್ರಾಧಿವೇಶನ: ಜನೆವರಿಯಲ್ಲಿ ಜರಗಿದ ಯುಕ್ತರಾಷ್ಟ್ರಾಧಿವೇಶನ ಕಾಲದಲ್ಲಿ ಗ್ರೀನ್‌ವಿಚದ ಪ್ರಸಿದ್ಧ ನೌಕಾ ಕಾಲೇಜ ಭವನದಲ್ಲಿ ಬ್ರಿಟಿಶ್ ಸರಕಾರದವರು ಸದಸ್ಯರಿಗಿತ್ತ ಔತಣ.

ಅಂತರ್‌ರಾಷ್ಟ್ರೀಯ

(೫ನೇ ಪುಟದಿಂದ)

ನಡೆಸಲು ಆಜ್ಞೆಯಿತ್ತನು. ನೆರೆದರು ಫೆಲೇಜಲಿಸ್ಟ ಸೈನಿಕರು; ಅರಚಿದರು: "ಡಿಗಾಲೆ ಜಿಂದಾಬಾದ್!" "ಥಾರೇಜ ಮುರ್ದಾಬಾದ್!" ಫ್ರೆಂಚ ನಾಯಕ ಡಿಗಾಲೆಯ ಮೇಲೆ ಅವರ ಪ್ರೇಮ, ಹೊಸ ಪ್ರಧಾನ ಮಂತ್ರಿ ಥಾರೋಜನ ಮೇಲೆ ಸಿಟ್ಟು!

ಇತ್ತ ಸ್ಪೇನದ ಪ್ರಜಾರಾಜ್ಯ ಪಕ್ಷಪಾತಿಗಳು ಹೆಚ್ಚು ಹೆಚ್ಚು ಧೈರ್ಯಗೊಳ್ಳುತ್ತಿದ್ದಾರೆ. ಅವರ ಬೆಂಬಲಕ್ಕೆ ಸಶಸ್ತ್ರ ದಲಗಳು ಸ್ಪೇನದೊಳಗೆಯೇ ಸಿದ್ಧವಾಗಿವೆಯೆಂದೂ ಪ್ರಜಾರಾಜ್ಯ ವಾದಿಗಳ "ಛಾಯಾ ಸರಕಾರ" ವೊಂದು ಈಗಾಗಲೇ ಫ್ರಾಂಕೋನಿಂದ ಆಡಳಿತೆ ಕಿತ್ತುಕೊಳ್ಳಲು ಎತ್ತುಗಡೆ ನಡೆಸಿದೆಯೆಂದೂ ಹೇಳಲಾಗಿದೆ. ಸ್ಪೇನದ ಸಮಸ್ಯೆಯನ್ನು ಭದ್ರತಾಮಂಡಲದ ಮುಂದೆ ತರಬೇಕೆಂಬ ಸೂಚನೆಯನ್ನು ಬ್ರಿಟಿಶ ಸರಕಾರ ನಿರಾಕರಿಸಿದೆ. ಅದರಿಂದ ದೇಶದ ಆಂತರಿಕ ವ್ಯವಹಾರದಲ್ಲಿ ಕೈಹಾಕಿದಂತಾಗುವದೆಂದು ಅದರ ಹೇಳಿಕೆ. ಆದರೆ ಫ್ರಾಂಕೋನು ಪದತ್ಯಾಗ ಮಾಡಬೇಕು. ಸ್ಪೇನದಲ್ಲಿ ಹೊಸ ಚುನಾವಣೆಯಾಗುವ ವರೆಗೆ ತಾವು ದೇಶದ ವ್ಯವಸ್ಥೆ ನೋಡುವೆವು ಎಂದು ಆಂಗ್ಲೋ-ಫ್ರೆಂಚ-ಅಮೇರಿಕನ್ನರು ಸ್ಪೇನದ ಸರಕಾರಕ್ಕೆ ಒಂದು ಓಲೆ ಕಳಿಸಿದ್ದಾರೆ.

ಫ್ರಾಂಕೋನ ವಿರುದ್ಧ ಪ್ರಚಾರ ಯುದ್ಧದ ಆರಂಭವೆಂದು ಅಮೇರಿಕೆಯ ವಿದೇಶ ಖಾತೆಯವರು ಒಂದು ಹೇಳಿಕೆ ಹೊರಡಿಸಿದ್ದಾರೆ. ಅದರಲ್ಲಿ ಜಪ್ತಾದ ಜರ್ಮನ ದಾಖಲೆಗಳಿಂದ ಫ್ರಾಂಕೋನು ಹಿಟ್ಲರನ ಪಕ್ಷದಲ್ಲಿ ಯುದ್ಧದಲ್ಲಿ ಪ್ರವೇಶಿಸಲು ಸಿದ್ಧನಾಗಿದ್ದನೆಂದೂ ಜರ್ಮನ್ ಯು-ಬೋಟು ಗಳಿಗೆ ಆಶ್ರಯವಿತ್ತು ಸಹಾಯ ಮಾಡುತ್ತಿದ್ದನೆಂದೂ ಗೊತ್ತಾಗುವದಾಗಿ ಹೇಳಲಾಗಿದೆ. ಇದಕ್ಕೆ ಬದಲು ಜಿಬ್ರಾಲ್ಟರ, ಫ್ರೆಂಚ ಮೊರೊಕೋ, ಮತ್ತು ಅಲ್ಜೀರಿಯಾದ ಭಾಗಗಳನ್ನು ಫ್ರಾಂಕೋ ಕೇಳಿದ್ದನಂತೆ. ಜಿಬ್ರಾಲ್ಟರ ಮೇಲಿನ ದಾಳಿಯ ವಿವರವನ್ನು ಕೂಡ ಸಿದ್ಧಗೊಳಿಸಲಾಗಿತ್ತಂತೆ.

ಇಜಿಪ್ತದಲ್ಲಿ ಪುನಃ ರಕ್ತ

ಮಾರ್ಚ ೪ ನೇ ತಾರೀಖು ಇಜಿಪ್ತದಲ್ಲಿ ವಿದ್ಯಾರ್ಥಿಗಳ ಪ್ರದರ್ಶನದ ಮೇಲೆ ಬ್ರಿಟಿಶರು ಗುಂಡು ಹಾರಿಸಿದ್ದರ ನಿಷೇಧ ಸೂಚನೆಯ ದಿನ. ಕಾಯರೋದಲ್ಲೇನೊ ಅಂದಿನ ದಿನ ಗೊಂದಲವಿಲ್ಲದೆ ಪಾರಾಯಿತು. ಆದರೆ ಅಲೆಕ್ಝಾಂಡ್ರಿಯಾದಲ್ಲಿ ನಡೆದ ಬ್ರಿಟಿಶ ವಿರೋಧಿ ದಂಗೆ ಗೋಳೀಬಾರುಗಳಲ್ಲಿ ಇಬ್ಬರು ಬ್ರಿಟಿಶರನ್ನೊಳಗೊಂಡು ೧೭ ಜನ ಸತ್ತರು; ೫೯ ಜನ ಗಾಯಗೊಂಡರು. ಗಾಯಗೊಂಡವರಲ್ಲಿ ಪುನಃ ೫ ಜನ ಆಸ್ಪತ್ರೆಯಲ್ಲಿ ಸತ್ತರು. ಪರಿಸ್ಥಿತಿ ಎಷ್ಟು ಪ್ರಕೋಪಕ್ಕೆ ಹೋಗಿತ್ತೆಂದರೆ ಬ್ರಿಟಿಶ ಅಧಿಕಾರಿಗಳು, ಇಂತಿಷ್ಟು ದಿನದಲ್ಲಿ ಬ್ರಿಟಿಶ ಪ್ರಾಣಮಾನಗಳನ್ನು ಸುರಕ್ಷಿತವಾಗಿ ಮಾಡಲು ಇಜಿಪ್ಶನ್ ಸರಕಾರ ಸಮರ್ಥವಾಗದಿದ್ದರೆ, ತಾವೇ ವ್ಯವಸ್ಥೆ ಕೈಕೊಳ್ಳುವ ಬೆದರಿಕೆ ಹಾಕಿದ್ದರಂತೆ! ಆದರೆ ಹೊಸ ಮುಖ್ಯ ಮಂತ್ರಿ ಸಿದ್ದಿಕಿ ಪಾಶಾ ಅಳ್ಳೆದೆಯವನಲ್ಲ. ಅವನು ವಿದ್ಯಾರ್ಥಿಗಳಲ್ಲಿ ಈಗಾಗಲೆ ಜನಪ್ರಿಯನಾಗಿದ್ದಾನೆ.

ಇಜಿಪ್ತದಲ್ಲಿಯ ಪರಿಸ್ಥಿತಿಯ ಪ್ರಯೋಜನ ಪಡೆದು ಕಾಯರೋದಲ್ಲಿರುವ ರಶಿಯನ್ ರಾಯಭಾರಿ ಮುಖ್ಯ ಮಂತ್ರಿಗೆ ಭೆಟ್ಟಿ ಕೊಟ್ಟು ಇಜಿಪ್ತದ ಆಕಾಂಕ್ಷೆಗಳಲ್ಲಿ ಸಹಾನುಭೂತಿಯನ್ನು ವ್ಯಕ್ತಪಡಿಸಿದನು.

ಶಾರಿಯಾರರಿಗೆ ಅಧಿಕಾರ

ಅನೇಕ ದಿನಗಳ ಚರ್ಚೆಯ ನಂತರ ಇಂಡೋನೇಶಿಯಾದ ರಾಷ್ಟ್ರೀಯ ಸಮಿತಿ ಸುಲ್ತಾನ ಶಾರಿಯಾರರಿಗೆ "ಇಂಡೋನೇಶಿಯಾ ಪ್ರಜಾರಾಜ್ಯವನ್ನು ಡಚ್ಚರು ಅಂಗೀಕರಿಸುವದನ್ನೇ ತಳಹದಿಯನ್ನಿಟ್ಟುಕೊಂಡು" ಡಚ್ಚರೊಡನೆ ಮಾತುಕತೆ ನಡೆಸಲು ಅಧಿಕಾರವಿತ್ತಿತು. ಮಧ್ಯ ಜಾವಾದ ಸೊಯಕಾರ್ತಾ ನಗರದಲ್ಲಿ ಸಮಿತಿಯ ಸಭೆ ನಡೆದಾಗ ಇಂಡೋನೇಶಿಯನ್ ಉಗ್ರಗಾಮಿಗಳ ಪ್ರದರ್ಶನ ವಿಶೇಷವಾಗಿತ್ತು. ಸರಕಾರದಲ್ಲಿ ತಮಗೆ ಹೆಚ್ಚಿನ ಪ್ರಾತಿನಿಧ್ಯ ಬೇಕೆಂದು ಅವರು ಸಾಧಿಸಿದರು. ಅದುದರಿಂದ ಮುಖ್ಯ ಮಂತ್ರಿ ಶಾರಿಯಾರರು ರಾಜೀನಾಮೆ ಕೊಟ್ಟರು. ಅವರೀಗ ವಿಶಾಲತರ ಪ್ರಾತಿನಿಧ್ಯವುಳ್ಳ ಹೊಸ ಮಂತ್ರಿಮಂಡಲ ರಚಿಸುವರು.

ಆದರೆ ಸಮಿತಿಯ ನಿರ್ಣಯ ಡಚ್ಚರಿಗೆ ರುಚಿಸುವದು ಕಷ್ಟ. ಇಂಡೋನೇಶಿಯಾ ಪ್ರಜಾರಾಜ್ಯವನ್ನು ಅಂಗೀಕರಿಸಿ ಮಾತುಕತೆ ನಡೆಸುವ ಮಾತು ಬೇರೆ; ಜಾವಾಕ್ಕೆ ಡಚ್ಚರು ಕೊಡಮಾಡಿದ "ಪಾಲುಗಾರಿಕೆ"ಯ ಕಾಮನ್‌ವೆಲ್ತ ದರ್ಜೆ ಬೇರೆ. ಡಚ್ ಸುದ್ದಿ ಖಾತೆ, ಅದರಿಂದಲೇ ಇರಬೇಕು, ಒದರುತ್ತದೆ: "ಇಂಡೊನೇಶಿಯನ್ನರು ಜಪಾನರಿಂದ ಒಳನಾಡಿನಲ್ಲಿ ಯುವಕರಿಗೆ ಸೈನಿಕ ಶಿಕ್ಷಣ ಕೊಡಿಸಿ ಯುದ್ಧಕ್ಕೆ ಸಿದ್ಧತೆ ನಡೆಸಿದ್ದಾರೆ" ಎಂದು.

ಇಂಡೋಚೀನದಲ್ಲಿ

ಉತ್ತರ ಇಂಡೋಚೀನವನ್ನು ಚೀನೀಪಡೆಗಳು ತೆರವುಮಾಡುವಂತೆ ಚೀನದೊಡನೆ ಒಪ್ಪಂದ ಮಾಡಿಕೊಂಡು ಇಂಡೋಚೀನದ ರಾಷ್ಟ್ರೀಯ ಚಳವಳಿಯನ್ನು ಮುರಿಯಲು ಫ್ರೆಂಚರು ಪ್ರಯತ್ನಿಸಿದರೂ ಅವರಿಗೆ ತೊಂದರೆಯಿಲ್ಲದೆ ಪುನಃ ಆ ದೇಶವನ್ನು ಪೂರ್ಣ ಆಕ್ರಮಿಸಲು ಅವಕಾಶ ದೊರೆಯುವಂತಿಲ್ಲ. ಅನ್ನಂ ರಾಷ್ಟ್ರೀಯ ಚಳವಳಿಯ ನಾಯಕರು ಫ್ರೆಂಚರನ್ನು ಎದುರಿಸಲು ಸಿದ್ಧರಾಗಿಯೇ ನಿಂತಿದ್ದಾರೆಂದು ವರದಿಯಾಗಿದೆ. ರಶಿಯಾವೊಂದೇ ಈಗ ಈ ಅಸಹಾಯ ಜನರಿಗೆ ಅಂತರ್‌ರಾಷ್ಟ್ರೀಯ ಸಮ್ಮೇಲನಗಳಲ್ಲಿ ಬೆಂಬಲಕೊಡುವ ಧೋರಣೆ ಬಿಟ್ಟುಕೊಂಡದ್ದರಿಂದ ಅನ್ನಂ ರಾಷ್ಟ್ರೀಯ ಚಳವಳಿ ಕಮ್ಯುನಿಸ್ಟರ ಕೈಯೊಳಗೆ ಸೇರಿಕೊಂಡಿದೆ.

ಜಗತ್ತಿನ ಕಮ್ಯುನಿಸ್ಟ ಪಕ್ಷಗಳ ಧೋರಣೆ

ಮಾಸ್ಕೋದ ವಿಧಾತರ ಹಿತಸಾಧಿಸುವ ಕೈವಾರಿಗಳು
ಕಾಮಿಂಟರ್ನ ವಿಸರ್ಜಿಸಿದ್ದರಿಂದ ರಶಿಯಕ್ಕಾದ ಹಿತ

-ಲೇ: ಉಯಿಫಿಶರ

ಜಗತ್ತಿನ ದ್ವಿತೀಯ ಪ್ರಬಲ ರಾಷ್ಟ್ರವೆನಿಸಿ ಅಂತರ್‌ರಾಷ್ಟ್ರೀಯ ರಂಗದಲ್ಲಿ ರಶಿಯಾ ಪ್ರಭಾವಶಾಲಿ ಪಾತ್ರ ವಹಿಸುತ್ತದೆ. ಆದುದರಿಂದ ರಶಿಯಾದ ಶಕ್ತಿಯನ್ನು ಹೆಚ್ಚಿಸುವ ಎಲ್ಲ ಸಂಗತಿಗಳು ಜಗತ್ತಿನಲ್ಲಿ ಎಲ್ಲರಿಗೂ ಗಮನಾರ್ಹವಾಗುವವು. ಕಳೆದ ವಾರ ಜನರಾಲಿಸಿಮೋ ಸ್ಟಾಲಿನ್ನರು ರಶಿಯಾದ ಔದ್ಯೋಗಿಕ ಪುನರ್ನಿರ್ಮಾಣವನ್ನು ಕುರಿತು ಮಾತನಾಡಿದಾಗ ರಾಜನೀತಿಯ ಒಲವಿನವರೆಲ್ಲರೂ ಅದಕ್ಕೆ ಯೋಗ್ಯವಾದ ಗಮನವನ್ನೀಯದೆ ಇದ್ದಿರಲಾರರು. ಅದೇ ಪ್ರಕಾರ ವಿವಿಧ ದೇಶಗಳಲ್ಲಿನ ಕಮ್ಯುನಿಸ್ಟ ಪಕ್ಷಗಳ ಚಟುವಟಿಕೆಗಳು ಸರಕಾರಗಳ ಮತ್ತು ವಿಚಾರಶೀಲರ ಲಕ್ಷ್ಯವನ್ನು ಸ್ವಾಭಾವಿಕವಾಗಿ ಸೆಳೆಯುತ್ತವೆ.

ಕಾಮಿಂಟರ್ನ ಅಥವಾ ಅಂತರ್ ರಾಷ್ಟ್ರೀಯ ಕಮ್ಯುನಿಸ್ಟ ಪಕ್ಷವನ್ನು ೧೯೪೩ ರಲ್ಲಿ ಮಾಸ್ಕೋದಲ್ಲಿ ವಿಸರ್ಜಿಸಲಾಯಿತು. ಆದರೆ ಅಂದಿನಿಂದೀಚೆಗೆ ಜಗತ್ತಿನ ಕಮ್ಯುನಿಸ್ಟ ಪಕ್ಷಗಳು ಮಾಸ್ಕೋದ ಅಂಕೆಯಿಂದ ಮುಕ್ತವಾಗಿ ಸ್ವತಂತ್ರವಾಗಿವೆಯೆಂದು ನಂಬಲು ಆಧಾರಗಳಿಲ್ಲ.

ಜಗತ್ತಿನ ಯಾವುದೊಂದು ಕಮ್ಯುನಿಸ್ಟ ಪಕ್ಷವೂ ಸೋವಿಯೆಟ್ ಸರಕಾರವನ್ನು ಟೀಕಿಸುವ ಒಂದೇ ಒಂದು ಶಬ್ದವನ್ನಾದರೂ ಬಹಿರಂಗವಾಗಿ ಉಚ್ಚರಿಸಿದ ಉದಾಹರಣೆಯಿಲ್ಲ. ಯಾವುದೊಂದು ಕಮ್ಯುನಿಸ್ಟ ಪಕ್ಷವೂ ಸೋವಿಯೆಟ್ ಧೋರಣೆಗಳನ್ನೂ ಮುಂದಾಳುಗಳನ್ನೂ ಹೊಗಳುವದರಲ್ಲಿ ಕಡಿಮೆಯಾಗಿಲ್ಲ. ರಶಿಯಾದ ವಿಷಯಕ್ಕೆ ಸ್ವತಂತ್ರವಾಗಿ ಕಮ್ಯುನಿಸ್ಟರು ವಿಚಾರ ಮಾಡಿ ನಿರ್ಣಯಿಸಿದ ಉದಾಹರಣೆಯೊಂದಾದರೂ ಇದ್ದರೆ ಅದು ಬಹಳ ಸೊಗಸಿನ ವಿಷಯವಾಗುತಿತ್ತು. ಅದು ಈ ಪಕ್ಷಗಳು ಮಾಸ್ಕೋದ ಹಿಡಿತದಿಂದ ಬಿಡುಗಡೆಯಾಗಿವೆಯೆಂಬುದಕ್ಕೆ ಪ್ರಮಾಣಸ್ವರೂಪವೂ ಆಗುತಿತ್ತು. ಆದರೆ ಅಂಥ ಉದಾಹರಣೆಯೇ ಇಲ್ಲ.

ಎಪ್ರಿಲ ೧೩, ೧೯೪೧ ರ ಸೋವಿಯಟ್-ಜಪಾನಿ ಒಪ್ಪಂದವನ್ನು ಮತ್ತು ತನ್ಮೂಲಕ ಮಂಚೂರಿಯಾದ ಕೈಗೊಂಬೆ ಜಪಾನಿ ಸರಕಾರಕ್ಕೆ ಸೋವಿಯಟ್ ಸರಕಾರ ಮನ್ನಣೆಯಿತ್ತದನ್ನು ಮತ್ತು ಚೀನಿ-ಜಪಾನ ಯುದ್ಧದಲ್ಲಿ ರಶಿಯಾ ತಟಸ್ಥವಾಗಿ ಉಳಿದುದನ್ನು ಚೀನಿ ಕಮ್ಯುನಿಸ್ಟ ಪಕ್ಷ ಅಧಿಕೃತವಾಗಿ ಬೆಂಬಲಿಸಿತು.

೧೯೪೩ ರಲ್ಲಿ ನಿಜವಾಗಿ ಮಾಸ್ಕೋದಿಂದ ಚೀನಿ ಕಮ್ಯುನಿಸ್ಟ ಪಕ್ಷ ಸ್ವತಂತ್ರವಾಗಿದ್ದರೆ, ಈ ಚೀನೀ ವಿರುದ್ಧ ಒಪ್ಪಂದದ ವಿಷಯದಲ್ಲಿ ಅದರ ಧೋರಣೆ ಬದಲಾಗಬೇಕಾಗಿತ್ತು. ಆದರೆ ಅಂತರ್ರಾಷ್ಟ್ರೀಯ ಕಮ್ಯುನಿಸ್ಟ ಪಕ್ಷದ ವಿಸರ್ಜನೆಯೊಡನೆ ನಿಜವಾಗಿ ಆ ಸ್ವಾತಂತ್ರ್ಯ ಬರಲಿಲ್ಲ. ಆ ಕಾರಣದಿಂದಲೇ ಧೋರಣೆಯೂ ಬದಲಾಗಲಿಲ್ಲ.

ಹಿಂದೀ ಕಮ್ಯುನಿಸ್ಟರು

ಹಿಂದುಸ್ತಾನದಲ್ಲಿ ಕಮ್ಯುನಿಸ್ಟ ಪಕ್ಷ ಮತ್ತು ಕೆಲ ಕಮ್ಯುನಿಸ್ಟ—ಸಮೀಪವರ್ತಿ ಪಕ್ಷಗಳು ಮಾತ್ರವೇ ಕಳೆದ ಯುದ್ಧಕ್ಕೆ ಬೆಂಬಲವಿತ್ತ ಪಕ್ಷಗಳಾಗಿದ್ದವು. ಈ ಮಾತನ್ನು ಬ್ರಿಟಿಶ ಸರಕಾರ ಕಂಡುಕೊಂಡ ಕೂಡಲೆ ಅದರ ಪ್ರಯೋಜನ ಪಡೆಯಿತು. ಹಿಂದೀಯರಿಗೆ ಯುದ್ಧ ಪಕ್ಷಪಾತಿಗಳಾಗಿರುವದಕ್ಕಿಂತ ಯುದ್ಧ ವಿರೋಧಿಗಳಾಗಿರುವದೇ ಹೆಚ್ಚು ಸಹಜಸಿದ್ಧವಾಗಿತ್ತು. ರಶಿಯಾದ ಮೇಲೆ ದಾಳಿಯಾದೊಡನೆ ಹಿಂದೀ ಕಮ್ಯುನಿಸ್ಟರು ಯುದ್ಧ ಪಕ್ಷಪಾತಿಗಳಾದರು. ರಶಿಯಾದ ಮೇಲಿದ್ದ ಅವರ ಪ್ರೀತಿಯೇ ಎಲ್ಲಕ್ಕೂ ಮಿಗಿಲಾದುದಾಗಿತ್ತು. ಕಾಮಿಂಟರ್ನದ ವಿಸರ್ಜನೆಯಾದ ನಂತರವೂ ಅವರು ರಶಿಯಾಕ್ಕೆ ಅಂಟಿಕೊಂಡೇ ಉಳಿದರು. ಹಾಗೆಯೇ ಯುದ್ಧ ಪ್ರಯತ್ನದ ಪಕ್ಷಪಾತಿಗಳೂ ಆಗಿ ಉಳಿದರು.

ಇಟಲಿಯ ಕಮ್ಯುನಿಸ್ಟರು ಸಹಜವಾಗಿ ಮುಸೊಲಿನಿಯ ಸೇನಾಪತಿ ಮಂಡಲದ ಮುಖ್ಯಸ್ಥನಾಗಿದ್ದ ಬದೋಗ್ಲಿಯೋಗೆ ಪ್ರತಿಕೂಲರಾಗಿರಬೇಕಿತ್ತು. ಆದರೆ ಬದೋಗ್ಲಿಯೋನ ಸರಕಾರವನ್ನು ಸೋವಿಯಟ್ಟು ಮನ್ನಿಸಿದ ಕೂಡಲೆ ಇಟಲಿಯ ಕಮ್ಯುನಿಸ್ಟರು ಅವನಿಗೆ ಬೆಂಬಲವೀಯತೊಡಗಿದರು. ಟ್ರೀಸ್ಟ ಬಂದರವನ್ನು ಯುಗೊಸ್ಲಾವಿಯಾಕ್ಕೆ ಒಪ್ಪಿಸಿಬಿಡಲು ಎಲ್ಲ ಇಟಾಲಿಯನ್ನರಂತೆ ಇಟಾಲಿಯನ್ ಕಮ್ಯುನಿಸ್ಟರೂ ಅಸಮ್ಮತಿ ಸೂಚಿಸುವದು ಕ್ರಮಪ್ರಾಪ್ತವಾಗಿತ್ತು. ಆದರೆ ಟಿಟೋನ ಯುಗೊಸ್ಲಾವಿಯಾಕ್ಕೆ ಟ್ರೀಸ್ಟನ್ನು ಕೊಟ್ಟರೆ ಅದರಿಂದ ಸೋವಿಯೆಟ್ ಪ್ರಭಾವ ಆಡ್ರಿಯಾಟಿಕ್ ಸಮುದ್ರಕ್ಕೆ ಸುಲಭವಾಗಿ ಇಳಿದು ಬರಬಹುದೆಂಬ ಕಾರಣದಿಂದ ಇಟಾಲಿಯನ್ ಕಮ್ಯುನಿಸ್ಟರು ಸ್ವದೇಶದ ವಿರುದ್ಧ ಟಿಟೋನ ಪಕ್ಷ ಕಟ್ಟಿದರು.

ರಶಿಯಾ--ಪೋಲಂಡುಗಳಿಗೆ ಜರ್ಮನ್ ಭೂಭಾಗಗಳನ್ನು ತುಂಡರಿಸಿ ಕೊಡಬೇಕಾಗಿ ಬಂದುದಕ್ಕೆ ಸ್ವಾಭಾವಿಕವಾಗಿ ಎಲ್ಲ ಜರ್ಮನರೂ ದುಃಖಿಸಬೇಕು. ಆದರೆ ಜರ್ಮನ್ ಕಮ್ಯುನಿಸ್ಟರು ಮಾತ್ರ ಆ ಬಗ್ಗೆ ಆನಂದದಿಂದ ಚಪ್ಪಾಳೆಯಿಕ್ಕುತ್ತಾರೆ. ಸ್ಟಾಲಿನ್ನರನ್ನು ಸಾಮ್ರಾಜ್ಯವಾದಿಯೆಂದು ಅವರೆಂದಾದರೂ ಟೀಕಿಸಿಯಾರೆ? ಆದರೆ ಜರ್ಮನ್ ಭೂಮಿಯನ್ನು ರಶಿಯನ್ನರು ಸೆಳೆದುಕೊಂಡದ್ದಕ್ಕೆ ಒಪ್ಪಿಗೆ ಕೊಟ್ಟ ಅವರು ರೂಹ್ರ ಪ್ರದೇಶದ ಬೇರ್ಪಡೆಗೆ ವಿರೋಧಿಗಳಾದರು. ಸೋವಿಯಟ್ ವಿದೇಶ ಧೋರಣೆಗೂ ವಿವಿಧ ದೇಶಗಳ ಕಮ್ಯುನಿಸ್ಟ ಪಕ್ಷಗಳ ಮಾತು ಕೃತಿಗಳಿಗೂ ಇರುವ ತಾದಾತ್ಮ್ಯ, ಏಕರೂಪತೆಗಳನ್ನು ನೋಡಿದ ನಂತರ ಈ ವಿಷಯದಲ್ಲಿ ಸಂಶಯಪಡಲು ಕಾರಣವೇ ಇಲ್ಲ. ಮಾಸ್ಕೋ ಮಾಡಿದ್ದೆಲ್ಲ ಕಮ್ಯುನಿಸ್ಟರ ಪಾಲಿಗೆ ಚೆನ್ನ.

ಅದರ ಆಂತರ್ಯ

ಹಾಗಾದರೆ ೧೯೪೩ ಮೇಯಲ್ಲಿ ಕಾಮಿಂಟರ್ನ ಪಕ್ಷವನ್ನು ವಿಸರ್ಜಿಸಿದ್ದರ ಸಂಕೇತವಾದರೂ ಏನಿದ್ದೀತು? ಅದು ಅಂತರ್‌ರಾಷ್ಟ್ರೀಯ ತಾವಾವದಿಂದ ರಶಿಯಾ ಕೈಕೊಂಡ ಹಿನ್ನಡೆಯ ಒಂದಂಗವಾಗಿತ್ತು. ರಶಿಯಾದ ರಾಷ್ಟ್ರೀಯ ಆಕಾಂಕ್ಷೆಗಳಿಗೆ ವಿದೇಶಿ ಕಮ್ಯುನಿಸ್ಟ ಪಕ್ಷಗಳು ಸಂಪೂರ್ಣ ದಾಸರಾಗಿರುವದರ ದ್ಯೋತಕವಿದು.

ಸ್ಟಾಲಿನ್ನನೆಂದರೆ ರಾಜಕಾರಣದಲ್ಲಿ ಮಾರವಾಡಿ. ಅವನ ಕೈಯಲ್ಲಿ ಕಳ ಲೆಕ್ಕಪುಸ್ತಕವೊಂದುಂಟು, ಅದರಲ್ಲಿ ಅವನು ಲಾಭ ನಷ್ಟಗಳನ್ನು ಬರೆದಿಡುತ್ತಾನೆ. ೧೯೧೯ ರಲ್ಲಿ ಕಾಮಿಂಟರ್ನದ ಉದಯದಿಂದಾರಂಭಿಸಿ ೧೯೪೩ ರ ವರೆಗಿನ ಆ ಕಳ್ಳ ಪುಸ್ತಕದ ಜಮಾ-ಖರ್ಚನ್ನು ಕೂಡಿಸಿ ನೋಡಿದ. ಅದರಲ್ಲಿ ಬಹಳ ಕಡಿಮೆ ಅಂಕಿಗಳು ಇರುವದು ಅವನಿಗೆ ಕಂಡಿತು. ಚೀನಿ ಕಮ್ಯುನಿಸ್ಟರು ವಿಶಾಲ ಪ್ರದೇಶಗಳನ್ನು ಆಳುತಿದ್ದರು; ಅವರ [illegible] ದೊಡ್ಡ ಸೈನ್ಯವೂ ಇತ್ತು. ಆದರೆ ಜನರಾಲಿಸ್ಸಿಮೋ ಚಿಯಾಂಗರ ವಿದೇಶ ಧೋರಣದಲ್ಲಿ ಬದಲಾವಣೆಯನ್ನು ತಂದೊಡ್ಡುವದು ಅವರಿಂದಾಗಲಿಲ್ಲ. ಹಿಟ್ಲರ-ಪೂರ್ವ ಜರ್ಮನಿಯಲ್ಲಿ ಕಮ್ಯುನಿಸ್ಟರು ಬಹಳ ಪ್ರಬಲರಾಗಿದ್ದರು. ಅವರಿಗೆ ೬೦ ಲಕ್ಷ ಮತಗಳು ದೊರೆತಿದ್ದವು. ಆದರೂ ಹಿಟ್ಲರನು ಅಧಿಕಾರಕ್ಕೇರುವದನ್ನು ತಡೆಯಲು ಅಥವಾ ಅವನ ಆಡಳಿತೆಯನ್ನು ತಲೆ ಕೆಳಗು ಮಾಡಲು ಅವರು ಸಮರ್ಥರಾಗಲಿಲ್ಲ. ಪ್ರಜಾರಾಜ್ಯವಾದಿ ಸ್ಪೇನದ ಪಕ್ಷಕಟ್ಟಿ ಇಂಗ್ಲಂಡ, ಅಮೇರಿಕಾ, ಫ್ರಾನ್ಸಗಳಲ್ಲಿ ಪ್ರಚಂಡ ಚಟುವಟಿಕೆಯನ್ನು ಕಮ್ಯುನಿಸ್ಟರು ಕೈಕೊಂಡರು. ಆದರೆ ಆ ದೇಶಗಳ ಸರಕಾರಗಳ ಸ್ಪೇನಿಶ ಧೋರಣವನ್ನು ಬದಲು ಮಾಡಲು ಅವರಿಂದಾಗಲಿಲ್ಲ. ಒಂದೇ ಒಂದೆಡೆಯಲ್ಲಿ ಕೂಡ ಕಮ್ಯುನಿಸ್ಟರು ಆ ದೇಶದ ಸರಕಾರದ ಧೋರಣೆಯನ್ನು ತಿರುಗಿಸಲಾರದೆ ಹೋದರು.

ಅಧಿಕಾರಲಾಲಸೆ

ಕಾರಣಗಳು ಸ್ಪಷ್ಟವಾಗಿದ್ದವು. ಸ್ಟಾಲಿನ್ನನಿಂದ ಅವು ಕಣ್ಣುತಪ್ಪಿಸಿಕೊಳ್ಳಲಿಲ್ಲ. ಒಂದು ಸಾರ್ವಜನಿಕ ಪ್ರದರ್ಶನವನ್ನು ಸಂಘಟಿಸುವಲ್ಲಿ, ಒಂದು ಕೂಲಿಕಾರ ಸಂಘವನ್ನು "ಆಕ್ರಮಿಸುವಲ್ಲಿ" ಇಲ್ಲವೆ ನಿರ್ನಾಮ ಮಾಡುವದರಲ್ಲಿ ಅಥವಾ ಪ್ರಭಾವಶಾಲಿ ಪ್ರಚಾರ ಸಾಹಿತ್ಯವನ್ನು ಪ್ರಕಟಿಸುವಲ್ಲಿ ಅವರು ಯಶಸ್ವಿಗಳಾಗಬಲ್ಲವರಾಗಿದ್ದರು. ಆದರೆ ಈ ಚಟುವಟಿಕೆಯೊಂದರಿಂದಲೂ ಸೋವಿಯೆಟ್ ಸರಕಾರಕ್ಕೆ ಏನೂ ಲಾಭವಾಗುತ್ತಿರಲಿಲ್ಲ. ಏಕೆಂದರೆ ಅವರ ಚಟುವಟಿಕೆ ನಿಷೇಧಪ್ರದರ್ಶನದ ಕ್ಷೇತ್ರದಲ್ಲಿ ಮಾತ್ರ ಇದ್ದು, ಬಹಳಾದರೆ ಯಶಸ್ವಿಯಾಗಿ ಅವರು ನಿಷೇಧ ಪ್ರದರ್ಶಿಸಬಹುದಾಗಿತ್ತು. ಅವರ ಕೈಯಲ್ಲಿ ಅಧಿಕಾರವಿದ್ದಿಲ್ಲ. ಕಾಮಿಂಟರ್ನನ್ನು ವಿಸರ್ಜಿಸುವ ಮೂಲಕ ಸ್ಟಾಲಿನ್ನನು ವಿದೇಶಿ ಕಮ್ಯುನಿಸ್ಟ ಪಕ್ಷಗಳನ್ನು ಅಧಿಕಾರದ ಕ್ಷೇತ್ರಕ್ಕೆ ಏರಿಸಿದನು. ೧೯೪೩ ರ ಮೊದಲು ಕಮ್ಯುನಿಸ್ಟರಿಗೆ ಎಲ್ಲಾದರೂ ಸರಕಾರದಲ್ಲಿ ಸ್ಥಾನವಿದ್ದಿದ್ದರೆ, ಅದು ಅಂತರ್ಯುದ್ಧ ಕಾಲದ ಸ್ಪೇನದಲ್ಲಿ ಮಾತ್ರ. ಆದರೆ ಈಚೆಗೆ ನೋಡಿರಿ, ಸಾಧ್ಯವಿದ್ದಲ್ಲೆಲ್ಲ ಕಮ್ಯುನಿಸ್ಟ ಪಕ್ಷಗಳು ದುರ್ಬಲವಾಗಿದ್ದಲ್ಲಿ ಕೂಡ ಕಮ್ಯುನಿಸ್ಟರು ಮಂತ್ರಿಪದವನ್ನು ಹತ್ತಿದ್ದಾರೆ. ಅವರು ಅಧಿಕಾರದ ಕ್ಷೇತ್ರದಲ್ಲಿ ಪ್ರವೇಶಿಸಿ ಅಲ್ಲಿಂದ ರಶಿಯಾಕ್ಕೆ ಕೈಲಾದ ಸಹಾಯ ನೀಡಬಲ್ಲವರಾಗಿದ್ದಾರೆ.

ಈ ಪೃಥಕ್ಕರಣದಿಂದಲೇ ಈಚೆಗಿನ ಕಮ್ಯುನಿಸ್ಟ ಧೋರಣಗಳ ಅರ್ಥ ತಿಳಿದುಕೊಳ್ಳುವದು ಸಾಧ್ಯ. ಅದರಿಂದಲೇ ಭವಿಷ್ಯತ್ತಿನ ದರ್ಶನವೂ ಆಗಬಲ್ಲದು. ಫ್ರಾನ್ಸದ ಸರಕಾರದಲ್ಲಿ ಪ್ರಬಲ ಕಮ್ಯುನಿಸ್ಟ ಪಕ್ಷವೊಂದಿರುತ್ತ ಫ್ರಾನ್ಸು ಮಾಸ್ಕೋಕ್ಕೆ ಅಹಿತವೆನಿಸಿದ ಪಶ್ಚಿಮ ರಾಷ್ಟ್ರಗಳ ಗುಂಪಿನಲ್ಲಿ ಸೇರುವದೆಂತು? ಇಟಲಿಯ ಮತ್ತು ಫ್ರಾನ್ಸಿನ ಕಮ್ಯುನಿಸ್ಟ ಪಕ್ಷಗಳು ಆಯಾ ದೇಶಗಳ ಸರಕಾರಗಳನ್ನು ಬೇಕಾದಾಗ ಉರುಳಿಸಬಲ್ಲವು. ವರ್ಷಾನುವರ್ಷದಿಂದ ಚಿಯಾಂಗರೊಡನೆ ಒಪ್ಪಂದ ಮಾಡಿಕೊಳ್ಳಲೊಲ್ಲದ ಚೀನಿ ಕಮ್ಯುನಿಸ್ಟರು ಈಗ ಅವರೊಡನೆ ಒಪ್ಪಂದ ಮಾಡಿಕೊಂಡಿದ್ದಾರೆ. ಇದರಿಂದ ಚೀನಿ ಸರಕಾರದ ಮೇಲಿದ್ದ ಅಮೇರಿಕನ್ ಪ್ರಭಾವವನ್ನು ಕಡಿಮೆ ಮಾಡಿದಂತಾಗುತ್ತದೆ. ಮತ್ತು ರಶಿಯಾಕ್ಕೆ ಚೀನೀ ಸರಕಾರದ ಮೇಲೊಂದು ಹಿಡಿತವೂ ದೊರೆಯುತ್ತದೆ.

ಯುರೋಪದ ರಶಿಯನ್ ಆಕ್ರಮಿತ ಪ್ರದೇಶದಲ್ಲಿ ಕಮ್ಯುನಿಸ್ಟರು ರಶಿಯಾದ ಪ್ರತ್ಯಕ್ಷ ಕೈವಾರಿಗಳು. ಅವರ ಹೊರಗೆ ಅನೇಕ ಸರಕಾರಗಳಲ್ಲಿ ಕಮ್ಯುನಿಸ್ಟರ ಅಸ್ತಿತ್ವದಿಂದಾಗಿ ಆ ಸರಕಾರಗಳು ಕ್ರೆಮ್ಲಿನ್ನಿಗೆ ರುಚಿಸದಿರುವದೇನನ್ನೂ ಹೇಳಲಾರದ ಮಾಡಲಾರದ ಸ್ಥಿತಿಯುಂಟು.

– ಪುಟ ೧೩ ಕ್ಕೆ

ಕರ್ಮವೀರ
ಹರಿಜನ ಪುರವಣಿ

ಟೀಕೆ ಟಿಪ್ಪಣಿಗಳು

ವಿಚಾರಗಳ ತಾಕಲಾಟ

“ಹಿಂದೀ ನೌಕಾಪಡೆಯ ನಾವಿಕರಿಗೆ, ಅವರ ಸ್ಥಿತಿಗತಿ ಅವಮಾನಕರವಾಗಿದ್ದರೆ ರಾಜೀನಾಮೆ ಕೊಡಲು ಗಾಂಧೀಜಿ ಉಪದೇಶಿಸಿದ್ದರ ಅರ್ಥವೇ ಅವಳಿಗೆ (ಅರುಣಾ ಅಸಫ ಅಲ್ಲಿಗೆ) ಗೊತ್ತಾಗುವದಿಲ್ಲ. ಹಾಗೆ ಮಾಡಿದರೆ ಅವರು ತಮ್ಮ ಜೀವನದ ಏಕಮಾತ್ರ ಆಧಾರವನ್ನು ಬಿಟ್ಟುಕೊಡಬೇಕಾಗುವದು. ಮೇಲಾಗಿ ಅವರು ತತ್ವಗಳಿಗಾಗಿ ಹೋರಾಡುತ್ತಿದ್ದರು. ಅವರು ರಾಜೀನಾಮೆ ಕೊಟ್ಟರೆ ಈ ನಿರುದ್ಯೋಗದ ದಿನಗಳಲ್ಲಿ ಅವರ ಸ್ಥಾನಗಳನ್ನು ಆಕ್ರಮಿಸಲು ನೂರಾರು ಜನರು ಬಂದೇ ಬರುವರು. ಅವರೂ ಇದೇ ಬಗೆಯ ಪಕ್ಷಪಾತದ ನಡೆವಳಿಕೆಗೆ ಗುರಿಯಾಗುವರು. ಹೀಗೆ ಈ ನಾವಿಕರ ಕ್ರಿಯೆಯಿಂದ ಏನೂ ಫಲವಾಗುತ್ತಿದ್ದಿಲ್ಲ. ಸ್ವತಃ ತಾವು ಶಾಸನಸಭೆಗಳಿಗೆ ಹೋಗುತ್ತಿರುವ ಕಾಂಗ್ರೆಸ್ಸಿಗರು ನಾವಿಕರು ಕೆಲಸ ಬಿಡಬೇಕೆಂದು ಹೇಳಿದರೆ ಅದು ಭೂಷಣವಲ್ಲ. ಅದರಿಂದ ದೇಶದ ಧ್ಯೇಯಸಾಧನೆಗೆ ಏನೂ ಸಹಾಯವಾಗುವದಿಲ್ಲ”

ಅರುಣಾ ಬೆನ್ನಳ ಮೇಲಿನ ಪತ್ರಿಕಾ ಸಂದರ್ಶನದ ವರದಿಯಲ್ಲಿನ ಪ್ರತಿಯೊಂದು ಹೇಳಿಕೆಯೂ ಕಾಂಗ್ರೆಸ್ಸಿಗರ ಸಾಮಾನ್ಯ ಅಭಿಪ್ರಾಯಕ್ಕೆ ವಿರುದ್ಧವಾಗಿದೆ. ಅವಳಿಗೆ ಆರೋಪಿಸಲಾದ ಈ ಹೇಳಿಕೆಯಲ್ಲಿರುವ ಅಭಿಪ್ರಾಯಗಳನ್ನು ನಿಜವಾಗಿ ಅರುಣಾಳು ವಹಿಸಿದ್ದಾಳೋ ಇಲ್ಲವೋ ಎಂಬ ಮಾತು ಇಲ್ಲಿ ಅಪ್ರಸ್ತುತ. ಸದ್ಯಕ್ಕೆ ಅವುಗಳನ್ನು ಅವುಗಳ ಯೋಗ್ಯತಾನುಸಾರ ಪರಿಶೀಲಿಸಿ ಅವು ಕಾಂಗ್ರೆಸ್ ಗೊತ್ತುವಳಿಗಳಿಗೆ ಸರ್ವಥಾ ವಿರುದ್ಧವಾಗಿವೆಯೆಂದು ತೋರಿಸಿದರೆ ಸಾಕು. ೧೯೨೦ ರಲ್ಲಿ ಕಲಕತ್ತೆಯ ವಿಶೇಷಾಧಿವೇಶನದಲ್ಲಿ ಲಾಲಾ ಲಜಪತರಾಯರ ನೇತೃತ್ವದಲ್ಲಿ ಆದ ಕಾಂಗ್ರೆಸ ಗೊತ್ತುವಳಿಯು ಆ ಅಹಿಂಸಾತ್ಮಕ ಕ್ರಿಯೆಯ ಪ್ರಥಮ ತತ್ವವೆಂದರೆ ಅವಮಾನಕರವಾಗಿರುವವೆಲ್ಲದರ ಕೂಡ ಅಸಹಕಾರ ಹಿಂದೀ ನೌಕಾಪಡೆಯನ್ನು ಪ್ರಜೆಗಳ ಹಿತಕ್ಕಾಗಿ ಸ್ಥಾಪಿಸಿದ್ದಿಲ್ಲವೆಂಬುದು ನೆನಪಿಡಬೇಕಾದ ವಿಷಯ. ಅದರಲ್ಲಿ ಪ್ರವೇಶಿಸಿದ ಜನರು ಕಣ್ಣು ತೆರೆದುಕೊಂಡೇ ಪ್ರವೇಶಿಸಿದ್ದರು. ಪಕ್ಷಪಾತವೆಂಬುದು ಇಲ್ಲಿ ಕಣ್ಣು ಕುಕ್ಕುವಷ್ಟು ಸ್ಪಷ್ಟವಾಗಿತ್ತು. ಸ್ಪಷ್ಟವಾಗಿ ಒಂದು ಸ್ಥಾನವನ್ನು ದಾಸ್ಯದಲ್ಲಿಡಲೆಂದೇ ಸಂಘಟಿಸಲ್ಪಟ್ಟ ನೌಕರಿಯಲ್ಲಿ ಪ್ರವೇಶಿಸುವವರು ಇದರಿಂದ ತಪ್ಪಿಸಿಕೊಳ್ಳಲಾರರು. ಸ್ಥಿತಿಗತಿಯನ್ನು ಎಲ್ಲರೂ ಸುಧಾರಿಸಲು ಪ್ರಯತ್ನಿಸಬಹುದು, ಬೇಕು. ಅದು ಒಂದು ನಿಟ್ಟಿನ ವರೆಗೆ ಮಾತ್ರ ಸಾಧ್ಯ. ಅದನ್ನು ಬಂಡಾಯದಿಂದ ಸಾಧಿಸುವದು ಸಲ್ಲದು, ಬಂಡಾಯ ಯಶಸ್ವಿಯಾಗಲಾರದೆಂದಲ್ಲ. ಆದರೆ ಅದು ಬಂಡುಗಾರರಿಗೂ ಅವರ ಬಳಗದವರಿಗೂ ಮಾತ್ರ ಉಪಯೋಗವಾಗಬಲ್ಲದು ಹೊರತು ಇಡೀ ದೇಶಕ್ಕಲ್ಲ. ಆದರೆ ಅದು ಕೆಟ್ಟ ಮೇಲ್ಪಂಕ್ತಿಯಾದೀತು. ಸ್ವರಾಜ್ಯದಲ್ಲಿಯೂ ಶಿಸ್ತು ಕನಿಷ್ಠ ಈಗಿನಷ್ಟೆ ಅವಶ್ಯವಾಗಿರುವದು. ಯಶಸ್ವಿ ಬಂಡುಗಾರರ ಕೈಕೆಳಗೆ ಹಿಂದುಸ್ತಾನ ಪರಸ್ಪರ ಹೋರಾಡುವ ಪಾಳೆಯಗಳಲ್ಲಿ ಹರಿಹಂಚಾಗಿ ಅಂತರ್ಯುದ್ಧದಿಂದ ಸೋತು ಸುಣ್ಣಾದೀತು.

ಅವಮಾನದ ವಿರುದ್ಧ ಹೋರಾಡುತ್ತ ರಾಜೀನಾಮೆ ಕೊಟ್ಟ ನಾವಿಕರ ಸ್ಥಾನದಲ್ಲಿ ನೂರಾರು ಜನ ಬಂದು ಕೂಡುವರೆಂಬ ಮಾತು ನಿಜವಿದ್ದರೆ, ಕಾಂಗ್ರೆಸ್‌ವಾದಿ ಹಿಂದುಸ್ತಾನದಲ್ಲಿ ಸ್ವರಾಜ್ಯದ ಹೋರಾಟದ ತಿಳಿವಳಿಕೆಯುಂಟಾಗಿಲ್ಲವೆಂದೇ ಅರ್ಥವಾಗುತ್ತದೆ. ನಮ್ಮ ಅವಮಾನಿತ ಬಾಂಧವರ ಸ್ಥಾನಗಳನ್ನು ಆಕ್ರಮಿಸುವಷ್ಟು ಮಟ್ಟಿಗೆ ಅವಮಾನವನ್ನು ನುಂಗಿಕೊಳ್ಳಲು ಸಿದ್ಧರಾಗುವ ನೂರುಗಟ್ಟಲೆ ಜನರು ನಮ್ಮ ನಡುವೆ ಇರುವಷ್ಟು ನಾವು ಪತಿತರಾಗಿದ್ದರೆ ಜನತೆಯ ಸ್ವರಾಜ್ಯ ಈ ದೇಶದಲ್ಲಿ ಸಾಧ್ಯವೇ? ಇಂಥ ವಿಚಾರವೇ ಕಾಂಗ್ರೆಸ್ಸಿಗರಿಗೆ ಶೋಭಿಸತಕ್ಕದ್ದಲ್ಲ— ಅದು ಸ್ವರಾಜ್ಯ ಕಣ್ಣಳತೆಯಲ್ಲಿದೆಯೆಂಬ ನಂಬಿಕೆಯಿರುವ ಮುಹೂರ್ತದಲ್ಲಿ.

ಹಿಂದೀ ನೌಕಾಪಡೆಯಲ್ಲಿ ಸೇರುವದೊಂದೇ ತಮ್ಮ ಜೀವನಾಧಾರವೆಂದು ಭಾವಿಸುವವರಿದ್ದರೆ ಅವರಿಗೆ ತಮ್ಮ ಬಗ್ಗೆ ಬಹಳ ಕೀಳು ಕಲ್ಪನೆಯಿರಬೇಕು. ಸೈನಿಕರ ಜೀವನ ಕಠಿನವಾದುದು. ಸಹಕಾರದಿಂದ ಕೆಲಸಮಾಡುವ ಶಿಸ್ತು, ಹಾರೆಗುದ್ದಲಿಯಿಂದ ದುಡಿಯುವ ತರಬೇತಿ ಅವನಿಗೆ ಕೊಡಲ್ಪಡುವದು. ಅಂಥ ಮನುಷ್ಯನು ಸೈನಿಕನಾಗಿರುವ ಹೊರತು ತನಗೆ ಬೇರೆ ಜೀವನೋಪಾಯವಿಲ್ಲವೆಂದು ಬಗೆಯಲು ಹೇಸುವನು. ಸೈನಿಕರು ಹಣೆಯ ಬೆವರು ಸುರಿಸಿ ಪಥಗಳಿಸಲಾರರೆಂಬ ಭಾವನೆ ನಮಗಿದ್ದರೆ, ಸೈನಿಕರ ಬಗ್ಗೆ ನಮ್ಮ ಅಭಿಪ್ರಾಯ ಕೀಳಾಗಿದೆಯೆನ್ನಬೇಕು. ದುಡಿಮೆಗಾರನಿಗೆ ಯಾವಾಗಲೂ ದಿನದ ಪಥಗಳಿಸುವ ಯೋಗ್ಯತೆಯುಂಟು ಆದರೆ ಕೆಲಸ ಬಿಟ್ಟು ಹೋದ ಸೈನಿಕನಿಗೆ ಸೈನಿಕ ಜೀವನದಲ್ಲಿ ದೊರಕುತಿರುವ ಚೈನಿ ಇಲ್ಲವೆಂಬ ಮಾತು ಮಾತ್ರ ನಿಜ. ಕೊಲ್ಲುವ ಮತ್ತು ಹಾಳುಗೆಡಹುವ ವೃತ್ತಿಯ ಮೇಲೆ ಬಳಸಿರುವ ದೀರ್ಘಕಾಲದ ಥಳಕಿನ ಪದರನ್ನು ನಾವಿನ್ನೂ ತೆರೆದು ಬಗೆಯಲಾರದಿದ್ದರೆ ಬೆಲೆಯುಳ್ಳ ಜೀವವರ್ಷಗಳನ್ನು ನಾವು ವ್ಯರ್ಥವಾಗಿ ಅಪವ್ಯಯಗೊಳಿಸಿದಂತೆಯೆ ಸರಿ.

ನಾವಿಕರು ರಾಜೀನಾಮೆ ಕೊಟ್ಟು ಏನನ್ನೂ ಸಾಧಿಸುತಿದ್ದಿಲ್ಲವೆಂದು ಅರುಣಾ ಹೇಳಿದಳೆಂದು ವರದಿಯಾಗಿದೆ. ಒಳ್ಳೇದು, ಅವರು ಕೆಲಸ ಬಿಟ್ಟದ್ದರೆ ಅವರಿಗೆ ಗೌರವ ಅಭಿಮಾನಗಳು ದೊರಕುತಿದ್ದವು. ಮುಂಬಯಿ ನಿವಾಸಿಗಳಿಗೆ ಗೌರವಾಭಿಮಾನಗಳನ್ನು ಉಳಿಸಿಕೊಳ್ಳುವ ಹಾದಿಯನ್ನೂ ಅವರು ತೋರಿಸಬಹುದಾಗಿತ್ತು. ಅಲ್ಲದೆ ಮುಂಬಯಿಯ ಮೇಲೊದಗಿ ಬಂದ ವಿವೇಕಗೆಟ್ಟ ಜೀವನಾಶ, ಆಸ್ತಿನಾಶ ಮತ್ತು ಅಮೂಲ್ಯ ಆಹಾರದ ನಾಶಗಳನ್ನು ಅವರು ತಡೆಯಬಹುದಾಗಿತ್ತು. ನಿಜವಾಗಿ ಇದೇನು ತಾತ್ಸಾರಾರ್ಹ ಸಿದ್ಧಿಯೆನಿಸುತಿದ್ದಿಲ್ಲ.

ಮೇಲಿನ ವರದಿಯಲ್ಲಿನ ಕೊನೆಯ ಹೇಳಿಕೆ ವಿಚಾರಗೊಂದಲದಿಂದಲೇ ಹುಟ್ಟಿದ್ದು. ದೇಶದ ಗೌರವ ಸ್ವಾತಂತ್ರ್ಯಗಳ ರಕ್ಷಣೆಗಾಗಿ ಶಾಸನ ಸಭೆಗಳಿಗೆ ಹೋಗುವ ಕಾಂಗ್ರೆಸ್ಸಿಗರೂ ಜೀವನ ನಿರ್ವಾಹಕ್ಕಾಗಿ ದುಡಿಯುವ ಹಾಗೂ ತಮ್ಮ ದೇಶಬಾಂಧವರ ಮತ್ತು ಅವರ ಸ್ವಾತಂತ್ರ್ಯದ ವಿರುದ್ಧ ಉಪಯೋಗಿಸಲ್ಪಡುವ ಸಂಭಾವ್ಯತೆಯುಳ್ಳ ನಾವಿಕರೂ ಒಂದೇ ವರ್ಗದವರಲ್ಲ. ಶಾಸನ ಸಭೆಗಳಿಗೆ ಹೋಗುವ ಕಾಂಗ್ರೆಸ್ಸಿಗರು ತಮ್ಮ ಮತದಾರರಿಂದ ಆರಿಸಲ್ಪಟ್ಟ ಪ್ರತಿನಿಧಿಗಳು. ಮತದಾರರ ಅಭಿಪ್ರಾಯಗಳಿಗೆ ವಿರುದ್ಧವಾಗಿ ವರ್ತಿಸುವವರನ್ನು ಪ್ರತಿನಿಧಿಗಳಾಗಿ ಹೋಗದಂತೆ ತಡೆಯಲೆಂದಷ್ಟೇ ಅವರು ಹೋಗುವರು. ಶಾಸನ ಸಭೆಗಳಿಗೆ ಹೋಗುವುದು ಸರ್ವಥಾ ಕೆಡುಕಾಗಿದ್ದೀತು ಆದರೆ ಮೇಲೆ ಹೇಳಿದ ಹೋಲಿಕೆ ಎಂದಿಗೂ ಸಮಂಜಸವಾಗಲಾರದು.

ಪುಣೆ ೩-೩-೪೬. ಮೋ. ಕ. ಗಾಂಧಿ

ಉಪಯುಕ್ತ ಕರಪತ್ರಿಕೆ

ಮುಂಬಯಿ ಪ್ರಾಂತದ ಒಕ್ಕಲತನದ ಖಾತೆಯವರು ಹೊರಡಿಸಿರುವ ಒಂದು ಹಸ್ತಪತ್ರಿಕೆಯನ್ನು ಒಬ್ಬ ಗೆಳೆಯರು ನನಗೆ ಕಳಿಸಿದ್ದಾರೆ. ಬಂಗಲೆಗಳ ಆವಾರದಲ್ಲಿ ಸಣ್ಣ ಪ್ರಮಾಣದಲ್ಲಿ ಕಾಯಿಪಲ್ಲೆಗಳನ್ನು ಬೆಳೆಯುವದನ್ನು ಕುರಿತು ಅದರಲ್ಲಿ ಕೆಲವು ಸೂಚನೆಗಳಿವೆ. ಈ ಹಸ್ತಪತ್ರಿಕೆಯನ್ನು ೧೯೪೩ ರಲ್ಲಿ ಅಂದರೆ ಯುದ್ಧಕಾಲದಲ್ಲಿ ‘ಹೆಚ್ಚಿಗೆ ಆಹಾರ ಬೆಳೆಯಿರಿ’ ಎಂಬ ಆಂದೋಲನದ ನಿಮಿತ್ತ ಪ್ರಕಟಿಸಲಾಗಿತ್ತು. ಆಗ ಅಗತ್ಯವಿದ್ದದ್ದು ಆಹಾರದ ಹೆಚ್ಚಿನ ಕೊರತೆ ಇರುವ ಈಗಿನ ಕಾಲದಲ್ಲಿ ಇನ್ನೂ ಅವಶ್ಯಕವಾಗಿದೆ. ಆದರೆ ಇದನ್ನು ಇಂಗ್ಲಿಷದಲ್ಲಿ ಪ್ರಸಿದ್ಧಿಸಿದ್ದು ದುರ್ದೈವವು. ಅಥವಾ ಇಂಗ್ಲಿಷ ಪ್ರತಿಯನ್ನಷ್ಟೆ ನನಗೆ ಕಳಿಸಿರಬಹುದು. ಇತರ ಪ್ರಾಂತಿಕ ಭಾಷೆಗಳಲ್ಲಿ ಪರಿವರ್ತಿತವಾಗಿ ಪ್ರಸಿದ್ಧವಾಗಿರಬಹುದು. ಅದು ಏನೇ ಇರಲಿ, ಈ ಹಸ್ತಪತ್ರಿಕೆ ಉಪಯುಕ್ತವೂ ಸೂಚಕವೂ ಆಗಿದೆ. ಇದರಲ್ಲಿ ಆಸ್ಥೆಯಿದ್ದವರೂ ಈ ಪ್ರಯೋಗ ನಡೆಸುವದಕ್ಕಾಗಿ ಭೂಮಿಯಿದ್ದವರೂ ಈ ಹಸ್ತಪತ್ರಿಕೆಯನ್ನು ತರಿಸಿಕೊಂಡು ಅದರಲ್ಲಿಯ ಸೂಚನೆಗಳಂತೆ ನಡೆದುಕೊಳ್ಳುವ ಉದ್ದೇಶದಿಂದ ಅಭ್ಯಾಸಮಾಡಬೇಕು. ಅದರಲ್ಲಿಯ ಕೆಲವು ಸೂಚನೆಗಳನ್ನು ನಾನು ಇಲ್ಲಿ ಆಯ್ದುಕೊಟ್ಟಿದ್ದೇನೆ.

೧) ಕಾಯಿಪಲ್ಲೆಗಳ ಬಿತ್ತಿಗೆಂದು ಆರಿಸಿದ ಪ್ರದೇಶಕ್ಕೆ ನೀರಿನ ಪೂರೈಕೆ ಚೆನ್ನಾಗಿರಬೇಕು. ಕಟ್ಟಡಗಳ ಅಥವಾ ಗಿಡಗಳ ನೆರಳು ವಿಶೇಷವಾಗಿ ಅಲ್ಲಿ ಬೀಳಬಾರದು.

೨) ಹೂ ಗಿಡಗಳನ್ನು ಬೆಳೆಸುವ ಮಡಿಗಳು ಕಾಯಿಪಲ್ಲೆ ಬೆಳೆಸಲಿಕ್ಕೂ ಯೋಗ್ಯವಿರುತ್ತವೆ. ಹುಲ್ಲುಗಾವಲವನ್ನು ಅಗೆದು ಕಾಯಿಪಲ್ಲೆ ಬೆಳೆಯಲು ಉಪಯೋಗಿಸಬಹುದು.

೩) ಬಚ್ಚಲಮೋರೆಯ, ಅಡುಗೆಯ ಮನೆಯ ನೀರನ್ನು ಈ ಕೆಲಸಕ್ಕಾಗಿ ಉಪಯೋಗಿಸಬಹುದು.

೪) ಕಾಯಿಪಲ್ಲೆ ಸುಲಭವಾಗಿ ಬೆಳೆಯಲು ಆಕಳ ಸಗಣಿಯಂಥ ಗೊಬ್ಬರ ಉಪಯೋಗಿಸುವದು ಅವಶ್ಯಕ.

೫) ಬೀಜ ಎಷ್ಟು ಬೇಕು, ಎಷ್ಟು ಆಳದಲ್ಲಿ ಬಿತ್ತಬೇಕು, ಮಡಿಗಳ ಅಳತೆ ಮತ್ತು ಎರಡು ಸಾಲುಗಳ ನಡುವಿನ ಅಂತರವೆಷ್ಟಿರಬೇಕೆಂಬುದನ್ನು ತೋರಿಸುವ ಕೋಷ್ಟಕವನ್ನೂ ಕೊನೆಯಲ್ಲಿ ಕೊಡಲಾಗಿದೆ.

ಪುಣೆ ಮೋ. ಕ. ಗಾಂಧಿ
೧—೩—೪೬

ಯಾರ ಅವಶ್ಯಕತೆ?

ಮನೆಯಾಳುಗಳ ಸಂಸ್ಥೆ ಪುರಾತನವಾದದ್ದು. ಆದರೆ ಆಳಿನ ಬಗ್ಗೆ ಒಡೆಯರ ವರ್ತನೆಯು ಕಾಲಕಾಲಕ್ಕೆ ಬದಲಾಗುತ್ತ ಬಂದಿದೆ. ಕೆಲವರು ಆಳುಗಳನ್ನು ತಮ್ಮ ಕುಟುಂಬದವರೆಂದೆ ಭಾವಿಸುತ್ತಿದ್ದಾರೆ. ಇನ್ನು ಕೆಲವರು ಅವರನ್ನು ಕೇವಲ ಗುಲಾಮರೆಂದು ನಡೆಸಿಕೊಳ್ಳುತ್ತಾರೆ. ಆಳುಗಳ ಬಗ್ಗೆ ಸಮಾಜದ ಧೋರಣವು ಈ ಎರಡು ಅಜಗಜಾಂತರ ವ್ಯತ್ಯಾಸವುಳ್ಳ ಭಿನ್ನಾಭಿಪ್ರಾಯಗಳ ನಡುವೆ ತೋರಿ ಬರುತ್ತದೆ. ಸದ್ಯಕ್ಕೆ ಆಳುಗಳ ಅವಶ್ಯಕತೆ ಬಹಳವಾಗಿದೆ. ಅವರಿಗೂ ತಮ್ಮ ಮಹತ್ವದ ಅರಿವು ಹುಟ್ಟಿ ಸೇವೆ, ಸಂಬಳಗಳ ಕರಾರುಗಳನ್ನು ಕೇಳುತಿದ್ದಾರೆ. ಆಳುಗಳು ತಮ್ಮ ಕರ್ತವ್ಯವನ್ನರಿತು ಯೋಗ್ಯ ರೀತಿಯಿಂದ ಕರಾರುಗಳನ್ನು ಕೇಳುತ್ತಿದ್ದರೆ ಯೋಗ್ಯವಾದ ಸಂಗತಿ. ಆಗ ಅವರು ಆಳುಗಳಾಗಿ ಉಳಿಯದೆ ಕುಟುಂಬದ ಜನರ ಸ್ಥಾನವನ್ನು ಪಡೆಯುತ್ತಾರೆ. ಹಿಂಸೆಯ ಸಾಮರ್ಥ್ಯದಲ್ಲಿದ್ದ ವಿಶ್ವಾಸವಂತೂ ಹಾರಿಹೋಗಿದೆ. ಆದ್ದರಿಂದ ಆಳುಗಳು ತಮ್ಮ ಒಡೆಯರ ಕುಟುಂಬದವರ ಸ್ಥಾನಮಾನವನ್ನು ಹೇಗೆ ಗಳಿಸಬಹುದು? ಎಂಬ ಪ್ರಶ್ನೆಯನ್ನು ಕೇಳಬಹುದು.

ಪ್ರಶ್ನೆ—ಪೆಟ್ಟಿಗೆ

ಪ್ರಶ್ನೆ— ಒಬ್ಬ ಗೆಳೆಯರು ಬರೆಯುತ್ತಾರೆ?— ಈಗ ನೀವು ಪುಣೆಯಲ್ಲಿರುತ್ತೀರಿ. ನೀವು ಆಗಾಖಾನ ಸಾಹೇಬರ ಗೆಳೆಯರೆಂದು ಪತ್ರಿಕೆಗಳಲ್ಲಿ ಓದಿದ್ದೇನೆ. ಅವರ ಹತ್ತಿರ ನೀರಿದೆ, ಹಣವಿದೆ, ಭೂಮಿಯಿದೆ. ಹಾಗೆಯೆ ಗವ್ಹರ್ನರ ಸಾಹೇಬರ ಗಣೇಶಖಿಂಡ ಬಯಲು ಕೂಡ ಬಹಳ ವಿಶಾಲವಾಗಿವೆ; ಇವೆರಡೂ ಸ್ಥಳಗಳಲ್ಲಿ ಧಾನ್ಯಗಳು ಬೆಳೆಯಲಾರವೆ? ಅಲ್ಲಿ ಧಾನ್ಯಗಳನ್ನು ಬೆಳೆಸಲು ನೀವು ಅವರನ್ನು ಪ್ರೇರಿಸಲಾರಿರಾ? ನಿಮಗೆ ಉಪವಾಸದಲ್ಲಿ ವಿಶ್ವಾಸವಿದೆ. ಬರಿ ಧರ್ಮಲಾಭಕ್ಕಲ್ಲದೆ ಆರೋಗ್ಯಲಾಭಕ್ಕಾಗಿಯೂ ಉಪವಾಸ ಮಾಡಬಹುದೆಂದು ನೀವು ಬರೆದುದುಂಟು. ಯಾವಾಗಲೂ ಊಟ ಸಿಗುವವರಿಗೆ ವಾರದಲ್ಲೊಂದು ದಿನ ಅಥವಾ ಒಂದು ಹೊತ್ತು ಹೆಚ್ಚಿನ ಊಟವನ್ನು ಬಿಡಲು ಹೇಳಲಾರಿರಾ. ಈ ಪ್ರಕಾರವೂ ಧಾನ್ಯಗಳನ್ನು ಉಳಿಸಬರುವದಿಲ್ಲವೆ? ಮಳೆಕೆ ಬರುವವರೆಗೂ ಧಾನ್ಯವನ್ನು ನೆನಸಿಟ್ಟು ಹಸಿಯಾಗಿಯೇ ತಿಂದರೆ ಕಡಿಮೆ ಆಹಾರದಿಂದ ಸಾಕಷ್ಟು ಪುಷ್ಟಿ ದೊರೆಯುತ್ತದೆಂದು ಹೇಳುತ್ತಾರೆ ಇದು ನಿಜವೇ?

ಉತ್ತರ:— ನನ್ನೆಣಿಕೆಯಲ್ಲಿ ಈ ಮೂರೂ ಸೂಚನೆಗಳು ಸರಿಯಾಗಿಯೆ ಇವೆ. ಅದನ್ನು ಕಾರ್ಯಕಾರಿ ಮಾಡುವದು ಸುಲಭವೇ ಆಗಿದೆ. ನೀರು-ನೆಲ ಎರಡೂ ಇರುವವರಿಗಾಗಿ ಮೊದಲನೆ ಸೂಚನೆಯಿದೆ; ಧಾರಾಳವಾಗಿ ತಿನ್ನುವವರಿಗೆ ಎರಡನೆಯದು; ಮೂರನೆಯದು ಎಲ್ಲರಿಗಾಗಿಯೂ ಇದೆ—ಯಾವ ವಸ್ತುಗಳನ್ನು ಹಸಿಯಾಗಿಯೆ ತಿನ್ನಲು ಸಾಧ್ಯವಿದೆಯೋ ಅದನ್ನು ಹಸಿಯೇ ತಿನ್ನಲು ಪ್ರಯತ್ನಿಸಬೇಕೆಂದು ಅದರ ಸಾರಾಂಶ. ಬುದ್ಧಿಪೂರ್ವಕವಾಗಿ ನಾವು ಹೀಗೆ ಮಾಡಿದರೆ ಬಹಳ ಕಡಿಮೆಯಿಂದಲೇ ನಮ್ಮ ನಿರ್ವಾಹ ಸಾಗೀತು; ಇಷ್ಟೇ ಅಲ್ಲ, ಇದರಿಂದ ಲಾಭವೂ ದೊರಕುವದು. ಎಲ್ಲರೂ ಆಹಾರ ನಿಯಮಗಳನ್ನು ತಿಳಿದುಕೊಂಡರೆ ಮತ್ತು ಅನುಸರಿಸಿದರೆ, ಬಹಳ ಉಳಿತಾಯವಾಗಬಲ್ಲದೆಂಬಲ್ಲಿ ಸಂಶಯವಿಲ್ಲ.

ಪುಣೆ, ಮೋ. ಕ. ಗಾಂಧಿ
೨-೩-೪೬

ಎರಡನೆಯವರಿಗೆ ಸಹಕಾರ ತೋರಿ ತಾನು ಸಹಕಾರ ಪಡೆಯಬೇಕೆನ್ನುವವನು ಆಳುಗಳನ್ನು ಅವಲಂಬಿಸಲಾರದು. ಆಳುಗಳ ಕೊರತೆ ಇದ್ದಾಗ ಯಾವನೊಬ್ಬ ಆಳು ದೊರೆತರೆ ಅವನು ಕೇಳಿದಷ್ಟು ಸಂಬಳ ಕೊಟ್ಟು ಅವನು ಹೇಳಿದಂತೆ ಕೇಳಿಕೊಳ್ಳಬೇಕಾಗಿ ಬಂದು ಒಡೆಯನು ಆಳಿನ ಆಳಾಗುತ್ತಾನೆ. ಇದು ಆಳಿಗೂ ಒಳಿತಲ್ಲ. ಒಡೆಯನಿಗೂ ಒಳಿತಲ್ಲ. ಆದರೆ ದಾಸ್ಯವನ್ನಲ್ಲದೆ ಸಹಕಾರ ಬಯಸುವವರೆಲ್ಲರೂ ತಮ್ಮ ಕೆಲಸಗಳನ್ನು ತಾನೇ ಮಾಡಿಕೊಳ್ಳುವರಲ್ಲದೆ ತಮಗೆ ಸಹಕಾರ ಬೇಕಾದವರಿಗೂ ನೆರವಾಗುತ್ತಾರೆ. ಈ ತತ್ವವನ್ನು ಆಚರಿಸುವವನ ಕುಟುಂಬವು ವಿಶ್ವಬಾಂಧವ್ಯವನ್ನು ಪಡೆದು ಸಹಬಾಂಧವರ ಬಗ್ಗೆ ಆ ಕುಟುಂಬದ ಧೋರಣೆಯಲ್ಲಿಯೂ ಅನುಕೂಲ ಬದಲಾವಣೆ ಕಂಡು ಬರುವದು. ಇಚ್ಛಿತ ಫಲಪ್ರಾಪ್ತಿಗಾಗಿ ಇದರ ಹೊರತು ಬೇರೆ ದಾರಿಯಿಲ್ಲ.

ಈ ತತ್ವದ ಆಚರಣೆಯಿಂದ ಸಮಾಧಾನ ಹೊಂದುವವರು ಚಿಕ್ಕಪುಟ್ಟ ಕೆಲಸಗಳಿಂದ ಪ್ರಾರಂಭಿಸುತ್ತಾರೆ. ಸಾವಿರಾರು ಜನರ ಸಹಕಾರವನ್ನು ಪಡೆಯುವ ಸಾಮರ್ಥ್ಯವಿದ್ದವನಲ್ಲಿ ಸ್ವತಂತ್ರನಾಗಿ ನಿಲ್ಲುವ ಆತ್ಮಸಂಯಮ, ಆತ್ಮಾಭಿಮಾನಗಳೂ ಅವಶ್ಯವಾಗಿರಬೇಕು. ಇಂಥವನು ಯಾರನ್ನೂ ತನ್ನ ಆಳೆಂದು ಭಾವಿಸುವದಿಲ್ಲ, ಅವನನ್ನು ದಾಸ್ಯದಲ್ಲಿಡಬಯಸುವದಿಲ್ಲ. ಅಷ್ಟೇಕೆ ತಾನು ಒಡೆಯ, ಅವನು ಆಳು ಎಂದು ಭಾವಿಸುವದಿಲ್ಲ; ಅವರನ್ನು ತನ್ನ ಮಟ್ಟಕ್ಕೆ ತರಲು ಅಳವು ಮೀರಿ ಪ್ರಯತ್ನಿಸುತ್ತಾನೆ. ಅಂದರೆ ಎರಡನೆಯವರಿಗಿಲ್ಲದ್ದನ್ನು ತಾನೂ ತೊರೆದು ಜೀವಿಸಲು ಕಲಿಯಬೇಕು.

ಪುಣೆ ಮೋ. ಕ. ಗಾಂಧಿ
೧—೩—೪೬

(ಹರಿಜನ ಬಂಧು)

ಮಾರ್ಗ ಮತ್ತು ಉಪಾಯ

ದೇಶದಲ್ಲಿ ಉಂಟಾದ ಆಹಾರ ಗಂಡಾಂತರವನ್ನು ಹೋಗಲಾಡಿಸುವದಕ್ಕಾಗಿ ಮಾರ್ಗ ಮತ್ತು ಉಪಾಯಗಳನ್ನು ಹುಡುಕಲು ಗಾಂಧೀಜಿಯವರು ತಮ್ಮ ಮತ್ತು ದೇಶದ ಲಕ್ಷವನ್ನು ವೇಧಿಸಿದಂದಿನಿಂದ ಆ ಬಗ್ಗೆ ಸೂಚನೆಗಳು ಅವರೆಡೆಗೆ ಒಂದೇಸವನೆ ಬರಹತ್ತಿವೆ. ಅಂಥ ಹಲವು ಸೂಚನೆಗಳನ್ನು ಗಾಂಧೀಜಿಯವರು ತಮ್ಮ ಪ್ರಕಟನೆಗಳಲ್ಲಿ ಮತ್ತು 'ಹರಿಜನ' ಲೇಖಗಳಲ್ಲಿ ಈ ಮೊದಲು ಚರ್ಚಿಸಿರುವರು. ಇಲ್ಲಿ ಬೇರೆ ಹಲವು ಸೂಚನೆಗಳನ್ನು ಚರ್ಚಿಸಿದೆ. ಅಧಿಕಾರಿಗಳು ಅವುಗಳತ್ತ ತಮ್ಮ ಕೈಲಾದಷ್ಟು ಗಮನಕೊಡಬೇಕು; ಸಾರ್ವಜನಿಕರಾದರೂ ವ್ಯವಹಾರ್ಯವಾದ ಸಹಾಯವನ್ನು ಶಕ್ಯವಿದ್ದಮಟ್ಟಿಗೆ ಮಾಡಬಹುದಾಗಿದೆ.

೧) ಗುಂಟೂರಲ್ಲಿ ೪ ಲಕ್ಷ ಎಕರೆ, ಕೃಷ್ಣಾ ಮತ್ತು ಗೋದಾವರಿ ಜಿಲ್ಲೆಗಳಲ್ಲಿ ೬ ಲಕ್ಷ ಎಕರೆ ಸರಕಾರ ಜಿಲ್ಲೆಗಳಲ್ಲಿ ೧೦ ಲಕ್ಷ ಎಕರೆ, ಉಳಿದೆಡೆ ೨೦ ಲಕ್ಷ ಎಕರೆ ಹೀಗೆ ಲಕ್ಷಗಟ್ಟಲೆ ಎಕರೆ ಫಲವತ್ತಾದ ಹತ್ತಿ ಬೆಳೆವ ಕರೆ ಭೂಮಿಯನ್ನು ವರ್ಜಿನಿಯಾ ತಂಬಾಕ ಬೆಳೆಯಲು ಉಪಯೋಗಿಸಲಾಗುತ್ತದೆ. ತಂಬಾಕ ಮತ್ತು ಅದರ ಉಪಯೋಗವು ಮನುಷ್ಯನಿಗೆ ಅಪಾಯಕಾರಕವಾದ್ದರಿಂದ ಅದನ್ನು ನಿಷೇಧಿಸುವದವಶ್ಯ. ಈ ಭೂಮಿಗಳ ಒಡೆಯರು ತಂಬಾಕ ಬೆಳೆಯುವದನ್ನು ಬಿಟ್ಟುಗೊಟ್ಟು ಇಲ್ಲವೆ ಅದನ್ನು ಕಡಿಮೆ ಮಾಡಿ ಅದರ ಸ್ಥಳದಲ್ಲಿ ಆಹಾರ ಮತ್ತು ಮೇವಿನ ಬೆಳೆ ಬೆಳೆಸುವ ಸುಸಂಧಿಯನ್ನು ಪ್ರಾಪ್ತಮಾಡಿಕೊಳ್ಳಬೇಕು.

೨) ಸುವಾಸಿಕ ಎಣ್ಣೆ ಮತ್ತು ಸಾಬೂಣಗಳನ್ನು ಸಿದ್ಧಪಡಿಸುವದಕ್ಕಾಗಿ ಕೊಬ್ಬರಿಯನ್ನು ಬಹಳ ಮಟ್ಟಿಗೆ ಉಪಯೋಗ ಮಾಡಲಾಗುತ್ತದೆ ವಿಶೇಷ ಪರಿಶ್ರಮವಿಲ್ಲದೆ ಕೊಬ್ಬರಿಯನ್ನು ಬಹಳ ದಿನಗಳವರೆಗೆ ಹಾಗೆಯೆ ಇಟ್ಟು ಪೌಷ್ಟಿಕ ಆಹಾರ ಪದಾರ್ಥದಂತೆ ಉಪಯೋಗಿಸಬಹುದಾಗಿದೆ. ಅದರಲ್ಲಿ ವನಸ್ಪತಿ ಕೊಬ್ಬ ಮತ್ತು ಆಹಾರ ಸತ್ವದ ಪ್ರಮಾಣ ಬಹಳ ಮಟ್ಟಿಗಿರುವದು. ಇದರ ಮುಖ್ಯ ಪ್ರದೇಶವೆಂದರೆ ಕೋಚೀನ ಮತ್ತು ತ್ರಾವಣಕೋರ; ಈ ಉದ್ಯೋಗವೆಲ್ಲ ದೊಡ್ಡ ದೊಡ್ಡ ವ್ಯಾಪಾರಸ್ಥರ ಹಿತಸಂಬಂಧವುಳ್ಳವರ ಕೈಯಲ್ಲಿ ದೆಂಬುದು ಜನಜನಿತ.

೩) ಪುಣೆಯ ಗೆಳೆಯನೊಬ್ಬನು ಎರಡು ಮಾದರಿಯ ಜೋಳ ಕಳಿಸಿದ್ದಾನೆ. 'ಅ' ಮತ್ತು 'ಬ' ಎಂದು ಈ ನಮೂನೆಗಳನ್ನು ಹೆಸರಿಡುವಾ. 'ಅ' ವರ್ಗದ ಜೋಳ ಎಂದರೆ ಕಳೆದ ಸುಗ್ಗಿಯಲ್ಲಿ ಒಕ್ಕಲಿಗರು ತಮ್ಮ ಹೊಲದಲ್ಲಿ ಬೆಳೆದದ್ದನ್ನು ಸರಕಾರಿ ಅಧಿಕಾರಿಗಳು ೪೦ ಸೇರಿನ ಬಂಗಾಲಿ ಮಣಕ್ಕೆ ೬ ರೂಪಾಯಿಯಂತೆ ಬೆಳೆದವನಿಗೆ ಹಣ ಕೊಟ್ಟು ಒತ್ತಾಯದ ಧಾನ್ಯ ವಸೂಲಿ ಕಾಯದೆಯಂತೆ ಒಯ್ದ ಜೋಳ. ಈ ರೀತಿ ಒತ್ತಾಯದಿಂದ ಎಲ್ಲ ಜೋಳ ಒಯ್ದ ಬಳಿಕ ಈಗ ಅದೇ ಒಕ್ಕಲಿಗ ಉಪವಾಸ ಸಾಯಲಾರದೆ ಕೆಲ ತಿಂಗಳುಗಳಿಂದ ಅದೇ ಜೋಳವನ್ನು ೧೦ ರೂಪಾಯಿಗೆ ಮಣದಂತೆ ಕೊಳ್ಳಬೇಕಾಗಿದೆ. ಇದು 'ಬ' ನಮೂನೆಯ ಜೋಳ. ಇದೆಲ್ಲ ನಿಜವಿದ್ದರೆ, ಅಯೋಗ್ಯತೆ, ಅದೂರದರ್ಶಿತ್ವ, ಬಡವರ ಅವಶ್ಯಕತೆ ಮತ್ತು ಕಲ್ಯಾಣದ ಬಗ್ಗೆ ಅಧಿಕಾರಿಗಳು ತೋರಿಸ್ಸುತಿರುವ ಅತ್ಯಂತ ಉದಾಸೀನತೆಯ ಪ್ರತ್ಯಕ್ಷ ಉದಾಹರಣೆ ಇದಲ್ಲದೆ ಬೇರೆ ಯಾವುದು ಬೇಕು? ಯಾವದೊಂದು ಭಾಗದಿಂದ ಕಾಳನ್ನು ಹೊರಗೆ ಕಳಿಸುವಾಗ ಆ ಭಾಗಕ್ಕೆ ಎಷ್ಟು ಕಾಳು ಬೇಕಾಗಬಹುದೆಂಬುದನ್ನು ಚೆನ್ನಾಗಿ ಲೆಕ್ಕ ಹಾಕಿ ನೋಡುವದು ಅತ್ಯವಶ್ಯವಾಗಿದೆ.

೪) ಬಿಹಾರದ ಗೆಳೆಯರೊಬ್ಬರು ಗಾಂಧೀಜಿಯವರ ಲಕ್ಷ್ಯವನ್ನು ಕೆಳಗಿನ ವಿಷಯದತ್ತ ಎಳೆದಿದ್ದಾರೆ. 'ಮಾಹುರಾ' ಎಂಬುದು ಭಕ್ಷ್ಯ ಪದಾರ್ಥವಾಗಿದ್ದರೂ ಅದರ ಹೆಚ್ಚು ಉಪಯೋಗವನ್ನು ದೇಶೀ ಸರಾಯಿಗಾಗಿ ಮಾಡಲಾಗುತ್ತದೆ. ಸರಾಯಿಗಾಗಿ ಇದರ ಉಪಯೋಗ ಮಾಡುವದನ್ನು ಬಿಟ್ಟರೆ ಹಳ್ಳಿಗನ ಆಹಾರ ಪದಾರ್ಥವೆಂದು ಇದರ ಉಪಯೋಗವಾಗಬಹುದು ಅಲ್ಲದೆ ಬಹಳ ಮಟ್ಟಿಗೆ ಅವರ ಪರಿಶ್ರಮದ ಉಳಿತಾಯವೂ ಆಗುವದು. ಕೆಲ ಸಂದರ್ಭಗಳಲ್ಲಿ ಈ ಪರಿಶ್ರಮ ಅವರ ಗಳಿಕೆಯ ನೂರಕ್ಕೆ ೨೫ ರಷ್ಟು ಆಗುವದು. ಹೀಗಾದರೆ ಹೆಚ್ಚು ಹಾಲು ಪಲ್ಲೆ ಕಾಯಿ, ತತ್ತಿ ಮುಂತಾದವುಗಳನ್ನು ಕೊಳ್ಳಲು ಅವರಿಗೆ ಅವಕಾಶವುಂಟಾಗುವದು. ದನ-ಕರುಗಳಿಗೆ ಕೊಡಬೇಕಾದ ಧಾನ್ಯಗಳಿಗಾಗಿಯೂ ಇದನ್ನು ಉಪಯೋಗಿಸಬಹುದಾಗಿದೆ.

೫) ಧಾನ್ಯ ಪದಾರ್ಥಗಳಿಂದ ಮಾದಕ ಪದಾರ್ಥಗಳನ್ನು ಸಿದ್ಧಮಾಡುವದನ್ನು ಕೂಡಲೆ ನಿಲ್ಲಿಸತಕ್ಕದ್ದು.

೬) ಹಿಟ್ಟಿನಗಿರಣಿಗಳಿಗೆ ಅಕ್ಕಿ ಮತ್ತು ಗೋವಿನಜೋಳ ಕಳಿಸುವದನ್ನು ನಿಲ್ಲಿಸಬೇಕು ಇಲ್ಲವೆ ಸದ್ಯದ ಮಟ್ಟಿಗೆ ಕಡಮೆ ಮಾಡಬೇಕು.

೭). ಗೋದಿ ಬೆಳೆವ ಭಾಗದಲ್ಲಿ ಗೋದಿಯ ಉಮಿಗೆಯನ್ನೆ ದನಗಳಿಗೆ ಮೇವೆಂದು ಹಾಕಲಾಗುತ್ತದೆಂದು ಪಂಜಾಬದ ಗೆಳೆಯನೊಬ್ಬನ ಅಭಿಪ್ರಾಯ. ೨೦೦ ಮಣ ಈ ಉಮಿಗೆಯನ್ನು ಹಾಗೆಯೆ ಪಕ್ವವಾಗಗೊಟ್ಟರೆ ೫೦೦ ಮಣ ಗೋದಿಯಾಗುವದು. ಜನರಿಗೆ ಆಹಾರ ಪದಾರ್ಥಗಳ ಸೀದಾ ಮಾಡಿದಂತೆ ದನಗಳಿಗೂ ಸೀದಾ ಮಾಡಬೇಕು ಮತ್ತು ದನಗಳಿಗೆ ಹಸಿ ಮೇವು ಮುಂತಾದ್ದನ್ನು ಹಾಕಬೇಕು.

೮) ಫಲಾಹಾರದ ಅಂಗಡಿ ಮತ್ತು ಉಪಹಾರ ಗೃಹಗಳಲ್ಲಿ ಕೇಕು, ಬಿಸ್ಕೀಟು, ಪಾಸ್ಟ್ರಿ, ಆಕರ್ಷಕ ಬ್ರೆಡ್ಡು, ಮಿಠಾಯಿ ಮುಂತಾದವುಗಳನ್ನು ಸಿದ್ಧಪಡಿಸುವದರ ಸಂಬಂಧದಲ್ಲಿ ವಿಚಾರ ಮಾಡಿ ಅವನ್ನು ಕಡಮೆ ಮಾಡಬೇಕಾಗಿದೆ.

೯) ಸಂತೋಷಕೂಟಗಳನ್ನು ಮತ್ತು ಮೇಜವಾನಿಗಳನ್ನು ನಿಲ್ಲಿಸಲಿಕ್ಕೆ ಬೇಕು.

೧೦) ಶ್ರೀ ಪ್ಯಾರೆಲಾಲರು ಅಕ್ಕಿಯ ಬಗ್ಗೆ ಈಗಾಗಲೆ ಬರೆದಿದ್ದರೂ ಮತ್ತೆ ಅದನ್ನು ಪುನರುಚ್ಚರಿಸಬೇಕಾಗಿದೆ. ಗಿರಣಿ ಪ್ರದೇಶದಲ್ಲಿ ೩೦ ಸಾವಿರ ಮಣ ಅಕ್ಕಿನುಚ್ಚು ಬಿದ್ದದ್ದು ಕೆಡಹತ್ತಿದೆಂದು ದಿನಜಪುರದ ಸುದ್ದಿಗಾರನೊಬ್ಬನು ಬರೆಯುತ್ತಾನೆ. ಪೇಟೆಯಲ್ಲಿ ಅದು ಮಾರಲಿಕ್ಕಿಲ್ಲ ಆದರೆ ಅದನ್ನು ಅಲ್ಲಿಯೇ ಇಡದೆ ಜನರಿಗೆ ಕೊಟ್ಟರೆ ಉಪವಾಸ ಬಳಲುವ ಸಾವಿರಾರು ಜನರ ಹೊಟ್ಟೆ ತುಂಬುವದು. ಬಂಗಾಲದಲ್ಲಿ ಎಷ್ಟು ಅಕ್ಕಿ ಬೆಳೆಯುತ್ತದೆ, ಸರಕಾರದವರು ಗಿರಣಿಗಳಿಂದ ಎಷ್ಟು ಭತ್ತ ಕೊಂಡರು ಅದರ ಉಪಯೋಗವೇನಾಯಿತು, ಪ್ರಾಂತದಲ್ಲೆಲ್ಲ ಅಕ್ಕಿನುಚ್ಚು ಎಷ್ಟು ಬಿದ್ದಿದೆ, ಆಹಾರ ಹಂಚಿಕೆಗಾಗಿ ನೇಮಿಸಲ್ಪಟ್ಟ ವಿಶಿಷ್ಟ ಸಮಿತಿಗಳ ಕಡೆಗೆ ಇದನ್ನು ಕೊಡಲು ಸರಕಾರದವರು ಸಿದ್ಧರಿರುವರೊ ಮುಂತಾದ್ದರ ಬಗ್ಗೆ ವಿಚಾರಣೆಯಾಗಬೇಕೆಂದು ಈ ಲೇಖಕನು ಸೂಚಿಸುತ್ತಾನೆ.

೧೧) ನಗರಗಳಿಗೆ ಆಹಾರ ಪದಾರ್ಥಗಳ ಸೀದಾ ಮುಟ್ಟುವಂತೆ ಪ್ರಯತ್ನಿಸಲಾಗುತಿದ್ದರೂ ಗ್ರಾಮಾಂತರಗಳಿಗೆ ಈ ಬಗೆಯ ಆಶ್ವಾಸನ ಕೊಡಲಾಗಿಲ್ಲೆಂಬ ಬಗ್ಗೆ ಪ್ರೊ. ರಂಗಾ ಇವರು ವಿವೇಚನೆಗೊಳಗಾಗಿದ್ದಾರೆ. ಅವರು ಈ ರೀತಿಯಾಗಿ ಸೂಚನೆ ಮಾಡುತ್ತಾರೆ.

ಅ) ಆಹಾರ ಪದಾರ್ಥಗಳಿಗಾಗಿ ಒಕ್ಕಲಿಗರಿಗೆ ಸಾಕಷ್ಟು ಹಣ ಕೊಟ್ಟು ವ್ಯಾಪಾರಿ ಬೆಳೆಯನ್ನು ಬೆಳೆಯದಂತೆ ಅವರ ಮನವಲಿಸಬೇಕು. ಒಕ್ಕಲಿಗನಿಗೆ ಬಟ್ಟೆ ಚಿಮಣಿ ಎಣ್ಣೆ, ಉರುವಲು ಮತ್ತು ಉಳಿದ ಎಣ್ಣೆಗಳು ಸಿಕ್ಕುವುದಿಲ್ಲ. ನಡುವಿನ ದಲ್ಲಾಳಿಗಳ ಹಾವಳಿ ತಪ್ಪಿ ಒಕ್ಕಲಿಗರಿಗೆ ಆಹಾರ ಪದಾರ್ಥಗಳಿಗಾಗಿ ಸಾಕಷ್ಟು ಹಣ ಸಿಕ್ಕಬೇಕು ಅಂದರೆ ಸಂಕಷ್ಟ ಪರಿಹಾರವಾಗುವದು. ಅವನಿಗೆ ಬೇಕಾದ ಪದಾರ್ಥಗಳು ಸೀದಾ ಪದ್ಧತಿಯಿಂದ ಮತ್ತು ಅವರು ಬೆಳೆದ ಒಕ್ಕಲತನ ಪದಾರ್ಥಗಳಿಗೆ ವಿನಿಮಯವೆಂದು ಸಿಕ್ಕುವಂತೆ ವ್ಯವಸ್ಥೆಯಾಗಬೇಕು. ಈ ವಿನಿಮಯ ಯೋಜನೆಯನ್ನು ಗೊತ್ತುಪಡಿಸಬಹುದು.

ಬ) ಒಕ್ಕಲಿಗನಿಗೆ ಅವಶ್ಯಕ ಒಕ್ಕಲನತ ಉಪಕರಣಗಳು ಯೋಗ್ಯ ಬೆಲೆಗೆ ಸಾಕಷ್ಟು ಪೂರಯಿಸಲ್ಪಡಬೇಕು.

ಕ) ಹೆಚ್ಚು ಆಹಾರ ಪದಾರ್ಥಗಳನ್ನು ಬೆಳೆಸುವದು ಮತ್ತು ಕಡಮೆ ಪದಾರ್ಥಗಳಲ್ಲಿ ತಮ್ಮ ಸಂಸಾರ ಸಾಗಿಸುವದು ಇವುಗಳಲ್ಲಿ ಸ್ಪರ್ಧೆ ನಡೆಸಬೇಕು. ಮನೆತನಗಳಲ್ಲಿ ಒಕ್ಕಲಿಗರಲ್ಲಿ ಮತ್ತು ಹಳ್ಳಿಗಳಲ್ಲಿ ಒಂದು ಬಗೆಯ ಸ್ಪರ್ಧೆ ನಡೆಯಬೇಕು. ಹೆಚ್ಚು ಬೆಳೆ ಬೆಳೆವವರಿಗೆ ಹೆಚ್ಚು ಕೊಡಬೇಕು ಮತ್ತು ಉಳಿದ ಅವಶ್ಯಕ ಪದಾರ್ಥಗಳನ್ನು ಅವರಿಗೆ ಹೆಚ್ಚಾಗಿ ಕೊಡಬೇಕು.

ಡ) ಹೊಲ ಇಲ್ಲದಒಕ್ಕಲಿಗರಿಗೆ ಬೀಳು ಭೂಮಿಗಳನ್ನು ಕೊಟ್ಟು ಆಹಾರ ಪದಾರ್ಥಗಳನ್ನೆ ಬೆಳೆವಂತೆ ಅವರನ್ನು ಒತ್ತಾಯಪಡಿಸಬೇಕು ಅಂಥವರ ಸಹಕಾರ ಸಂಘಗಳಿಗೂ ಇದೇ ಬಗೆಯ ಕರಾರಿನಿಂದ ಹೊಲಗಳನ್ನು ಕೊಡಬಹುದು.

ಈ) ಆಹಾರ ಪದಾರ್ಥಗಳನ್ನು ಬೆಳೆಯುವವರು ಇಡೀ ವರ್ಷಕ್ಕೆ ತಮಗೆ ಸಾಲುವಷ್ಟು ಆಹಾರ ಪದಾರ್ಥಗಳನ್ನು ಮಾತ್ರ ಇಟ್ಟುಕೊಳ್ಳುವಂತೆ ಒತ್ತಾಯಪಡಿಸಬೇಕು. ಉಳಿದದ್ದನ್ನು ಗ್ರಾಮ ಪಂಚಾಯತಿಗಳ ಕಡೆಗೆ ಒಪ್ಪಿಸಬೇಕು. ಆಹಾರ ಪದಾರ್ಥಗಳನ್ನು ಬೆಳೆಯದವರಿಗೆ, ಭೂಮಿಗಳಿಲ್ಲದವರಿಗೆ ಪಂಚಾಯಿತಿಯವರು ಯೋಗ್ಯ ರೀತಿಯಿಂದ ಅದನ್ನು ಹಂಚಿ ಕೊಡಬೇಕು.

ಫ) ಉಳಿದ ಆಹಾರ ಪದಾರ್ಥಗಳನ್ನು ಉಳಿದೆಡೆಗೆ ಹಂಚಿ ಕೊಡಲು ಜಿಲ್ಹಾಧಿಕಾರಿಗಳ ಕಡೆಗೊಪ್ಪಿಸಬೇಕು. ಯೋಗ್ಯ ರೀತಿಯಿಂದ ಆಹಾರ ಪದಾರ್ಥಗಳ ಹಂಚಿಕೆಯಾಗುವಂತೆ ನೋಡಿಕೊಳ್ಳಲು ಧಾನ್ಯ ಎತ್ತುವ ಹಂಚುವ ಸೀದಾಧಿಕಾರಿ ಇರತಕ್ಕದ್ದು.

ಗ) ಮದುವೆಗಳನ್ನು ಮತ್ತು ಉಳಿದ ಉತ್ಸವಗಳನ್ನು ಮುಂದಕ್ಕೆ ಹಾಕಲಿಕ್ಕೆ ಹಳ್ಳಿಗರ ಮನವಲಿಸಬೇಕು. ಅನಿವಾರ್ಯವೆಂದು ಇವನ್ನು ಮಾಡಿದ್ದೇ ಆದರೆ ಬಹಳ ಕಡಿಮೆ ಆಹಾರ ಪದಾರ್ಥಗಳಲ್ಲಿ ಇವನ್ನು ಮುಗಿಸಿ ಬಿಡಬೇಕು.

ಹ) ಕಲಾಕುಶಲಗಾರರಿಗೆ ಮತ್ತು ಇತರರಿಗೆ ಕಡಮೆ ಹಣದಲ್ಲಿ ಭೋಜನ ಕೇಂದ್ರಗಳನ್ನು ಏರ್ಪಡಿಸಿದ್ದಾದರೆ ಆಹಾರ ಪದಾರ್ಥಗಳ ನಾಶ ಕಡಮೆಯಾಗುವದು.

ಆಯ) ೫೦ ಹಳ್ಳಿಗಳಿಗೊಂದರಂತೆ ಇಲ್ಲವೆ ಪ್ರತಿಯೊಂದು ತಾಲೂಕಿಗೊಂದರಂತೆ ಧಾನ್ಯ ಸಂಗ್ರಹಾಲಯಗಳನ್ನು ಕಟ್ಟಿಸಬೇಕು, ಅಂದರೆ ಆಕಸ್ಮಾತ್ ಎಲ್ಲಿಯಾದರೂ ಆ ಭಾಗದಲ್ಲಿ ಆಹಾರ ಪದಾರ್ಥಗಳ ಕೊರತೆಯುಂಟಾದರೆ ಈ ಸಂಗ್ರಹಾಲಯದಿಂದ ಸಾಕಷ್ಟು ಆಹಾರ ಪದಾರ್ಥಗಳ ಪೂರಯಿಕೆ ಮಾಡಲು ಅನುಕೂಲವಾಗುವದು.

ಜೆ) ಪ್ರತಿಯೊಂದು ತಾಲೂಕ ಮತ್ತು ಹಳ್ಳಿ ಪಂಚಾಯತಿಯ ಕಡೆಗೆ ಕಬ್ಬಿಣವನ್ನು ಇಡಬೇಕು. ಬಂಡಿಯ ಹಳ ಮತ್ತು ಇತರ ಪದಾರ್ಥಗಳಿಗಾಗಿ ಬೇಕಾಗುವ ಕಬ್ಬಿಣವನ್ನು ಮೊದಲು ಕೊಡುವ ಏರ್ಪಾಡಾಗಬೇಕು. ಇಂಥ ಬಂಡಿಗಳ ಸಹಾಯದಿಂದ ಧಾನ್ಯಸಂಗ್ರಹ, ವಿನಿಯೋಗ ಕಾರ್ಯವನ್ನು ಮಾಡಲು ಹಗುರಾಗುವದು.

ಕೆ) ಅವಶ್ಯವೆನಿಸಿದಲ್ಲೆಲ್ಲ ಸೈನಿಕಖಾತೆಯ ಮೋಟರಗಳನ್ನು ತರಬೇಕು. ರೇಲ್ವೆ ಅಧಿಕಾರಿಗಳು ಕೂಡ ಆಹಾರಪದಾರ್ಥಗಳನ್ನು ಬೇರೆ ಬೇರೆ ಕಡೆ ಸಾಗಿಸುವದಕ್ಕಾಗಿ ಸ್ಪೆಶಲ್ ಗಾಡಿಗಳನ್ನು ಬಿಡಲು ಸಿದ್ಧರಿರಲಿಕ್ಕೆ ಬೇಕು.

ಎಲ್) ನಗರವಾಸಿಗಳಿಗಿಂತ ಹಳ್ಳಿಗರಿಗೆ ಆಹಾರ ಪದಾರ್ಥಗಳಲ್ಲಿ ಹೆಚ್ಚು ಔದಾರ್ಯ ತೋರಿಸಲಿಕ್ಕೆ ಬೇಕು.

ಎಂ) ನೀರಿನ ದುರುಪಯೋಗವನ್ನು ನಿಲ್ಲಿಸಬೇಕು ಮತ್ತು ಅವಶ್ಯವಿದ್ದಲ್ಲೆಲ್ಲ ಬಾವಿಗಳನ್ನು ತೋಡಿಸಬೇಕು. ಈಗಿದ್ದ ಕೆರೆಬಾವಿಗಳ ದುರಸ್ತಿ ಮಾಡುವದು ಸರಕಾರದ ಕರ್ತವ್ಯವಾಗಿದೆ.

ಎನ್) ಅರಣ್ಯದ ಮತ್ತು ಉಳಿದ ಹಸರಿಲೆಯ ಗೊಬ್ಬರವನ್ನು ಕಲೆ ಹಾಕಿ ಚೆನ್ನಾಗಿಟ್ಟು ಅವಶ್ಯವಿದ್ದ ಕಡೆಗೆಲ್ಲ ಕಳಿಸಬೇಕು. ಇಂಥ ಗೊಬ್ಬರದ ಸಾರಿಗೆ ದರವನ್ನು ಕಡಮೆ ಮಾಡಬೇಕು. ಒಕ್ಕಲಿಗರಿಗೆ ಗೊಬ್ಬರವನ್ನು ಪೂರೈಸುವದು ಮಹತ್ವದ್ದಾಗಿದೆ. ಆದುದರಿಂದ ಅದನ್ನು ಸರಿಯಾಗಿ ಹಂಚಿ ಕೊಡುವದಕ್ಕಾಗಿ ಪಂಚಾಯತಿಯವರ ಕಡೆಗೆ ಇಲ್ಲವೆ ಒಕ್ಕಲಿಗರ ಸಂಘದವರ ಕಡೆಗೆ ಕಳಿಸಿ ಕೊಡಬೇಕು.

ಓ) ಮೂರು ನಾಲ್ಕು ಬೆಳೆ ತೆಗೆದುಕೊಳ್ಳುವಂಥ ಗಡ್ಡೆಗೆಣಸು ಮೂಲಿಕೆಗಳನ್ನು ಬೆಳೆಸಲು ಪ್ರೋತ್ಸಾಹನೆ ಕೊಡಬೇಕು.

ಪಿ) ಭತ್ತವನ್ನು ಕೈಯಿಂದ ಕುಟ್ಟಿಸಬೇಕು. ಹೀಗೆ ಮಾಡಿದರೆ ಕನಿಷ್ಠ ನೂರಕ್ಕೆ ಹತ್ತರಷ್ಟಾದರೂ ಹೆಚ್ಚು ಅಕ್ಕಿ ಸಿಕ್ಕುವದು.

ಓದಿ ಮಾಡೋಣವೇನು ?

ಒಬ್ಬ ವಿದ್ಯಾರ್ಥಿ ಬಹಳ ಗಾಂಭೀರ್ಯದಿಂದ ಕೇಳುತ್ತಾನೆ: "ಓದು ಮುಗಿಸಿದ ಮೇಲೆ ನಾನು ಏನು ಮಾಡಲಿ?"

ಉತ್ತರ: ನಾವಿಂದು ದಾಸರಾಗಿದ್ದೇವೆ. ನಮ್ಮನ್ನು ದಾಸ್ಯದಲ್ಲಿಟ್ಟವರ ಲಾಭದ ದೃಷ್ಟಿಯಿಂದಲೇ ನಮ್ಮ ವಿದ್ಯಾಭ್ಯಾಸದ ಕ್ರಮವನ್ನು ಸಿದ್ಧಗೊಳಿಸಲಾಗಿದೆ. ಆಸೆ ತೋರಿಸದೆ ತಮ್ಮ ಕೆಲಸ ಸಾಧಿಸಿಕೊಳ್ಳುವದು ಜಗತ್ತಿನಲ್ಲಿ ಎಲ್ಲಿಯೂ ಸಾಧ್ಯವಿಲ್ಲ. ಆದುದರಿಂದ ನಮ್ಮ ಸುಲಿಗೆಗಾರರು ಇಂದಿನ ಶಿಕ್ಷಣದ ಬಗೆಗೆ ಬಹಳ ಪ್ರಲೋಭನಗಳನ್ನು ಸೃಷ್ಟಿಸಿಟ್ಟಿದ್ದಾರೆ. ಇದಲ್ಲದೆ ರಾಜತಂತ್ರದ ಎಲ್ಲ ಜನರು ಒಂದೇ ಬಗೆಯಾಗಿರುವದಿಲ್ಲ. ಅವರಲ್ಲಿ ಕೆಲವರು ಸದ್ವೃತ್ತಿಯವರೂ ಇದ್ದು ಔದಾರ್ಯದಿಂದ ವಿಚಾರ ಮಾಡುವವರೂ ಇದ್ದಾರೆ. ಇಂದಿನ ಸರಕಾರೀ ಶಿಕ್ಷಣದಲ್ಲಿಯೂ ಕೆಲ ಒಳ್ಳೆಗಳಿಲ್ಲದೆ ಇಲ್ಲ ಆದರೆ ಒಟ್ಟಿನ ಮೇಲೆ ನಾನು ಬಯಸಲಿ ಬಯಸದಿರಲಿ ಅದರ ಉಪಯೋಗವನ್ನು ಅನಿಷ್ಟ ರೀತಿಯಲ್ಲೆ ಮಾಡಲಾಗುತ್ತಿದೆಯೆಂಬಲ್ಲಿ ಸಂಶಯವಿಲ್ಲ. ಪರಮಾವಧಿ ಧನಸಂಚಯ ಮಾಡಲಿಕ್ಕೂ ಪರಮಾವಧಿ ಉಚ್ಚ ಪದವನ್ನು ಸಂಪಾದಿಸಲಿಕ್ಕೂ ಇದೊಂದು ಸಾಧನವೆಂದು ಜನರು ಬಗೆಯುತಿದ್ದಾರೆ. ಧನ-ಅಧಿಕಾರಗಳ ಲಾಲಸೆಯಲ್ಲಿ ದಾಸ್ಯವೂ ಪ್ರಿಯವೆನಿಸತೊಡಗುವದು.

ಈ ವಾತಾವರಣದಿಂದ ಪಾರಾಗಬೇಕಾದರೆ ನಾವು "ಸಾವಿದ್ಯಾ ಯಾ ವಿಮುಕ್ತಯೇ"- ಅಥವಾ ಮುಕ್ತಿಪ್ರದವಾದ ವಿದ್ಯೆಯೇ ವಿದ್ಯೆ— ಎಂಬ ಪ್ರಾಚೀನ ಮಂತ್ರವನ್ನು ಮೈಗೂಡಿಸಿಕೊಳ್ಳಬೇಕು. ವಿದ್ಯೆಯೆಂದರೆ ಆಧ್ಯಾತ್ಮಿಕ ಜ್ಞಾನ, ಮುಕ್ತಿಯೆಂದರೆ ಬಿಡುಗಡೆಯೆಂದಿಷ್ಟೇ ತಿಳಿದುಕೊಳ್ಳತಕ್ಕದ್ದಲ್ಲ. ವಿದ್ಯೆಯೆಂದರೆ ಲೋಕೋಪಯೋಗಿಯಾದ ಎಲ್ಲ ಜ್ಞಾನವನ್ನು ಸಂಪಾದಿಸುವದು ಮತ್ತು ಮುಕ್ತಿಯೆಂದರೆ ಇಹಜೀವನದ ಎಲ್ಲಬಗೆಯ ದಾಸ್ಯಗಳಿಂದ ವಿಮೋಚನೆಹೊಂದುವದು. ದಾಸ್ಯವೆಂದರೆ ಬೇರೆ ಯಾರಾದರೊಬ್ಬರ ಅಧೀನವಾಗಿರುವದು ಇಲ್ಲವೆ ತಾನೇ ನಿರ್ಮಿಸಿಕೊಂಡ ಕೃತ್ರಿಮ ಬಂಧನಗಳ ದಾಸ್ಯ. ಇಂಥ ಮುಕ್ತಿ ಯಾವುದರಿಂದ ದೊರಕುವದೋ ಅದೇ ನಿಜವಾದ ಶಿಕ್ಷಣ. ಶಿಕ್ಷಣ ದೊರೆತರೆ "ಓದಿ ಮಾಡೋಣೇನು" ಎಂಬ ಪ್ರಶ್ನೆ ಏಳುವದೇ ಸಾಧ್ಯವಿಲ್ಲ.

ವಿದೇಶೀ ಸರಕಾರದವರು ನಿರ್ಮಿಸಿದ ಶಿಕ್ಷಣ ಪದ್ಧತಿ ಅವರ ಸ್ವಾರ್ಥಸಾಧನೆಗಾಗಿಯೆ ಮಾಡಲ್ಪಟ್ಟಿದೆ. ಇದನ್ನರಿತೇ ೧೯೨೦ ರಲ್ಲಿ ಕಾಂಗ್ರೆಸ್ಸು ಸರಕಾರೀ ಶಿಕ್ಷಣಗೃಹಗಳನ್ನು ಬಹಿಷ್ಕರಿಸಲು ನಿರ್ಣಯಿಸಿತು. ಆ ಯುಗ ಹಳೆಯದಾಗಿ ಹೋಯಿತು. ಸರಕಾರೀ ಸಾಲೆ ಕಾಲೇಜುಗಳು ಮತ್ತು ಸರಕಾರೀ ಶಿಕ್ಷಣ ಪದ್ಧತಿಯನ್ನನುಸರಿಸಿ ಪಾಠಹೇಳುವ ಸಂಸ್ಥೆಗಳ ಸಂಖ್ಯೆ ದಿನದಿನವೂ ಬೆಳೆಯುತ್ತಿದ್ದರೂ ವಿದ್ಯಾರ್ಥಿಗಳ ಬೇಡಿಕೆಗೆ ಸಾಲುವದಿಲ್ಲ. ಪರೀಕ್ಷೆಗೆ ಕೂಡುವವರ ಸಂಖ್ಯೆಯೂ ಬಹಳ ಬೆಳೆದಿದೆ. ಇಷ್ಟೆಲ್ಲ ಇದ್ದರೂ ನಾನೆನ್ನುವೆ— ನಿಜವಾದ ಶಿಕ್ಷಣವೆಂದರೆ ನಾನು ಬಣ್ಣಿಸಿದ್ದೇ, ಎಂದು.

ಈ ಮಂತ್ರದ ಮೇಲಿನ ಅರ್ಥದ ಸೆಳವಿಗೆ ಬಿದ್ದು ತಮ್ಮ ಸದ್ಯದ ಓದನ್ನು ಬಿಟ್ಟುಬಿಟ್ಟ ವಿದ್ಯಾರ್ಥಿಗಳು ಮುಂದೆ ಪಶ್ಚಾತ್ತಾಪ ಪಡುವ ಸಂಭವವಿದೆ. ಇದಕ್ಕಾಗಿ ನಾನು ವಿದ್ಯಾರ್ಥಿಗಳಿಗೆ ಒಂದು ಸುಗಮ ಉಪಾಯ ಸೂಚಿಸಿದ್ದೇನೆ. ಸಾಲೆಯಲ್ಲಿ ಕಲಿಯುತ್ತಿರುವಾಗಲೂ ದೊರೆಯುತ್ತಿರುವ ಶಿಕ್ಷಣವನ್ನು ಸೇವೆಯ ಸಲುವಾಗಿಯೇ ಪಡೆದು ಸೇವೆಗಾಗಿಯೇ ಅದನ್ನು ವಿನಿಯೋಗಿಸಿರಿ- ಹಣ ಕೂಡ ಹಾಕುವದಕ್ಕಾಗಿ ಅಲ್ಲ. ಸದ್ಯದ ಶಿಕ್ಷಣ ಪದ್ಧತಿಯಲ್ಲಿರುವ ಕೊರತೆಗಳನ್ನು ಸಾಲೆಯ ಹೊರಗೆ ಜ್ಞಾನ ಸಂಪಾದನೆಯಿಂದ ತುಂಬಿಕೊಳ್ಳಿರಿ ಹೀಗೆ ನಿಮ್ಮ ವಿದ್ಯಾರ್ಥಿ ಜೀವನದಲ್ಲಿ ಮಾಡಲು ಸಾಧ್ಯವಿರುವ ರಚನಾತ್ಮಕ ಕಾರ್ಯಗಳನ್ನು ಮಾಡಿರಿ.

ಪುಣೆ ೧-೩-೪೬ ಮೋ. ಕ. ಗಾಂಧಿ

(ಗುಜರಾತಿಯಿಂದ)

ಕ್ಯೂ) ಪ್ರಾಂತಿಕ ಮತ್ತು ಜಿಲ್ಹಾಧಿಕಾರಿಗಳು ಧಾನ್ಯ ಮತ್ತು ಬೇಳೆಕಾಳುಗಳನ್ನು ಶಾಸ್ತ್ರೀಯ ದೃಷ್ಟಿಯಿಂದ ಬೆಳೆಯಿಸಲು ಅವಕಾಶ ಕಲ್ಪಿಸಿಕೊಟ್ಟದ್ದಾದರೆ ಅದರಲ್ಲಿ ಪೌಷ್ಟಿಕತೆಯ ಪ್ರಮಾಣವು

(೧೧ನೇ ಪುಟ ನೋಡಿರಿ)

ಹಿಂಸೆಯ ಫಲ

" ಇಗೋ, ಇಟಲಿ ಕಡೆ ನೋಡಿರಿ " ಹೀಗೆಂದು ಗಾಂಧೀಜಿಯವರು ಯಾವ ಮಾರ್ಗದಿಂದಾದರೂ ಸರಿ, ಸ್ವಾತಂತ್ರ್ಯ ದೊರಕಿಸಬೇಕೆಂದಿದ್ದ ಓರ್ವ ಮಿತ್ರನನ್ನುದ್ದೇಶಿಸಿ ಮಾತಾಡಿದರು:

" ಗ್ಯಾರಿಬಾಲ್ಡಿ ಪ್ರಸಿದ್ಧ ಪುರುಷ. ಆತನು ಇಟಲಿಯನ್ನು ದಾಸ್ಯ ಜೀವನದಿಂದ ಮುಕ್ತ ಮಾಡಿದ. ಮುಸೊಲಿನಿ ಅದಕ್ಕೆ ರಾವುಗನ್ನಡಿ ಹಿಡಿದು ದೊಡ್ಡದಾಗಿ ಕಾಣುವಂತೆ ಮಾಡಿದ. ಆದರೆ ಇಂದು ಆ ದೇಶದ ಪರಿಸ್ಥಿತಿ ಏನು ? ಅದರಂತೆ ಜಪಾನ ನೋಡಿರಿ, ಜರ್ಮನಿ ನೋಡಿರಿ. ಉತ್ತುಂಗ ಶಿಖರಕ್ಕೇರಿಸಿದ ಪಾಶವೀ ಶಕ್ತಿಯೇ ಕೊನೆಗೆ ಅವುಗಳನ್ನು ನೆಲಕ್ಕೆ ಕುಪ್ಪಳಿಸಿತು. ಹಿಂಸೆ, ಹಿರಿದೆನಿಸಿದರೂ ಅದು ನಿರರ್ಥಕವೆಂದು ಅಣುಬಾಂಬು ಸಿದ್ಧ ಮಾಡಿಲ್ಲವೇ? ಆದಾಗ್ಯೂ ಕೆಲವರ ತಲೆಬುರುಡೆಗಳನ್ನು ಒಡೆದು ಮತ್ತು ನಮ್ಮದೇ ಎನಿಸಿದ ಆಸ್ತಿಯನ್ನು ಧ್ವಂಸಪಡಿಸಿ ಸ್ವಾತಂತ್ರ್ಯ ಸಂಪಾದಿಸಬಹುದೆಂಬ ಆಶೆ ನಮ್ಮಲ್ಲಿದೆ. "

ಇಂಥ ಘಟನೆಗಳಿಂದ ಮಹಾತ್ಮರಿಗೆ ಅನಿರ್ವಚನೀಯ ಕ್ಲೇಶವಾಗಿರುವದು. ಆದರೂ ಅವರು ಮಣಿಯದ ಆಶಾವಾದಿ. " ಹಿಂಸೆಯ ಈ ಉನ್ಮತ್ತ ತಾಂಡವದಿಂದ ಜನರು ಅಹಿಂಸೆಯ ಪಾಠ ಕಲಿಯುವರೆಂದು ನನಗೆ ವಿಶ್ವಾಸವಿದೆ " ಎಂದವರು ನುಡಿದರು. ಸುತ್ತಲೂ ಸಂಭವಿಸುತ್ತಿರುವ ಘಟನೆಗಳ ಪರಿಣಾಮವಾಗಿ ಅವರ ಒಡಲು ದುಃಖ ದುಮ್ಮಾನಗಳಿಂದ ತುಂಬಿ ಒಡೆಯುವಂತಾಗಿದ್ದರೂ ಸತ್ಯ ಮತ್ತು ಅಹಿಂಸೆಗಳಲ್ಲಿರುವ ಅವರ ಅಚಲ ವಿಶ್ವಾಸ ಅವರನ್ನು ಎತ್ತಿ ಹಿಡಿಯುತ್ತಿದೆ.

ಕಠೋರ ಸತ್ಯ

ಬಾಜಾ, ಬೇಂಡು, ಧ್ವಜಗಳ ವೈಭವದ ಪ್ರದರ್ಶನ ಮೊದಲಾದವು ಯುದ್ಧದ ನಿಜವಾದ ದುಃಖವನ್ನು ಮರೆಮಾಡುತ್ತವೆ. ನಮ್ಮ ದೇಶಪ್ರೇಮವು ಮುಂಬಯಿಯಲ್ಲಿ ನಡೆದ ಘಟನೆಗಳ ಕಠೋರ ಸತ್ಯವನ್ನು ಮರೆಮಾಜದಿರಲಿ. ಆ ನಗರದ ಒಂದು ಭಾಗದಲ್ಲಿ ಫೆಬ್ರುವರಿ ೨೨ ನೇ ದಿನ ನಡೆದ ಸಂಗತಿಯನ್ನು ಓರ್ವ ಪ್ರತ್ಯಕ್ಷದರ್ಶಿ ಕೆಳಗಿನಂತೆ ವಿವರಿಸಿರುತ್ತಾರೆ:—

" ಮುಂಬಯಿ ನಗರವು ಇಂದು ಮೃತ್ಯುದೇವಿಯ ನೃತ್ಯಾಂಗಣವಾಗಿದೆ. ನಾನು ನಮ್ಮ ಅಸ್ಪತ್ರೆಯಿಂದ ಈಗ ಮರಳಿ ಬಂದಿದ್ದೇನೆ. ಇಂಥ ರಕ್ತಪಾತ ಮತ್ತು ರಾಕ್ಷಸೀಕೃತಿಯನ್ನು ಹಿಂದೆಂದೂ ನಾನು ನೋಡಿರಲಿಲ್ಲ. 'ರಕ್ತದ ಹೊಳೆ' ಗಳ ಕತೆಯನ್ನು ಕಾದಂಬರಿಗಳಲ್ಲಿ ಓದುತಿದ್ದೆವು. ಆದರೆ ಈಗ ಪ್ರತ್ಯಕ್ಷ ನೋಡಿದಂತಾಯಿತು. ಹಿಂದೂ ಜನರ ಮತ್ತು ಮುಸಲ್ಮಾನ, ಸ್ತ್ರೀಯರ ಮತ್ತು ಪುರುಷರ ಹಾಗೂ ಮುದುಕರ ಮತ್ತು ಎರಡು ವರ್ಷದವರೆಗಿನ ಬಾಲಕರ ಮೃತಪಟ್ಟ ಹಾಗೂ ಗಾಯಗೊಂಡ ದೇಹಗಳು ನಮ್ಮ ಅಸ್ಪತ್ರೆಯಲ್ಲಿ ಚಲ್ಲಾಪಿಲ್ಲಿಯಾಗಿ ಬಿದ್ದಿವೆ. ನಮ್ಮ ಹಾಸ್ಟೇಲದಲ್ಲಿರುವ ಪ್ರತಿಯೊಬ್ಬ ವಿದ್ಯಾರ್ಥಿ ಮತ್ತು ದಾದಿಯರ ಮೇಲೆ ಮೈತುಂಬ ಕೆಲಸ ಬಿದ್ದಿದೆ. ಅನೇಕಾನೇಕ ನಿರಪರಾಧಿಗಳ ಪ್ರಾಣಹರಣ ಮಾಡುವ ಅವಿವೇಕತನದ ಈ ಹತ್ಯಾಕಾಂಡವನ್ನು ನಿಲ್ಲಿಸುವದಕ್ಕೆ ಯಾವ ಉಪಾಯವೂ ಇಲ್ಲವೆ? ಅನೇಕರ ಕರಳುಗಳು ಹೊರಬಿದ್ದಿರುತ್ತವೆ; ಉಳಿದವರಿಗೆ ಎದೆಯಲ್ಲಿ ಗುಂಡು ನೆಟ್ಟಿವೆ. ಕೆಲವು ಪ್ರಸಂಗಗಳಲ್ಲಿ ಕೈಕಾಲು ಕತ್ತರಿಸುವದು ಅನಿವಾರ್ಯವಾಯಿತು. ಇನ್ನೂ ಕೆಲವರ ಮೇಲೆ ಇಂಥ ಶಸ್ತ್ರಕ್ರಿಯೆ ಅವಶ್ಯವಿರುವದು. ಆ ದೃಶ್ಯ ನಡುಕ ಹುಟ್ಟಿಸದಿರದು. ಈಗ ರಾತ್ರಿ ೯ ಗಂಟೆ. ಪರಿಸ್ಥಿತಿ ಸ್ವಲ್ಪ ಶಾಂತವಾಗಿರುವದು. ಸಾಯಂಕಾಲ ೬ ಗಂಟೆಯ ಸುಮಾರಿಗೆ ನಮ್ಮ ಕಾಲೇಜದ ಎದುರಿನಲ್ಲಿಯೇ ಗೋಳೀಬಾರ ನಡೆಯಿತು. ನಮ್ಮ ಅಸ್ಪತ್ರೆಯ ಗಂಡು-ದಾದಿಯೊಬ್ಬನಿಗೆ ಗಾಯವಾಗಿದೆ. ಬ್ರಿಟಿಶ ಸೈನಿಕರು ಓಡುತ್ತಿರುವ ಲಾರಿಗಳೊಳಗಿಂದ ಮನಬಂದಂತೆ ಗುಂಡು ಹೊಡೆಯುತ್ತಿದ್ದಾರೆ.

ಶಸ್ತ್ರಚಿಕಿತ್ಸೆಯಲ್ಲಿ ನಾನು ಸಹಾಯ ಮಾಡುತಿದ್ದೆ. ರಕ್ತ ಮತ್ತು ಮೃತ ಶರೀರಗಳ ದುರ್ವಾಸನೆಯಿಂದ ನನಗೆ ತಲೆ ತಿರುಗಿ ಬೀಳುವಂತಾಯಿತು ಜನಜಂಗುಳಿಯ ಕತೆಗಳನ್ನು ಆಗಾಗ ಕೇಳುತ್ತೇವೆ. ಆದರೆ ನಿಜವಾದ ಪುಂಡರು ಯಾರ ಕೈಗೂ ಸಿಕ್ಕದಂತೆ ಪಾರಾಗುವರು . . . . .

ನಾನು ಪುನಃ ಅಸ್ಪತ್ರೆಗೆ ಹೋಗಿ ತಿರುಗಿ ಬಂದಿರುವೆನು. ಸತ್ತವರ ಸಂಖ್ಯೆ ೫೬ಕ್ಕೆ ಏರಿದೆ. ಇನ್ನೂ ಹಲವರ ಪರಿಸ್ಥಿತಿ ಚಿಂತಾಜನಕವಿರುವದು.

ಉಚಿತ ಮಾರ್ಗ

ಗಾಂಧೀಜಿಯವರ ಸಲಹೆ ಕೇಳಲು ಹಲವು ಸೈನಿಕರು ಈ ವಾರ ಆಶ್ರಮಕ್ಕೆ ಆಗಮಿಸಿದ್ದರು ಒಬ್ಬನು ಗಾಂಧೀಜಿಯವರನ್ನು ಕಂಡನು. ,ಆತನು ವ್ಯಾಕುಲಚಿತ್ತನಾಗಿದ್ದ ಸೈನಿಕರು ತಾಳ್ಮೆಗೆಡುತಿದ್ದಾರೆಂದು ಆತನು ಹೇಳಿದ. ಅವಮಾನ ಅನ್ಯಾಯಗಳನ್ನು ನುಂಗಿಕೊಂಡು ಸುಮ್ಮನೆ ಬಿದ್ದಿರಬೇಕೆಂದು ಗಾಂಧೀಜಿಯವರು ಅವರಿಗೆ ಸಲಹೆ ಕೊಡುವರೋ ?

" ಇಲ್ಲ " ಗಾಂಧೀಜಿಯವರು ಉತ್ತರಿಸಿದರು. " ಆದರೆ ನಿಮಗೆ ಗೊತ್ತಿದ್ದಂತೆ, ನನಗೆ ಶುದ್ಧ ಅಹಿಂಸಾತ್ಮಕ ಕೃತಿ ಬೇಕು ಮತ್ತು ಬಹಿರಂಗ ಉಪಾಯಗಳನ್ನು ಕೈಕೊಳ್ಳಬೇಕು. ಗೌಪ್ಯವು ನನಗೆ ಸೇರುವದಿಲ್ಲ. "

ಇದನ್ನು ಕೇಳಿ ಸಂದರ್ಶಕನು ಕಕ್ಕಾವಿಕ್ಕಿಯಾದನು. ಸೈನಿಕರ ಹೋರಾಟದಲ್ಲಿ ಅಹಿಂಸೆಗೆ ಸ್ಥಾನವೆಲ್ಲಿಯದು ಎಂದು ಅವನು ಅಚ್ಚರಿಗೊಂಡನು.

" ರಾಷ್ಟ್ರದ ಶಕ್ತಿಯಿದ್ದಷ್ಟು ಸ್ವಾರ್ಥತ್ಯಾಗ ಮತ್ತು ಅಹಿಂಸೆಯ ತಳಹದಿಯ ಮೇಲೆ ಸಂಘಟಿಸುವದಕ್ಕೆ ೧೯೪೨ ಅಗಸ್ಟ ೮ ನೆಯ ದಿನ ಮುಂಬೈ ಏ. ಆಯ. ಸಿ. ಸಿ. ಸಭೆಯಲ್ಲಿ ನಾನು ಮಾಡಿದ ಭಾಷಣದಲ್ಲಿ ಒಂದು ಕಾರ್ಯಕ್ರಮ ಹಾಕಿಕೊಟ್ಟಿದ್ದೆನು " ನುಡಿದರು ಗಾಂಧೀಜಿ " ಪತ್ರಿಕೆಗಳು ಏನುಮಾಡತಕ್ಕದ್ದು, ವಿದ್ಯಾರ್ಥಿಗಳು ಏನು ಮಾಡತಕ್ಕದ್ದು, ನರೇಂದ್ರರು ಏನು ಮಾಡತಕ್ಕದ್ದು, ಸರಕಾರ ನೌಕರರು ಏನು ಮಾಡತಕ್ಕದ್ದು ಮತ್ತು ಕೊನೆಯದಾಗಿ ಹಿಂದೀ ಸೈನಿಕರು ಏನು ಮಾಡತಕ್ಕದ್ದು ಎಂಬದನ್ನು ಆ ಭಾಷಣದಲ್ಲಿ ವಿವರಿಸಿರುತ್ತೇನೆ. ಸಕಲರೂ ನಾನು ಸೂಚಿಸಿದಂತೆ ತಂತಮ್ಮ ಪಾಲಿನ ಕರ್ತವ್ಯವನ್ನು ಪೂರೈಸಿದ್ದರೆ ಅದರ ಪರಿಣಾಮ ಆಶ್ಚರ್ಯಕರವಾಗುತಿತ್ತು. ಆ ಕಾರ್ಯಕ್ರಮವನ್ನು ಇನ್ನೂ ಕಾರ್ಯರೂಪಕ್ಕೆ ತರಬಹುದಾಗಿದೆ. ಹೊಟ್ಟೆಪಾಡಿಗಾಗಿ ಸೈನಿಕನ ವೃತ್ತಿಯನ್ನು ಕೈಕೊಂಡಿಲ್ಲ, ಮಾತೃಭೂಮಿಯನ್ನು ಬಂಧಮುಕ್ತಮಾಡಿ ಅವಳು ಸ್ವತಂತ್ರ ಉಳಿಯುವಂತೆ ರಕ್ಷಿಸುವದಾಗಿ, ಸೈನಿಕರು ಸಾರಬೇಕು. ಆದರೆ ನಿಮಗೆ ಸಂಬಳ ಕೊಡುತ್ತಿರುವ ಸರಕಾರಕ್ಕೆ ಅವಿಧೇಯರಾಗಬಾರದು. ಯಾಕಂದರೆ ಈಗ ಅವಿಧೇಯರಾದರೆ ಮುಂಬರುವ ರಾಷ್ಟ್ರೀಯ ಸರಕಾರಕ್ಕೂ ಇದೇ ಕಾರಣದಿಂದ ಅವಿಧೇಯರಾಗಬಹುದೆಂಬ ಅನುಮಾನ ಹುಟ್ಟುತ್ತದೆ. ಆದರೆ ಸೈನಿಕನು ಮೇಲಾಧಿಕಾರಿಗಳ ಕಡೆಗೆ ಹೋಗಿ, ನೀವು ನಮ್ಮ ರಾಷ್ಟ್ರದ ಸ್ವಾತಂತ್ರ್ಯವನ್ನು ಬೆಂಬಲಿಸುವವರೆಗೆ ನಾನು ಸೇವೆಯಲ್ಲಿ ಉಳಿಯುವೆ ಮತ್ತು ಹಿಂದೀಯರ ಸ್ವಾತಂತ್ರ್ಯವನ್ನು ಮುರಿಬಡಿಯುವದಕ್ಕೆ ಶಸ್ತ್ರವನ್ನೆತ್ತಲಾರೆ ಎಂದು ಹೇಳುವದು ಅವಿಧೇಯತನವಾಗಲಾರದು. ಇಂಥ ಹೇಳಿಕೆಯ ಪರಿಣಾಮವಾಗಿ ನಿಮ್ಮನ್ನು ಕೆಲಸದಿಂದ ,ಕಿತ್ತಿ ಹಾಕಿದರೆ, ಸಂಬಳ ಬಂದು ಮಾಡಿದರೆ ಅಥವಾ ದಂಡಿನ ವಿಚಾರಣೆಗೆ ಗುರಿಪಡಿಸಿದರೆ, ಅದನ್ನು ಲಕ್ಷಿಸತಕ್ಕದ್ದಲ್ಲ. ಆದರಿಂದ ಅದ್ಭುತ ಕಿಡಿ ಹೊರಡುವದು. ಅದನ್ನು ಶಾಂತ ಮಾಡುವ ಶಕ್ತಿ ಯಾವ ಸೈನ್ಯದಲ್ಲಿಯೂ ಇರಲಾರದು. ಅಲ್ಲದೆ ಇಡೀ ಹಿಂದೀ ಸೈನ್ಯದಲ್ಲಿ ರಕ್ತಪಾತವಿಲ್ಲದೆ ದೇಶಪ್ರೇಮ ಅಂಕುರಿಸುವದು. ತದ್ವಿರುದ್ಧವಾಗಿ ಅವರು ಅವಿಧೇಯತನ, ಹಿಂಸೆ, ಪುಂಡತನಗಳಿಗೆ ಕೈಹಾಕಿದರೆ, ಸಾರ್ವಜನಿಕರ ಸಹಾನುಭೂತಿ ಕಳೆದುಕೊಳ್ಳುವರಲ್ಲದೆ ನಿಮಗೆ ಪಾಠ ಕಲಿಸಿ ಕೊಡಲು ಅಧಿಕಾರಿಗಳಿಗೆ ಅವಕಾಶ ಕೊಟ್ಟಂತಾಗುವದು. "

" ನಾನು ಇಲ್ಲಿಗೆ ಬಂದಾಗ ನನ್ನ ಬುದ್ಧಿ ಮಂಕಾಗಿತ್ತು " ಎಂದು ಸಂದರ್ಶಕನು ಉತ್ತರವಿತ್ತನು. " ಪರಿಸ್ಥಿತಿ ಈಗ ನಿಚ್ಚಳ ಕಾಣುತ್ತಿದೆ. ಮಹಾಪ್ರಮಾದದಿಂದ ನೀವು ನಮ್ಮನ್ನು ಪಾರು ಮಾಡಿದಿರಿ. ಇನ್ನು ನಾವು ಅವಸರದಿಂದ ಅಥವಾ ಅವಿಚಾರತನದಿಂದ ಯಾವ ಹೆಜ್ಜೆಯನ್ನೂ ಇಡುವದಿಲ್ಲ. "

ಗಾಳಿ ಎತ್ತ ಬೀಸುತ್ತಿದೆ?

ಬ್ರಿಟಿಶರಲ್ಲಿ ಆತ್ಮನಿರೀಕ್ಷಣೆ ನಡೆದಿದೆಯೆಂಬದನ್ನು ತಿಳಿದುಕೊಳ್ಳುವದಕ್ಕೆ ಬ್ರಿಟಿಶ್ ಸೈನಿಕನಿಂದ ಬಂದ ಕೆಳಗಿನ ಪತ್ರವು ಮಾದರಿಯದಾಗಿದೆ:—

"ಒತ್ತಾಯದಿಂದ ಸೈನ್ಯದಲ್ಲಿ ಸೇರಿಸಿಕೊಳ್ಳಲ್ಪಟ್ಟ ನಮ್ಮಲ್ಲನೇಕರು ನಿಮ್ಮ ರಾಷ್ಟ್ರದ ಹಿತವನ್ನು ಬಯಸುತಿರುವರು. ಆ ಆಶೆ ಬಹಳ ಬಲವತ್ತರವಾಗಿರುವದರಿಂದ ಅದನ್ನು ಪ್ರಕಟಗೊಳಿಸಲು ಈ ಮಾರ್ಗ ಕೈಕೊಂಡಿರುತ್ತೇವೆ. ಅದೇನೆಂದರೆ: ನಾವು ಪಾರ್ಲಿಮೆಂಟ ಸದಸ್ಯರಿಗೆ ಪತ್ರ ಬರೆದು ಹಿಂದೀ ಸಮಸ್ಯೆಯನ್ನು ಬೇಗನೆ ಬಿಡಿಸಬೇಕೆಂದು ಒತ್ತಿ ಹೇಳಿರುವೆವು. ನಿಮ್ಮ ರಾಷ್ಟ್ರವನ್ನು ನಿಮಗೆ ನಿಮ್ಮ ಜನರಿಗೆ ಒಪ್ಪಿಸಿ 'ಚಲೇಜಾವ' ಘೋಷಣೆ ಕಾರ್ಯಕಾರಿ ಮಾಡುವದಕ್ಕೆ ನಿಮಗೆ ಸಹಾಯ ಮಾಡಬೇಕೆಂದು ನಾವು ಶಿಫಾರಸ ಮಾಡಿರುತ್ತೇವೆ.

" ನಮ್ಮ ಮತದಾರ ಸಂಘದ ಪಾರ್ಲಿಮೆಂಟ ಸದಸ್ಯನಿಗೆ ನಾನು ಇದೊಂದು ಮಾತು ಕೇಳಿರುವೆನು: ನಾನು ಪ್ರೀತಿಸುವಂಥ ಜನರ ಮೇಲೆ ಶಸ್ತ್ರವನ್ನೆತ್ತಲು ನನಗೆ ಆಜ್ಞಾಪಿಸಿದರೆ ಬ್ರಿಟಿಶ್ ಸೈನ್ಯದಲ್ಲಿ ನನ್ನ ಸ್ಥಾನಮಾನವೇನು? ಹಾಗೆ ಹಾದಿ ತಪ್ಪಿಯಾರಾದರೂ ನನಗೆ ಆಜ್ಞಾಪಿಸಿದರೆ ನಾನು ಹಾಗೆ ಗುಂಡು ಹೊಡೆಯತಕ್ಕವನಲ್ಲವೆಂದು ತಿಳಿಸಿದ್ದೆನು. ನಮ್ಮ ಸ್ಥಾನಮಾನವನ್ನು ಸ್ಪಷ್ಟೀಕರಿಸಬೇಕೆಂದೂ ಕೇಳಿಕೊಂಡಿದ್ದೆನು. ಸಾಮ್ರಾಜ್ಯದ ಸಲುವಾಗಿ ಹೋರಾಡಲು ನಾವು ಸೈನ್ಯವನ್ನು ಸೇರಲಿಲ್ಲ- ನಾನಂತೂ ಆ ಧ್ಯೇಯವನ್ನಿಟ್ಟುಕೊಂಡಿರಲಿಲ್ಲ.

" ಈ ದೇಶವು ತಾಳ್ಮೆಗೆಡುತ್ತಲಿದೆ; ಅದಕ್ಕೆ ಕಾರಣವೂ ಇದೆ. ಇತ್ತೀಚೆಗೆ ನಡೆದ ಗಲಭೆಗಳು ಅದರ ಲಕ್ಷಣ. ಈ ಗಲಭೆಗಳು ಅವಿಚಾರತನದ್ದಿರುವವೆಂದು ನನಗೆ ವಿಶ್ವಾಸವಿದೆ. ಇಂಥ ಗಲಭೆಗಳಿಂದ ಅವರು ನ್ಯಾಯಪಕ್ಷಪಾತಿಗಳ ಸಹಾನುಭೂತಿಯನ್ನು ಕಳೆದುಕೊಳ್ಳುತ್ತಾರೆ. ಆದುದರಿಂದ ಪರಿಸ್ಥಿತಿ ಜನಜಂಗುಳಿಯ ಕೈಸೇರದಂತೆ ಗಲಭೆಗಳಿಗೆ ಹೊಣೆಯಿದ್ದವರನ್ನು ಅಂಕಿತಕ್ಕೆ ತರಲು ಪ್ರಯತ್ನಿಸುವರೆಂದು ನಾನು ಆಶಿಸುತ್ತೇನೆ. . . . "ನಾನು ಈ ಪತ್ರ ಬರೆಯುವಾಗ ಹದ್ದು ಮೀರಿರಬಹುದು. ಆದರೆ ಅದಕ್ಕೇನಾದರೂ ಪ್ರಾಯಶ್ಚಿತ್ತವಿದ್ದರೆ ನಾನು ಸಿದ್ಧನಿದ್ದೇನೆ. ನನ್ನಹೃದಯದಲ್ಲಿಯೂ ಸ್ವಲ್ಪ ಮಾನವೀಯತೆ ಇದ್ದುದರಿಂದ, ನನಗೆನಿಸಿದುದನ್ನು ಪ್ರಾಮಾಣಿಕತನದಿಂದ ಮುಂದಿಟ್ಟಿರುವೆನು. ಆದರಂತೆ ನಿಮಗೆ ಜಯ ಕೋರುವ ಅನೇಕ ಬ್ರಿಟಿಶರು ಇಲ್ಲಿಯೂ ಇಂಗ್ಲಂಡದಲ್ಲಿಯೂ ಇರುವರೆಂದು ನಿಮಗೆ ತಿಳಿಯುತ್ತದೆ. ....ಇದು ಒಬ್ಬರಿಂದಾಗತಕ್ಕ ಕೆಲಸವಲ್ಲದಿದ್ದರೂ ಅವಕಾಶವಿದ್ದಲ್ಲಿ ನನ್ನ ಅಳಿಲ ಭಕ್ತಿಯನ್ನು ಸಂತೋಷದಿಂದ ಸಮರ್ಪಿಸುವೆನು."

ಪುಣೆ ೩-೩-೪೬ ಪ್ಯಾರೆಲಾಲ

ಶೆಲ್ಲಿಯ ದಾರ್ಶನಿಕ ದೃಷ್ಟಿ

ಮ್ಯಾಂಚೆಸ್ಟರದಲ್ಲಿ ನಿಶ್ಶಸ್ತ್ರ ಅಂಗ್ಲನೇಕಾರರು ಸೈನಿಕರನ್ನು ಎದುರಿಸಿದ್ದರ ಪರಿಣಾಮವಾಗಿ ಸಂಭವಿಸಿದ ಮಾಂಚೆಸ್ಟರ ಕೊಲೆಯ ಸುದ್ದಿಯನ್ನು ಶೆಲ್ಲಿಯು ಇಟಲಿಯಲ್ಲಿದ್ದಾಗ ಕೇಳಿದನು. ನಿರ್ಧಾರ ಸಹಕಾರಗಳಿಂದಿದ್ದು ಅನೇಕರು ಕೆಲವರನ್ನು ಅಧೀನವಲ್ಲಿಟ್ಟುಕೊಳ್ಳಬಲ್ಲರು ಎಂಬ ಮಹಾತತ್ವವನ್ನು ಅರಿತ ಅವನು ತನ್ನ ದುಃಖಿತ ದೇಶಬಾಂಧವರಿಗೆ ಪ್ರತಿಭಟನೆಯ ರೀತಿಯನ್ನು ಕಲಿಸಬಯಸಿದನು, ಎಂದು ಶ್ರೀಮತಿ ಶೆಲ್ಲಿ ಹೇಳಿದ್ದಾಳೆ. ಆದ್ದರಿಂದ ಶೆಲ್ಲಿಯು "ಮಾಸ್ಕ ಅಫ್ ಅನಾರ್ಕಿ" ಎಂಬ ಕವಿತೆ ಬರೆದು ತನ್ನ ಅಹಿಂಸಾತ್ಮಕ ಬಂಡಾಯದ ರೀತಿಯನ್ನು ನಿರೂಪಿಸಿದ್ದಾನೆ.

ಶೆಲ್ಲಿಯು ಅಂದಿನ ಇಂಗ್ಲಂಡದ ಜನಸಾಮಾನ್ಯನ ದಾಸ್ಯವನ್ನು ಮೊದಲು ಚಿತ್ರಿಸಿದನು. ಸಾಮಾನ್ಯ ಅಂಗ್ಲನು ಅತಿಯಾಗಿ ದುಡಿಯಬೇಕಾಗುತ್ತಿತ್ತು. ಆದರೂ ಅವನಿಗೆ ತನ್ನ ಕ್ರೂರ ಯಜಮಾನನ ಹಿತಕ್ಕಾಗಿ ಜೀವಧಾರಣೆ ಮಾಡುವಷ್ಟು ಮಾತ್ರ ಕೂಲಿ ದೊರೆಯುತ್ತಿತ್ತು. ನೇಕಾರ, ಒಕ್ಕಲಿಗ, ಸೈನಿಕ, ಕೂಲಿಕಾರ ಹೀಗೆ ಅವನು ಅನೇಕ ವಿಧವಾಗಿ ಕೆಲಸ ಮಾಡಬೇಕಾಗಿದ್ದರೂ ತನ್ನ ಶ್ರಮದ ಫಲವನ್ನು ಅವನಿಗೆ ಅನುಭವಿಸಲು ಬರುತ್ತಿರಲಿಲ್ಲ. ಅವನು ತನ್ನನ್ನಲ್ಲ ಆದರೆ ತನ್ನ ಒಡೆಯನನ್ನು ರಕ್ಷಿಸುತ್ತಿದ್ದ. ಅರೆಬತ್ತಲೆ, ಅರೆಹೊಟ್ಟೆಯಿಂದಿದ್ದ ಅವನ ಹೆಂಡಿರು ಮಕ್ಕಳು—

'....ಅಳಿಯುವರು ನಾನಿಲ್ಲಿ ನುಡಿಯತಿರಲು
ನ್ಯೆಕೊರೆವ ಕುಳಿಗಾಳಿ ಬೀಸುತಿರಲು '

ಸಿರಿವಂತನು ಸುಲಿಗೆ ನಡೆಸಿ ಪಡೆದ ಅನ್ನವನ್ನು ತನ್ನ ಕೊಬ್ಬಿದ ನಾಯಿಗಳಿಗೆ ಉಣಿಸುತಿರುವದನ್ನು ಇವನು ಆಸೆ ತುಂಬಿದ ಕಂಣುಗಳಿಂದ ನೋಡುತಿದ್ದಾನೆ. ಇವನಿಗೆ ಬರಿ ಕಾಗದದ ಹಣ ಕೊಡಲಾಗುತ್ತಿತ್ತು. ಹಿಂದಿನ ದಬ್ಬಾಳಿಕೆಯ ಕಾಲದಲ್ಲಿ ಜನರು ತಮ್ಮ ಉಪಜೀವನಕ್ಕಾಗಿ ಕಷ್ಟದಿಂದ ದುಡಿಯುತ್ತಿದ್ದುದಕ್ಕಿಂತ ಇಂದಿನವರು ' ಚಿನ್ನದ ದೆವ್ವ ' ಕ್ಕಾಗಿ ಹೆಚ್ಚು ಕಷ್ಟ ಸೋಸಿ ದುಡಿಯಬೇಕಾಗಿದೆ. ನೋಟುಗಳ ಬಗ್ಗೆ ಶೆಲ್ಲಿಯು ಹೀಗೆ ಹೇಳಿದ್ದಾನೆ.

" ಭೂಮಿ ತಾಯಿಯ ಸೊತ್ತಿನಗ್ಗಳಿಕೆಯಂಶಕ್ಕೆ
ಅಧಿಕಾರದಿಂದೀಯುವಾ ಕೃತಕ ಬೆಲೆಯಿಂದೆಂಬೆ"

ಅಂಗ್ಲ ಜನತೆಯು ಆತ್ಮವೆ ದಾಸ್ಯ ವಹಿಸಿದೆ, ಸ್ವಯಂನಿರ್ಧಾರವಿಲ್ಲ.

' ನೀವು ರೂಪಿಸಿದಂತೆ ರೂಪುಗೊಂಡಿಪರವರು '

ಆದರೆ ಕಾಲ ತಿರುಗಿ ದೊರಿಕೊಳ್ಳುವ ಸಾಹಸ ಮಾಡಿದಾಗ ಅವರ ದನಿ ' ನರಸತ್ತ ಅಳುಗಳ ಗೊಣಗಾಟ ' ವಾಗಿತ್ತು.

' ಕ್ರೂರಿಗಳ ಕೆಯ್ಯಾಳ್ಗಳಿವರನ್ನು ಮತ್ತಿವರ
ಹೆಂಡಿರನು ಚಂಡಾಡೆ ಪುಟಿದೆದ್ದ ಸತ್ತವರ
ನೆತ್ತರವು ಹುಲ್ಲ ಮೇಲ್ ಮಂಜುಹನಿಯಂತಿತ್ತು
ಕಾಡು ಜನರೇ ಆಗಲಿ, ಪಂಜರದಲ್ಲಿಯ ಹಿಂಸ್ರ

ಪಶುಗಳೇ ಆಗಲಿ ಇಂಥ ದಬ್ಬಾಳಿಕೆಯನ್ನು ಸಹಿಸಲಾರರು. ಅವರು ಇಂಥದನ್ನು ಕಂಡರಿಯರು.

ಶೆಲ್ಲಿಯು ' ಸ್ವತಂತ್ರ ಭೂಮಿ 'ಗೆ ಅಂಗ್ಲರನ್ನು ಕರೆದೊಯ್ಯುವ ಆಶ್ವಾಸನವಿತ್ತನು. ಆದರೆ ಆ ಹೊಸ ಜೆರೂಸಲೇಮುಕ್ಕೆ ದಾರಿ ಎಲ್ಲಿತ್ತು ? ಇದಕ್ಕುತ್ತರವಾಗಿ ಅವನು ಸಾರ್ವಜನಿಕ ಸತ್ಯಾಗ್ರಹದ ತನ್ನ ದರ್ಶನವನ್ನು ವಿವರಿಸಿದನು.

ಮೇಲಿರುವ ನೀಲಿಮಾಕಾಶ, ಕಾಲಡಿಯ ಹಸಿರ ಭೂಮಿತಾಯಿ ಮತ್ತೆ ಶಾಶ್ವತವಾದುದೆಲ್ಲ ಈ ಗಂಭೀರ ಕಾರ್ಯವನ್ನವಲೋಕಿಸಬೇಕು. ಇಂಗ್ಲಂಡದ ಮೂಲೆ ಮೂಲೆಗಳಲ್ಲಿಯೂ ಪ್ರತಿ ಗುಡಿಸಲು ಹಳ್ಳಿ ಪಟ್ಟಣಗಳಲ್ಲಿಯೂ

' ತಮ್ಮದೆಂಬ ಇಲ್ಲಾ ಹೆರವರದೆಂಬ
ದುಮ್ಮಾನದಿಂದಿದ್ದು ಒರಲುವರೆಂಬ
ಜನರು ,ಸಾಮೂಹಿಕವಾಗಿ ನೆರೆದು ಮಿತವಾದ

ನುಡಿಯಿಂದ ಹೀಗೆ ಘೋಷಿಸಲಿ

' ಸ್ವತಂತ್ರರಾವಿಂದು ದೇವ ನಿರ್ಮಿತರೆಂದು '
ಕೂಡಲೆ ಕ್ರೂರಿಗಳು ನಿಮ್ಮ ಸುತ್ತಲೂ
' ಗುಂಡು ಕಾರುವ ತೋಫುಗಳ ನಿಲ್ಲಿಪರು '
ಆದರೆ ಜನತೆಯು ನಿರ್ಧಾರದಿಂದ ಶಾಂತವಾಗಿ
ಕೈ ಕಟ್ಟಿ ಕುಜನಿಬಿಡ ಶಾಂತ ಕಾನನದಂತೆ
ಕಣ್ಣು ಕೂದಲಗಿಂದೆ ಬವರ ಗೆಲುವಂತೆ '

ವ್ಯೂಹ ಚದರಿ ಹೋದರೂ ಅಳಕನ್ನು ತೊರೆದು ನಿಲ್ಲಬೇಕು. ಆಗ ಕೂಡ ಕ್ರೂರಿಗಳು ಎದೆಗಾರಿಕೆಯನ್ನು ತೋರಿದರೆ

" ನಿಮ್ಮನ್ನು ತೊತ್ತಳದುಳಿಯಲಿ, ಹಿಂಸಿಸಲಿ, ಇರಿಯಲಿ, ಮನಸ್ಸಿಗೆ ಬಂದಂತೆ ಕರಾಳನೃತ್ಯ ನಡೆಸಲಿ. ಕೈ ಕಟ್ಟಿ, ಕಣ್ ನೆಟ್ಟು, ಅಚ್ಚರಿಯ ದೂಡಿ ಅಳುಕನೀಡಾಡಿ ಅವರ ಕೋಪವಾರುವವರೆಗೆ ನೋಡುತ್ತ ನಿಲ್ಲು "

(೧೦ ನೇ ಪುಟ ನೋಡಿರಿ)

ಮಾರ್ಗ ಮತ್ತು ಉಪಾಯ

(೮ನೇ ಪುಟದಿಂದ ಮುಂದರಿದುದು)

೧೦೦ ಕ್ಕೆ ಕನಿಷ್ಠ ೧೫ ರಿಂದ ೨೫ ರ ವರೆಗೆ ಹೆಚ್ಚುವದು.

೧೨) ದನಕರುಗಳನ್ನು ಸಾಕಲು ಪ್ರೋತ್ಸಾಹನೆ ಕೊಡಬೇಕು. ತಮ್ಮ ಜಿಲ್ಹೆಯಲ್ಲಿಯ ಗಾಂವಳಿ ಮೊದಲಾದ ಒಳ್ಳೆ ಜಾತಿಯ ದನಗಳು ಪ್ರಸಿದ್ಧವಿದ್ದರೂ ಪ್ರತಿಸಿತ್ತು ಸೈನಿಕರಿಗಾಗಿ ಮತ್ತು ಕಡಿಯುವದಕ್ಕೆಂದು ಒಳ್ಳೆ ಆಕಳಿಗಳನ್ನು ಹೊರಗೆ ಸಾಗಿಸಲಾಗುತ್ತದೆಂದು ಗುಂಟೂರದ ಗೆಳೆಯರೊಬ್ಬರು ತಿಳಿಸುತ್ತಾರೆ.

೧೩) ಸದ್ಯದ ಗಂಡಾಂತರ ಪರಿಸ್ಥಿತಿಯಲ್ಲಿ ಬೇರೆ ಬೇರೆ ಬಗೆಯ ಕೆಲಸಗಳಿಗಾಗಿ ಸೈನಿಕರ ವಿಶೇಷತಃ ವಿಸರ್ಜಿತ ಸೈನಿಕರ ಉಪಯೋಗ ಮಾಡಿಕೊಳ್ಳಬೇಕೆಂದು ಸೂಚಿಸಬಹುದಾಗಿದೆ. ಕಲ್ಯಾಣದಿಂದ ಕರ್ಜತದವರೆಗಿನ ರಂದರವು ಒಳ್ಳೆ ಫಲವತ್ತಾದ ಪ್ರದೇಶವಾಗಿದೆಂದು ಒಬ್ಬರು ಬರೆಯುತ್ತಾರೆ. ಸಮುದ್ರಕ್ಕೆ ನೀರು ಹೋಗಿ ಕೂಡುವ ಸುತ್ತುಮುತ್ತಲಿನ ಫಲವತ್ತಾದ ಸಾವಿರಾರು ಎಕರೆ ಭೂಮಿಯು ನವಂಬರದಿಂದ ಜೂನದ ವರೆಗೆ ಸಾಗುಗದೆ ಬಿದ್ದಿರುತ್ತದೆ. ಈ ನೀರನ್ನು ಸಹಜವಾಗಿ ಕಾಲುವೆ ಮೂಲಕ ಇಲ್ಲವೆ ಬಾವಿಯ ಮೂಲಕ ಉಪಯೋಗಿಸಿಕೊಳ್ಳಬಹುದಾಗಿದೆ. ಇದನ್ನೆಲ್ಲ ಮಾಡುವಷ್ಟು ಸಂಪನ್ನರು ಭತ್ತಬೆಳೆವ ರೈತರಿರುವದಿಲ್ಲ. ಆದರೆ ಭತ್ತದ ಬೆಳೆಗೆ ಯಾವದೇ ಬಗೆಯ ಹಾನಿಯಾಗದೆ ಬೇರೆ ಬೆಳೆ ತೆಗೆಯಬಹುದಾದರೆ ಸರಕಾರದವರು ಹಿಂದೀ ಎಂಜಿನಿಯರರಿಗೆ ಇಲ್ಲವೆ ಉಳಿದ ಸೈನಿಕರಿಗೆ ಈ ಕೆಲಸ ಏಕೆ ಹಚ್ಚಬಾರದು. ಇದೇ ರೀತಿ ಉಳಿದೆಡೆಯಲ್ಲಿದ್ದ ಬೀಳು ಭೂಮಿಗಳನ್ನೆಲ್ಲ ಸಾಗು ಮಾಡಬಹುದು.

೧೪) ಕೊನೆಯದಾಗಿ ಸಂಗ್ರಹ ಮತ್ತು ಕಳ್ಳಪೇಟೆಯ ವಿಷಯವೂ ಸ್ವಾಭಾವಿಕವಾಗಿ ಕೇಳಿಬರುತ್ತದೆ. ಕಳ್ಳ ಪೇಟೆಯನ್ನು ನಿರ್ಮೂಲಗೊಳಿಸಲು ನಿಜಕ್ಕೂ ಸಾಧ್ಯವೆಂದರೆ ಶ್ರೀಮಂತರು ಅಲ್ಲಿಗೆ ಹೋಗುವದನ್ನೆ ಬಿಟ್ಟುಕೊಡಬೇಕು. ಅವರು ಹಾಗೆ ಮಾಡುವರೆ? ನಾವು ಉಸಿರಾಡಿಸುವಲ್ಲೆಲ್ಲ ಈಗ ಹಿಂಸೆ ತುಂಬಿದೆ. ಕೊಲೆ, ಲೂಟಿ, ಕೊಳ್ಳೆ, ಆಸ್ತಿನಾಶವೆಂದರಷ್ಟೆ ಹಿಂಸೆಯೆಂದು ಭಾವಿಸಕೂಡದು. ಲೋಭ, ಸ್ವಾರ್ಥ, ಸುಲಿಗೆ, ಲಂಚ, ಮೊದಲಾದ ಅತ್ಯಂತ ಸೂಕ್ಷ್ಮ ವಿಷಯಗಳೂ ಹಿಂಸೆಯ ಮಾದರಿಗಳಾಗಿವೆ. ಜನ ಕ್ರೋಧಕ್ಕೆ ಕಡಿಮೆಯಾಗಬಹುದು ಇಲ್ಲವೆ ಹೆಚ್ಚಿನ ಹಿಂಸೆಯಿಂದ ಅದನ್ನು ಹಿಡಿತದಲ್ಲಿ ತರಬಹುದು. ಆದರೆ ಲೋಭ, ಸ್ವಾರ್ಥವೊದಲಾದವುಗಳು ಹಾಗೆಯೆ ಹೆಚ್ಚುತ್ತ ಹೋಗಿ ಸಮಾಜದ ಸ್ವಾಸ್ಥ್ಯವನ್ನೆ ನಾಶಗೊಳಿಸುವವು. ಸಾರ್ವಜನಿಕ ಅಭಿಪ್ರಾಯವನ್ನು ಜಾಗ್ರತಗೊಳಿಸಿ ಮತ್ತು ನೈತಿಕ ಮಟ್ಟವನ್ನು ಹೆಚ್ಚುವಂತೆ ಮಾಡಿ ಇದನ್ನೆಲ್ಲ ನಿರ್ಮೂಲಗೊಳಿಸಬಹುದು.

ಪುಣೆ ೨-೩-೪೬ ಅ. ಕು.

ಶೆಲ್ಲಿಯ ದಾರ್ಶನಿಕ ದೃಷ್ಟಿ

(೯ನೇ ಪುಟದಿಂದ ಮುಂದುವರಿದುದು)

“ಆಗ ಅವರು ನಾಚಿಕೆಯಿಂದ ಬಂದಲ್ಲಿಗೆ ತಿರುಗಿ ಹೋಗುವರು. ಅವರು ಚೆಲ್ಲಿದ ನೆತ್ತರು ಅವಮಾನದಿಂದ ಕೆಂಪಾದ ಅವರ ಕೆನ್ನೆಯ ಮೇಲೆ ಕಾಣಿಸದಿರದು. ನಾಡಿನ ಸ್ತ್ರೀಯೊಬ್ಬಳೂ ತಿರಸ್ಕಾರದಿಂದ ಅವರನ್ನು ಬೊಟ್ಟು ಮಾಡಿ ತೋರಿಸುವಳು. ತಮ್ಮ ನೇಹಿಗರನ್ನು ಮಾತನಾಡಿಸುವ ಎದೆಗಾರಿಕೆ ಕೂಡ ಅವರಲ್ಲಿ ಉಳಿಯದು. ಇಂಥ ನೀಚರನ್ನು ಸೋಲಲೊಲ್ಲದ ಸ್ವತಂತ್ರರ ಜಗತ್ತಿಗೆ ಯುದ್ಧದಲ್ಲಿ ಗಂಡಾಂತರಗಳನ್ನೆದುರಿಸಿದ ವೀರ, ಧೀರ ಯೋಧರು ಹಿಂದಿರುಗುವರು.

ಇಂಥ ಕೊನೆಯ ನಾಡಿಗೆ ಸ್ಫೂರ್ತಿದಾಯಕವಾದ ಸುಸ್ಪಷ್ಟವಾದ ಜ್ವಾಲಾಮುಖಿಯಾಗುವದು. ಪ್ರತಿಯೊಬ್ಬನ ಮನಸಿನಲ್ಲಿಯೂ ದುಮದುಮಿಸುವ ಈ ಶಬ್ದಗಳು ದಬ್ಬಾಳಿಕೆಯ ಗೋರಿಯನ್ನು ಕಟ್ಟುವವು.

“ನಿದ್ರೆಯನು ತೊರೆದಿದ್ದ ಕೇಸರಿಗಳು ಮಂಜುಹನಿಗಳನ್ನು ಮೈಕೊಡಹಿ ನೆಲಕ್ಕುದುರಿಸುವಂತೆ [illegible] ಎದ್ದೇಳು, ಸಂಕೋಲೆಗಳ ಬೀಸಾಡು ನೀವು ಅನೇಕ, ಅವರೂ ಕೆಲವರು.”

ಪುಣೆ ವಿ. ಜಿ. ಡಿ.

೨೩- -೪೬

ಅಹಿಂಸಾವಾದಿ ಹಿಂದುಸ್ತಾನದ ಜಾಗತಿಕ ಶಕ್ತಿ

ಎರಡು ಬಗೆಯ ಶಕ್ತಿಯನ್ನು ಉತ್ಪಾದಿಸಿ ನಾವು ಇತರರ ಮೇಲೆ ಹಿಡಿತವನ್ನು ಸಂಪಾದಿಸಬಹುದು—ಅವೇ ವಿಧಾಯಕ ಮತ್ತು ವಿಘಾತಕ ಶಕ್ತಿಗಳು. ಮೊದಲನೆಯದು ಪ್ರೇಮ ಮತ್ತು ಸೇವೆಯೆಂಬ ಲಕ್ಷಣಗಳಿಂದ ಲಕ್ಷಿತವಾಗಿದ್ದರೆ ಎರಡನೆಯದು ದ್ವೇಷ ಭಯಗಳಿಂದ ವಿಶಿಷ್ಟವಾಗಿದೆ.

ಇಂದು ಜಗತ್ತು ಭಯ ದ್ವೇಷಗಳ ಹಿಡಿತದಲ್ಲಿದೆ. ಇದು ನಮ್ಮ ಆರ್ಥಿಕ ಸಾಮಾಜಿಕ ಪದ್ಧತಿಯ ಪರಿಣಾಮ. ಈ ಪದ್ಧತಿಗೆ ನಮಗೆ ನಮ್ಮ ನೆರೆಹೊರೆಯವನ ಮೇಲೆ ಹಿಡಿತ ಸಂಪಾದಿಸುವದೇ ಅವಶ್ಯ ಆಧಾರವಾಗಿದೆ. ಕೇಂದ್ರೀಕೃತ ಉದ್ಯೋಗಗಳು ತಮ್ಮ ಯಂತ್ರ-ಕಾರಖಾನಗಳನ್ನು ಒಂದೆಡೆ ಪ್ರತಿಷ್ಠಿಸಿ, ದೂರ ದೂರದ ಪ್ರದೇಶಗಳಿಂದ ಕಚ್ಚಾ ಸಾಮಗ್ರಿಗಳನ್ನು ಪಡೆಯಬೇಕಾಗುತ್ತದೆ. ಅದಕ್ಕೆ ಅವಶ್ಯಕ ಪೇಟೆಗಳನ್ನೂ ಅವು ಕಂಡು ಹಿಡಿಯಬೇಕಾಗುತ್ತದೆ. ಮತ್ತು ಆ ಪೇಟೆ ಭೂಮಿಯು ಆ ತುದಿಯಲ್ಲಿದ್ದರೂ ಅವನ್ನು ಅಧೀನದಲ್ಲಿರಿಸಿಕೊಳ್ಳಬೇಕಾಗುತ್ತದೆ. ಹತ್ತಿ ಬೆಳೆಯದಿರುವ ಮ್ಯಾಂಚೆಸ್ಟರದಲ್ಲಿ ಜವಳಿ ಗಿರಣಿಗಳು ಇರಬೇಕಾದೀತು. ಅದಕ್ಕೆ ಅವಶ್ಯವಿದ್ದ ಹತ್ತಿಯನ್ನು ಹಿಂದುಸ್ತಾನದಲ್ಲಿ—೬೦೦೦ ಮೈಲ ದೂರ—ಬೆಳಸಬೇಕಾಗುವದು. ಅದನ್ನು ನೂತು ನೇಯ್ದ ಮೇಲೆ ಅದನ್ನು ತಿರುಗಿ ಹಿಂದುಸ್ತಾನಕ್ಕೆ ಕಳಿಸಬೇಕಾಗುವದು—ಪುನಃ ೬೦೦೦ ಮೈಲಿ ಪ್ರಯಾಣ. ಇದರಿಂದಾಗಿ ಹಿಂದುಸ್ತಾನದ ಹತ್ತಿ ಬೆಳೆಯುವವರ ಜೀವನವನ್ನು ಮ್ಯಾಂಚೆಸ್ಟರದ ಗಿರಣಿಯೊಡೆಯರು ತಮಗೆ ಬೇಕಾದಂತೆ ರೂಪಿಸಿಕೊಳ್ಳಬೇಕಾಗುತ್ತದೆ. ಇದಲ್ಲದೆ ಈ ಗಿರಣಿಯೊಡೆಯರೇ, ಹಿಂದುಸ್ತಾನದಲ್ಲಿ ತಮ್ಮ ಬಟ್ಟೆ ಮಾರುವದಕ್ಕೆ ಅನುಕೂಲವಾಗುವಂತೆ ಕಡಿಮೆ ದರದ ಸುಂಕ-ಕರಗಳು ಬೀಳಬೇಕೆಂದು ಹಿಂದುಸ್ತಾನ ಸರಕಾರವನ್ನೂ ವಶಪಡಿಸಿಕೊಳ್ಳುವದು ಅವಶ್ಯವೆನಿಸುವದು. ವಿಜ್ಞಾನವನ್ನು ಪರಮಾಣು ಬಾಂಬುಗಳ ನಿರ್ಮಾಣಕ್ಕಾಗಿ ಉಪಯೋಗಿಸಿಕೊಳ್ಳುವ ಮೂಲಕ ಮತ್ತು ಪೇಟೆಯಲ್ಲಿನ ಇತರ ಯಶಸ್ವಿ ಪೈಪೋಟಿಗಾರರಾದ ಜಪಾನ ಮತ್ತು ಜರ್ಮನ ಜನರ ವಿರುದ್ಧ ದ್ವೇಷದ ಹಾಡನ್ನು ಕಲಿಸುವ ಮೂಲಕ ಇದನ್ನು ಸಾಧಿಸಿಕೊಳ್ಳಲಾಗುತ್ತದೆ. ಪರಿಣಾಮವಾಗಿ ಹಿಂದುಸ್ತಾನದ ದಾಸ್ಯವೆಂಬ ವಸ್ತುವಿನ ಹುಟ್ಟು. ಇದನ್ನೆಲ್ಲ ಸಾಧಿಸಲು ಹಿಂಸೆಗೆ ಗೌರವವಿತ್ತು ಸಮಾಜದಲ್ಲಿ ಅದನ್ನು ಉಚ್ಚ ಸ್ಥಾನಕ್ಕೇರಿಸಲಾಯಿತು. ನೌಕಾಪತಿಗಳಿಗೂ ಸೇನಾಪತಿಗಳಿಗೂ ವೆಸ್ಟ್ ಮಿನಿಸ್ಟರ ಮತ್ತು ಸೇಂಟಪಾಲ ಇಗರ್ಜಿಯಲ್ಲಿ ಸ್ಮಾರಕಗಳನ್ನು ಕಟ್ಟಲಾಯಿತು. ಅವರನ್ನು ದೇವತೆಗಳ ಸಮಾನಸ್ಥಾನದಲ್ಲಿರಿಸಲಾಯಿತು. ಹಾಗೆ ಮಾಡಿದರೆ ಮಾತ್ರ ಸೈನ್ಯ, ನೌಕಾಪಡೆ, ವಿಮಾನಪಡೆಗಳಿಗೆ ಜನರು ಬಂದು ಮುಕುರುವರು. ಇದರಿಂದ ನಾಗರಿಕತೆಯನ್ನು ಬರ್ಬರತೆಗಿಳಿಸಿದಂತಾಗಿದೆ. ಇಂದು ಇದೇ ಪದ್ಧತಿಯ ಕೆಳಗೆ ಸಕಲ ಜಗತ್ತು ನರಳುತ್ತಿದೆ. ಪರಮಾಣು ಬಾಂಬಿನ ಬಲದಿಂದ ಪ್ರಬಲ ರಾಷ್ಟ್ರಗಳು ಇಂದು ಜಗತ್ತಿನಲ್ಲಿ ತಾವೇ ತಾವಾಗಿ ಬಿಟ್ಟಿದ್ದಾರೆ. ಜಗತ್ತಿನ ಇತರ ಭಾಗಗಳು ವಿನಾಶದ ಭಯದಿಂದ ತಲೆವಾಗಿಸಿರುತ್ತವೆ. ಜಗತ್ತನ್ನೇ ಜಯಿಸಿ ಸಂಪಾದಿಸಿದರೂ ಹೀಗೆ ಆತ್ಮ ಮಾತ್ರ ನಿರ್ನಾಮವಾಗಿದೆ.

ಇದಕ್ಕೆ ಬದಲೇನು? ನಾವು ಯೋಗ್ಯತೆಗೆ ಬೇರೆಯ ಮಟ್ಟವನ್ನು ಸಿದ್ಧಗೊಳಿಸಬೇಕು. ಗಿರಣಿಗಳ ಮತ್ತು ಯಂತ್ರಗಳ ಹಿತದ ಬದಲು ಜನತೆಯ ಹಿತದ ಮಟ್ಟವನ್ನು ಸ್ಥಾಪಿಸಬೇಕು. ಈ ಪಾರ್ಥಿವ ಜಗತ್ತಿನ ಆವಶ್ಯಕತೆಗಳಿಗನುಸಾರವಾಗಿ ನಾವು ನಮ್ಮ ಜೀವನಗಳನ್ನು ರೂಪಿಸಿಕೊಳ್ಳಬಾರದು. ಅಸಹಜವಾಗಿ ನಮ್ಮ ಅವಶ್ಯಕತೆಗಳನ್ನು ಬೆಳಸಿಕೊಂಡು ಆ ಮೇಲೆ ಅವುಗಳನ್ನು ತೃಪ್ತಿಪಡಿಸಿಕೊಳ್ಳಲು ಹೆಣಗುವದು ಬೇಡ. ಮೊದಲಾಗಬೇಕಾದ್ದಕ್ಕೆ ಮೊದಲನೆ ಸ್ಥಾನವೀಯತಕ್ಕದ್ದು. 'ಜವಾದ ಜೀವನ ನಮ್ಮ ಕೈಯಲ್ಲಿರುವ ಸೊತ್ತುಗಳ ಧಾರಾಳತನದಲ್ಲಿ ಅಡಕವಾಗಿಲ್ಲ.

ಇದಕ್ಕೆ ಹಿಂದುಸ್ತಾನವೊಂದು ಪರಿಹಾರೋಪಾಯ ಮುಂದೊಡ್ಡಿದೆ. ಹಿಂದುಸ್ತಾನದಲ್ಲಿ ಪ್ರಚಲಿತವಾಗಿರುವ ಯೋಗ್ಯತೆ ಮಾನವ ಸಮಾಜದ ಇತರೇತರ ವರ್ಗಗಳಿಗೆ ಕೊಡಲಾಗಿರುವ ಸ್ಥಾನಮಾನಗಳಲ್ಲಿ ವ್ಯಕ್ತವಾಗುತ್ತದೆ. ಇತರರನ್ನು ಕೊಲ್ಲುವದರ ಮೇಲೆಯೆ ಹೊಂದಿಕೊಂಡಿರುವ ಪರೋಪಜೀವಿಗಳಿಗೆ ಪರಮನೀಚ ಸ್ಥಾನವೀಯಲಾಗಿದೆ. ಆರ್ಥಿಕ ಸಾಮ್ರಾಜ್ಯವಾದ ಈ ಜಾತಿಗೆ ಸೇರಿದ್ದು. ಆ ಮೇಲೆ ಬರುವವರು ಉತ್ಪಾದನೆ ಮಾಡದೆ ಉಪಜೀವನ ಮಾಡುವ ಶೋಷಣಶೀಲ ಪ್ರಾಣಿಗಳು “ಲಾರ್ಡನಂತೆ ಕುಡಿದು ಮದವೇರಿದವರು.” ನಮ್ಮಲ್ಲಿ ಗೌರವ ಚಿಹ್ನವಲ್ಲ ಶ್ರೀಮಂತವರ್ಗ ಇದಕ್ಕೆ ಸೇರಿದ್ದು. ಅನಂತರದ ಮೆಟ್ಟಿಲೆಂದರೆ ಆರ್ಥಿಕ ಗುಂಪು—ವೈಶ್ಯ ಜಾತಿ. ಆದರೆ ಹಣವೇ ಪರಮೋಚ್ಚ ಸ್ಥಾನ ಗಳಿಸಿಕೊಡದು. ಅದರ ಮೇಲಿನೆರಡು ಗುಂಪುಗಳು ಸಾರ್ವಜನಿಕ ಸೇವಕರನ್ನೊಳಗೊಂಡಿವೆ—ಕ್ಷತ್ರಿಯರು ಜನತೆಯ ಅವಶ್ಯಕತೆಗಳನ್ನು ರಕ್ಷಿಸುತ್ತಾರೆ; ಬ್ರಾಹ್ಮಣರು ಸಂಸ್ಕೃತಿಯ ರಕ್ಷಕರಾಗಿದ್ದಾರೆ. ಈ ಯೋಗ್ಯತಾತಾರತಮ್ಯವನ್ನಿಟ್ಟುಕೊಂಡು ಹಿಂದುಸ್ತಾನ ಜಗತ್ತಿನ ದೂರದೂರ ಸ್ಥಾನಗಳಿಗೆ ವಿದ್ಯಾ-ಪ್ರಚಾರಕರನ್ನು ಬೀರಿತು. ಇದು ಸಾಂಸ್ಕೃತಿಕ ಚಂಚುಪ್ರವೇಶವಾಗಿದ್ದು ರಾಷ್ಟ್ರಗಳಲ್ಲಿ ಶಾಂತಿ ಸಾಮರಸ್ಯಗಳು ನೆಲೆಯೂರಲು ಕಾರಣವಾಯಿತು.

ಈ ಪದ್ಧತಿಯ ಕೆಳಗೆ ಸ್ವಾರ್ಥಲಾಲಸೆ ಜೀವನದ ಧ್ಯೇಯವಾಗಿದ್ದಿಲ್ಲ. ಸ್ವಾರ್ಥಸಂತೃಪ್ತಿಗೇ ಮಹತ್ವ ಕೊಟ್ಟರೆ ಆ ಪದ್ಧತಿಗೆ ಸುಖಸಂಮೋದ, ಹಕ್ಕುಗಳೇ ತಳಹದಿಯಾಗುತ್ತವೆ. ಬದಲಿಗೆ ನಾವು ಕರ್ತವ್ಯಗಳಿಗೆ ಮಹತ್ವವಿತ್ತರೆ ಆಗ ನಮ್ಮ ಜೀವನ ಆತ್ಮಸಂಯಮದ ಹಿಡಿತದಲ್ಲಿ ಬಂದು ನಮ್ಮ ಬೇಕುಗಳಿಗೊಂದು ಇತಿಮಿತಿ ಹಾಕಿದಂತಾಗುವದು. ಇದೇ ನಾಗರಿಕತೆಯ ಬುನಾದಿ. ಬಡವರ ಸೇವೆಗೇ ಸಮಾಜದಲ್ಲಿ ನಾವು ಸರ್ವೋತ್ತಮ ಸ್ಥಾನವೀಯಬೇಕು. ಹಾಗೆ ಮಾಡುವ ಮೂಲಕ ನಾವು ಹಿಂಸೆಯನ್ನು ದೂರೀಕರಿಸಬಲ್ಲೆವು. ಆಗ ಬೇರೆಯವರ ಮೇಲಿನ ನಮ್ಮ ಪ್ರಭಾವ ಭೀತಿಯನ್ನು ಆಧರಿಸಿರದೆ ನಮ್ಮ ಸೇವೆಯ ಪ್ರಶಂಸೆಯನ್ನೆ ಆಧರಿಸಿರುವದು. ಇದೇ ಶಕ್ತಿ ಹಿಂದುಸ್ತಾನದಲ್ಲಿ ಒಂದು ಕಾಲದಲ್ಲಿ ಇತ್ತು ಮತ್ತು ಇಂದಿಗೂ ಅದು ಅದನ್ನು ಪಡೆಯಬಲ್ಲದು. ಈ ಶಕ್ತಿ ಪರಸ್ಪರ ಆದರ ಗೌರವಗಳ ಶಕ್ತಿ. ಅದು ಸಂಸ್ಕೃತಿಗಳ ಏಕತೆ ಮತ್ತು ಜಾಗತಿಕ ಶಾಂತಿಗೆ ದಾರಿ ತೋರಬಲ್ಲದು.

ಜೆ. ಸಿ. ಕುಮಾರಪ್ಪ

ಆಹಾರ ಬಿಕ್ಕಟ್ಟು

ಆಹಾರ ಪರಿಸ್ಥಿತಿಯನ್ನು ಎದುರಿಸಲು ಮಹಾತ್ಮಾ ಗಾಂಧಿಜಿಯವರು “ತಮ್ಮ ಗೆಳೆಯರು ಸೂಚಿಸಿರುವ ಕೆಲ ಉಪಾಯಗಳೆಂದು ಈ ಕೆಳಗಿನಂತೆ ವಾಯಿಸರಾಯರಿಗೆ ಫೆ. ೨೧ ಕ್ಕೆ ಪತ್ರ ಬರೆದಿದ್ದಾರೆ—

ವಿಧಾಯಕ ಕಾರ್ಯ ಮಾಡಲು ಹಿಂದೀ ಸೈನ್ಯಕ್ಕೆ ಈಗೀಗ ಅಪೂರ್ವ ಸಂಧಿಯನ್ನು ಒದಗಿಸಿಕೊಡಬೇಕು. ಅವರಿಗೆ ಸಂಚಾರ ಸ್ವಾತಂತ್ರ್ಯ ಕೊಡಬೇಕು. ಭಾವಿಗಳನ್ನು ಅತ್ಯಗತ್ಯವಾಗಿ ತೆಗೆಯಬೇಕಾಗಿರುವ ಸ್ಥಳಗಳಿಗೆ ಅವರನ್ನು ಕಳಿಸಬೇಕು.

ಹೆಚ್ಚಿನ ಆಹಾರಕ್ಕಾಗಿ ಮೀನನ್ನು ಉಪಯೋಗಿಸಬೇಕು. ಭಾರತದ ಕರಾವಳಿಯಲ್ಲಿ ಮೀನು ಬೇಕಾದಷ್ಟು ದೊರೆಯುತ್ತದೆ. ಯುದ್ಧವೀಗ ಮುಗಿದಿದೆ. ಆಗ ಗಸ್ತಿ ಚಟುವಟಿಕೆಗಳನ್ನು ನಡೆಸುತ್ತಿದ್ದ ಚಿಕ್ಕಪುಟ್ಟ ಹಡಗಗಳು ಬೇಕಾದಷ್ಟಿವೆ. ಅವುಗಳಲ್ಲಿ ಹಿಂದೀ ನೌಕಾಪಡೆಯವರನ್ನು ನೇಮಿಸಿ ಮೀನುಗಾರಿಕೆ ಖಾತೆಯು ಎಲ್ಲ ಸಹಾಯವನ್ನೂ ಪಡೆಯಬೇಕು.

ಸಾರ್ವಜನಿಕ ಉದ್ಯಾನಗಳಲ್ಲೆಲ್ಲ ಕೂಡಲೇ ಕಾಯಿಪಲ್ಲೆ ಬೆಳೆಯಬೇಕು. ಎಂಬ ಆಜ್ಞೆ ಹೊರಡಬೇಕು. ಸೇನಾಖಾತೆಯವರನ್ನೇ ಈ ಕೆಲಸಕ್ಕೆ ನೇಮಿಸಬೇಕು.

ಸಹಕಾರಿ ಸಂಘ ಸಂಸ್ಥೆಗಳ ಮುಖಾಂತರ ಆಹಾರದ ಹಂಚುವಿಕೆ ನಡೆಯಬೇಕು.

ಬ್ರಿಟನ ಅಥವಾ ಬೇರೆ ರಾಷ್ಟ್ರಗಳಲ್ಲಿರುವ ತಮ್ಮ ಆಪ್ತೇಷ್ಟರಿಗೆ, ಗೆಳೆಯರಿಗೆ, ಆಹಾರದ ಪುಡಿಕೆಗಳನ್ನು ಕಳಿಸುವದನ್ನು ನಿಲ್ಲಿಸಬೇಕು. ಸೇಂಗಾ ಎಣ್ಣೆ ಮತ್ತು ಹಿಂಡಿಯನ್ನು ನಿರ್ಯಾತ ಮಾಡುವವನ್ನು ನಿಲ್ಲಿಸಿಬಿಡಬೇಕು.

ಸೈನ್ಯಖಾತೆಯ ವಶದಲ್ಲಿದ್ದ ಆಹಾರವನ್ನು ನಾಗರಿಕರಿಗಾಗಿ ಕೊಡುವಂತಾಗಬೇಕು. ಸೈನಿಕ, ನಾಗರಿಕರಲ್ಲಿ ಯಾವ ಭೇದಭಾವವನ್ನೆಣಿಸಬಾರದು.

ನೌಕರ ಮತ್ತು ಸಾರ್ವಜನಿಕರಲ್ಲಿಯ ಲಂಚಗುಳಿತನ ಹಾಳಾಗಿ ಪ್ರಾಮಾಣಿಕ ವರ್ತನೆ ಬೆಳೆಯದಿರುವ ಹೊರತು, ಆಹಾರ ಪರಿಸ್ಥಿತಿಯ ಬಗ್ಗೆ ನಿರಾಶರಾಗದಿರಿ, ಹೆಚ್ಚಿನ ಆಹಾರ ಬೆಳೆಯಿರಿ ಎಂದು ಬರಿ ಆಂದೋಲನ ಹೂಡಿದರೆ ಸಾಗದು.

ದೊರೆಯುವ ಶಕ್ತಿಯ ಉಪಯೋಗ

ಪ್ರಶ್ನೆ— ಗುಜರಾತದ ಅನೇಕ ಹಳ್ಳಿಗಳಲ್ಲಿ ಹಿಟ್ಟು ಬೀಸುವ ಸಾವಿರಾರು ಗಿರಣಿಗಳು ಪ್ರಾರಂಭವಾಗಿವೆ. ಈ ಗಿರಣಿಗಳನ್ನು ಅಲ್ಲಿಂದ ಕಿತ್ತಿ ಕೆರೆ, ಭಾವಿ, ನದಿಗಳಿಂದ ನೀರಾವರಿಗಾಗಿ ನೀರನ್ನೆತ್ತುವದಕ್ಕಾಗಿ ಉಪಯೋಗಿಸಬಹುದು. ಈ ಗಿರಣಿಗಳನ್ನು ಹಿಟ್ಟನ್ನು ಬೀಸುವದಕ್ಕಲ್ಲದೆ ಈ ಉಪಯುಕ್ತ ಕಾರ್ಯಕ್ಕಾಗಿಯೂ ಉಪಯೋಗಿಸುವದಕ್ಕಾಗಿ ಸರಕಾರದವರು ಮತ್ತು ಒಡೆಯರು ಮನವೊಲಿಸಬಾರದೇಕೆ?

ಉತ್ತರ— ಹಳ್ಳಿಗಳಲ್ಲಿ ಹಿಟ್ಟು ಬೀಸುವ ಗಿರಣಿಗಳು ಬಂದು ನಮ್ಮ ಅಸಹಾಯತೆಯ ಕೊನೆಯ ಮೆಟ್ಟಿಲನ್ನು ತೋರಿಸಿಕೊಟ್ಟವೆಂದು ನಾನು ಭಾವಿಸುತ್ತೇನೆ. ಬೀಸುವ ಗಿರಣಿಗಳನ್ನೆಲ್ಲ ಇಲ್ಲಿಯೆ ನಿರ್ಮಿಸಲಾಗುತ್ತಿದೆಂದು ನಾನು ಭಾವಿಸಿಲ್ಲ. ಸಾವಿರಾರು ಹಿಟ್ಟಿನ ಗಿರಣಿಗಳು ಹಳ್ಳಿಗಳಲ್ಲಿ ಪ್ರಾರಂಭವಾಗಿವೆಂದು ಸುದ್ದಿಗಾರರು ಸುಳ್ಳು ಹೇಳಿದ್ದಾರೆಂದು ನನಗೆ ಅನಿಸುತ್ತಿದೆ. ಇಡೀ ಭಾರತದಲ್ಲಿಯೆ ಇಷ್ಟು ಗಿರಣಿಗಳು ಇದ್ದಿರಲಿಕ್ಕಿಲ್ಲ. ಆದರೆ ಇದು ನಿಜವಾದದಿದ್ದರೆ ಮಾತ್ರ ನಮ್ಮ ಜನರ ಸೋಮಾರಿತನದ ಪರಮಾವಧಿ ದ್ಯೋತಕವಾಗುವದು. ಹಳ್ಳಿಗಳಲ್ಲಿ ಇಂಥ ಗಿರಣಿಗಳನ್ನೂ ಯಂತ್ರಗಳನ್ನೂ ಸ್ಥಾಪಿಸುವದೂ ಒಂದು ರೀತಿಯ ಅತಿಬುರುಕತನವೇ ಸರಿ. ಬಡವರಿಗೆ ಹಾನಿ ಮಾಡಿ ಈ ರೀತಿ ಹೆರವರ ಜೇಬು ತುಂಬುವದು ಸರಿಯೆ? ಒಂದು ಹೀನ ಗಿರಣಿಯಿಂದ ಸಾವಿರಾರು ಬೀಸುವ ಕಲ್ಲುಗಳಿಗೆ ಕೆಲಸವಿಲ್ಲದಂತಾಗಿ ಸಾವಿರಾರು ಹೆಮ್ಮಕ್ಕಳು ನಿರುದ್ಯೋಗಿಗಳಾಗುತ್ತಾರೆ. ಬೀಸುವ ಕಲ್ಲು ತಯಾರಿಸುವ ವಡ್ಡರಿಗೂ ಕೆಲಸವಿಲ್ಲದಂತಾಗುತ್ತದೆ. ಇದಲ್ಲದೆ ಈ ರೀತಿ ಪರಿಣಾಮಕಾರಿಯಾಗುವದಲ್ಲ. ಕ್ರಮೇಣ ಇದು ಇತರ ಕೈಗಾರಿಕೆಗಳನ್ನು ಬಲ ತೆಗೆದುಕೊಳ್ಳುವದು. ಕೈಗಾರಿಕೆಗಳ ಬೆನ್ನ ಹಿಂದೆ ಕಲಾಕೌಶಲ್ಯವೂ ನಷ್ಟವಾಗುವದು. ಹಳೆ ಕೈಗಾರಿಕೆಗಳು ಹೋಗಿ ಹೊಸವು ಬರುತ್ತಿದ್ದರೆ ಯಾರೂ ಅವನ್ನು ವಿರೋಧಿಸಲಾರರು. ಆದರೆ ಹಾಗಾಗುತ್ತಿರುವದಲ್ಲ. ಗಿರಣಿಗಳಿರುವ ಸಾವಿರಾರು ಹಳ್ಳಿಗಳಲ್ಲಿ ಜನರು ನಸುಕಿನ ಪ್ರಶಾಂತ ಸಮಯದಲ್ಲಿ ಬೀಸುವ ಕಲ್ಲಿನ ಇಂಪಾದ ಪದಗಳನ್ನು ಕೇಳುವ ಸುಖಕ್ಕೆ ಎರವಾಗುತ್ತದೆ.

ಪ್ರಸ್ತುತವನ್ನು ಗಮನಿಸೋಣ. ಸದ್ಯಕ್ಕೆ ಯಂತ್ರಗಳನ್ನು ಅಕಾರ್ಯಗಳಿಗಾಗಿ ಉಪಯೋಗಿಸುತ್ತಿರುವರೆಂದು ನಂಬಿದ ನಾನು ಈ ಯಂತ್ರಗಳು ತಮ್ಮ ಸದ್ಯದ ಕಾರ್ಯವನ್ನು ನಿರ್ವಹಿಸಿ ನೀರಾವರಿಯ ಸಲುವಾಗಿ ಕೆರೆ, ಬಾವಿ, ನದಿಗಳಿಂದ ನೀರನ್ನೆತ್ತುವಂತಾದರೆ ಅಷ್ಟೇ ಸಮಾಧಾನವಾದೀತೆಂದುಕೊಂಡಿದ್ದೇನೆ. ಈ ಕಾರ್ಯದಲ್ಲಿ ಸರಕಾರದ ಸಹಾಯ ಬೇಕೆಂದು ನಮ್ಮ ಸುದ್ದಿಗಾರನು ಹೇಳುತ್ತಾನೆ? ಇದು ಅವಶ್ಯಕವೆ? ಈ ಯಂತ್ರಗಳ ಒಡೆಯರು ಸ್ವಯಂಬುದ್ಧಿಯಿಂದ ತಮ್ಮ ಯಂತ್ರಗಳನ್ನು ಈ ಉಪಯುಕ್ತವಾದ ಮಹತ್ವದ ಕೆಲಸಕ್ಕೆ ನಿಯೋಜಿಸಲಾರರೆ? ಸರಕಾರದ ಒತ್ತಾಯವಿಲ್ಲದೆ ನಾವು ಏನನ್ನೂ ಮಾಡಲು ಸಿದ್ಧರಿಲ್ಲ ಎಂಬುವಷ್ಟರ ಮಟ್ಟಿಗೆ ನಾವು ನಿರಪೇತರಾಗಿದ್ದೇವೆಯೆ? ಅದೇನೇ ಇರಲಿ, ಈಗ ಕಾಣಿಸಿಕೊಳ್ಳುವ ಗಂಡಾಂತರದಿಂದ ಜನರನ್ನು ಪಾರು ಮಾಡಲು ದೊರೆಯುವ ಎಲ್ಲ ಶಕ್ತಿಯನ್ನು ವಿನಿಯೋಗಿಸಲು ಅವಶ್ಯವಿದ್ದ ಉಪಾಯಗಳನ್ನೆಲ್ಲ ಕೈಕೊಳ್ಳಬೇಕೆಂದು ನನ್ನ ದೃಢವಾದ ನಂಬಿಕೆಯಾಗಿದೆ.

ಪುಣೆ ಮೋ. ಕ. ಗಾಂಧಿ

೧—೩—೪೬

ಕರ್ನಾಟಕ

ಧಾರವಾಡ

ಗದಗಿನ ಶಿಕ್ಷಕರು ತಾ ೫ ಕ್ಕೆ ಅವಸರದ ಸಭೆ ಸೇರಿ ಪ್ರಾ[illegible] ಸಂಪಿನ ನೀತಿ ಹೋರಾಟದನ್ನು ನಿರ್ಧರಿಸಿದರು.

ಶ್ರೀ ಶಿವಪ್ಪ ಅಸೂರ ಶೆಟ್ಟರ ನಿಧನದಿಂದ ತೆರವಾದ ಹಾವೇರಿ ಮುನಸಿಪಲ್ ಸಭಾಸದಸ್ಥಳಕ್ಕೆ ಶ್ರೀ ನಾಗಪ್ಪ ಮಾಸೂರ ಅವರು ಅವಿರೋಧ ಆರಿಸಿ ಬಂದಿರುವರು.

ಇಲಾಖಾ ಪ್ರಾಥಮಿಕ ಶಿಕ್ಷಕ ಸಂಘದ ಅಧ್ಯಕ್ಷರ ಸಲಹೆ ಮೇರೆಗೆ ಧಾರವಾಡದ ಪ್ರಾಥಮಿಕ ಶಿಕ್ಷಕರು ತಾ ೫ ರಿಂದ ಪುನಃ ಸಂಪು ಪ್ರಾರಂಭಿಸಿದ್ದಾರೆ. ಊರಲ್ಲಿಯ ೩೦ ಶಾಲೆಗಳು ಮುಚ್ಚಿರುವವು ಅಂದು ಅವರು ಮೆರವಣಿಗೆ ಹೊರಟು ಬಿ ಎಸ್ ಪಾಟೀಲರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಕೊನೆವರೆಗೆ ಹೋರಾಡಲು ನಿರ್ಧರಿಸಿದರು.

ಜಿಲ್ಹಾ ಮ್ಯಾಜಿಸ್ಟ್ರೇಟರು ಯಮನೂರ ಉರುಸಿಗೂ ಚಿಕ್ಕ ಕುಂವತ್ತಿ ಜಾತ್ರೆಗೂ ಕಾಲರಾ, ಹಾಗೂ ನೀರಿನ ಅರಬಿನ ಮೂಲಕ ಪ್ರತಿಬಂಧ ಮಾಡಿದ್ದಾರೆ.

ಕರ್ನಾಟಕ ಕಾಲೇಜದಲ್ಲಿ ಹಳೆ ವಿದ್ಯಾರ್ಥಿಗಳ ಸಂಘವೊಂದು ಪ್ರಾರಂಭವಾಗಿದ್ದು ಪ್ರಿನ್ಸಿಪಾಲರಾದ ಆಲ್‌ಫಾನ್ಸೊ ಅವರು ಸದ್ಯಕ್ಕೆ ಅದರ ಹಿ[illegible].ರೂ ಪ್ರೊ. ಮಾಳವಾಡರು ಕಾರ್ಯದರ್ಶಿಗಳೂ ಆಗಿದ್ದಾರೆ.

ಹುಬ್ಬಳ್ಳಿಯ ಸುಪ್ರಸಿದ್ಧ ಪುರಾಣಿಕರಾದ ವೇ. ಮೂ. ಭೀಮಾಚಾರ್ಯ ಪುರಾಣಿಕರವರು ತಾ ೩ ನೇ ದಿನ ವೈಕುಂಠವಾಸಿಗಳಾದರು.

ಹಾವೇರಿ ರಾಷ್ಟ್ರ ಸೇವಾದಲದವರು ತಾ ೨೬ ನೇ ದಿನ ಶ್ರೀ ಬೆಂಗೇರಿ ಹುಚ್ಚರಾಯರ ಅಧ್ಯಕ್ಷತೆಯಲ್ಲಿ ಕರ್ನಾಟಕ ಏಕೀಕರಣ ದಿನ ಆಚರಿಸಿದರು.

ಕರ್ಜಗಿಯಲ್ಲಿ ತಾ ೨೪ ರಾತ್ರಿ ಮಾಮಲೇದಾರರೂ ಅಬಕಾರಿ ಇನಸ್ಪೆಕ್ಟರರೂ ಮಲ್ಲಾರೆಪ್ಪ ಮಾಳದಕರ ಅವರ ಮನೆಗೆ ಮುತ್ತಿಗೆ ಹಾಕಿ ಅಲ್ಲಿ ಜೂಜಾಡುತ್ತಿದ್ದ ೧೪ ಜನರನ್ನು ಬಂಧಿಸಿ ಅಲ್ಲಿ ಸಿಕ್ಕ ೩೫೬ ರೂ ಜಪ್ತ ಮಾಡಿದರು.

ಹುಬ್ಬಳ್ಳಿಯ ಸ್ಕೂಲ ಬೋರ್ಡಿನವರು ಪ್ರಾಥಮಿಕ ಶಿಕ್ಷಕರ ಪಗಾರ ಸ್ಕೇಲಿನ ಪುನರ್ವಿಚಾರಣೆಯ ಬೇಡಿಕೆಯು ನ್ಯಾಯವಾಗಿದ್ದು ಅದನ್ನು ಮಂಜೂರ ಮಾಡಲು ಸರಕಾರದವರನ್ನು ಕೇಳಿಕೊಳ್ಳಬೇಕೆಂದು ಮುನಸಿಪಾಲಿಟಿಗೆ ವಿನಂತಿಸಿದ್ದಾರೆ.

[illegible]ವಾಡ ತಾಲೂಕ ರೈತ ಪರಿಷತ್ತು ಗರಗದಲ್ಲಿ [illegible] ಭ ದಿವಾಕರರ ಅಧ್ಯಕ್ಷತೆಯಲ್ಲಿ ಸಾಂಗವಾಗಿ [illegible]ಂಗ್ರೆಸದಲ್ಲಿ ವಿಶ್ವಾಸ ಪ್ರದರ್ಶನ, ಬರಗಾಲ ನಿವಾರಣೋಪಾಯ ಕೈಕೊಳ್ಳಲು ಸರಕಾರಕ್ಕೆ ವಿನಂತಿಸುವದು, ಡೋಲ ಪ್ರಾರಂಭಿಸಲು ಕೇಳುವದು, ತಗಾಯಿ ಮೊದಲಾದ ವ್ಯವಸ್ಥೆ ಕೈಕೊಳ್ಳಲು ಬೇಡುವದು ಮೊದಲಾದ ಠರಾವುಗಳು ಪಾಸಾದವು. ಶ್ರೀ ಪಾಟೀಲ ಕಲ್ಲನಗೌಡರು ಪರಿಷತ್ತು ಉದ್ಘಾಟಿಸಿದರು.

ಹುಬ್ಬಳ್ಳಿ ಹೊಸ ಕಾಟನ್ ಮಾರ್ಕೆಟದಲ್ಲಿ ಅಂಚೆ ಖಾತೆಯವರು ತಾ ೧ ರಿಂದ ಸಬ್ ಪೋಸ್ಟ ಆಫೀಸ ಪ್ರಾರಂಭಿಸಿರುವರು.

ತಾ. ೪ ನೇ ದಿನ ಹುಬ್ಬಳ್ಳಿ ರೇಲ್ವೆ ಕೆಲಸಗಾರರು ಸಭೆ ಸೇರಿ ಸೀದಾ ಕಡಿಮೆ ಮಾಡಿದ್ದನ್ನು ನಿಷೇಧಿಸಿ ಮೊದಲಿನಂತೆ ಪುನಃ ಸೀದಾ ಕೊಡಬೇಕು ಇಲ್ಲವೆ ೭೫ ರೂ. ತುಟ್ಟಿ ಭತ್ತೆ ಕೊಡಬೇಕೆಂದು ಕೇಳಿಕೊಂಡರು.

ಮೋಟೆಬೆನ್ನೂರಲ್ಲಿ ತರುಣರ ಸಭೆ ಸೇರಿ ತರುಣ ಸಂಘ ಸ್ಥಾಪಿಸಲ್ಪಟ್ಟಿರುವದು. ಶ್ರೀ ಶಿವಬಸಪ್ಪ [illegible]ಳ್ಳಾರಿಯವರು ಅಧ್ಯಕ್ಷರೂ ಶ್ರೀ ಬಸಪ್ಪ ಗಾಣ[illegible]

ಸಾಂಗಲಿ ವಿಧಿ ಮಂಡಳ ಲೋಕನಿಯುಕ್ತ [illegible]ಭಾಸದರು ಮಾರ್ಚ ಕೊನೆಯ ವಾರದಲ್ಲಿ ದಕ್ಷಿಣ ಸಂಸ್ಥಾನ[illegible] ವಿಧಿ ಮಂಡಳಗಳ ಲೋಕನಿಯುಕ್ತ ಸಭಾಸದರ ಸಮ್ಮೇಲನ ಜರುಗಿಸಲು ಯೋಚಿಸಿದ್ದಾರೆ. ಈ ಸಮ್ಮೇಲನದಲ್ಲಿ ಭಾವೀ ಘಟನಾ ಸಮಿತಿಗೆ ಲೋಕನಿಯುಕ್ತರನ್ನೆ ಕಳಿಸಲು ಬೇಡುವದು, [illegible]

ಬೆಳಗಾವಿ

ಪ್ರಾಥಮಿಕ ಶಿಕ್ಷಕರು ತಮ್ಮ ಬೇಡಿಕೆ ಮಾನ್ಯವಾಗುವ ವರೆಗೆ ಸಂಪು ಸಾಗಿಸಲು ನಿರ್ಧರಿಸಿ ಪುನಃ ಸಂಪು ಪ್ರಾರಂಭಿಸಿರುವರು. ಜಿಲ್ಹೆಯಲ್ಲಿ ಒಟ್ಟು ೨೦೦೦ ಶಿಕ್ಷಕರು ಸಂಪು ಹೂಡಿದ್ದುದು ತಿಳಿಯುತ್ತದೆ.

ದೇ. ಭ. ಗಂಗಾಧರರಾಯರು ಕೆಮ್ಮು ಹಾಗು ಜ್ವರದಿಂದ ಅಸ್ವಸ್ಥರಿದ್ದು ಅಮಳನೇರದಿಂದ ಡಾ ಮ್ಹಸಕರರು ಅವರ ಶುಶ್ರೂಷೆಗಾಗಿ ಬಂದಿದ್ದಾರೆ. ಪ್ರಕೃತಿ ಸುಧಾರಿಸುತ್ತಿದೆ.

ತಾ. ೧ ನೇ ದಿನ ಬೆಳಗಾವಿ ಮಾರುತಿ ಗುಡಿಯಲ್ಲಿ ಶ್ರೀ ಶಂಕರರಾವ ದೇವ ಅವರು ಭಾಷಣ ಮಾಡುತ್ತ ಸದ್ಯದ ರಾಜಕೀಯ ಪರಿಸ್ಥಿತಿ ಅಲ್ಪದರಲ್ಲಿ ವಿವರಿಸಿ ಕಾಂಗ್ರೆಸ್ಸಿಗೇ ಯಾಕೆ ಮತ ಕೊಡಬೇಕೆಂಬುದನ್ನು ತಿಳಿಸಿ ಹೇಳಿದರು.

ಜಿಲ್ಹಾ ಮ್ಯಾಜಿಸ್ಟ್ರೇಟರು ತಾ. ೧ ಎಪ್ರಿಲದಿಂದ ಜಿಲ್ಹೆಯಲ್ಲೆಲ್ಲ ಅವಲಕ್ಕಿ ಲಾಯಸೆನ್ಸ ಹುಕುಮ ಮಾಡಿರುವರು. ಅವಲಕ್ಕಿ ತಯಾರಿಸುವವರು ಜಿಲ್ಹಾ ಮ್ಯಾಜಿಸ್ಟ್ರೇಟರ ಅಪ್ಪಣೆ ಪಡೆದುಕೊಳ್ಳಬೇಕು.

ಚಿಕ್ಕೋಡಿ ತಾಲೂಕ ಕನುತ್ಯಾನಹಟ್ಟಿಯ ಜನರು ಪ್ರಾಥಮಿಕ ಶಿಕ್ಷಕರ ಸಂಪಿಗೆ ಸಹಾನುಭೂತಿ ತೋರಿಸಿ ೪೫ ರೂ. ಕೂಡಿಸಿ ಕೊಟ್ಟಿರುವರು.

ವಿಜಾಪುರ

ವಿಜಾಪುರ ಪ್ರಾಥಮಿಕ ಶಿಕ್ಷಕರೆಲ್ಲ ತಾ ೪ ರಿಂದ ಸಂಪು ಪ್ರಾರಂಭಿಸಿದ್ದರಿಂದ ಶಾಲೆಗಳೆಲ್ಲ ಮುಚ್ಚಿವೆ.

ಶ್ರೀ ಯಲಗೂರೇಶನ ಕಾರ್ತಿಕ ಉತ್ಸವವು ತಾ ೨೩ ನೇ ದಿನ ಸಾಂಗವಾಯಿತು. ೧॥ ಸಾವಿರ ವರೆಗೆ ಜನರು ಕೂಡಿದ್ದರು. ಆದರೆ ಮುಖ್ಯವಾಗಿ ಆಹಾರ ಕೊರತೆಯುಂಟಾಯಿತು. ಉತ್ಸವದಲ್ಲಿ ತಾ ೨೪ ನೇ ದಿನ ಮುಂಜಾನೆ ಶ್ರೀ ಬುರ್ಲಿ ಬಿಂದುಚಾರ್ಯರ ಹಸ್ತದಿಂದ ರಾಷ್ಟ್ರಧ್ವಜವಂದನೆ ನಡೆದು ಶ್ರೀಯುತರಾದ ಪಬ್ಬು, ಜಹಾಗೀರದಾರ ಮೊದಲಾದವರ ಭಾಷಣಗಳಾದವು. ಸಂಜೆಗೆ ಶ್ರೀಯುತರಾದ ಶಹಾ, ಸಜ್ಜನರವರೂ ಬಂದು ಭಾಷಣ ಮಾಡಿದರು.

ಗಲಗಲಿ ಭಾಗದಲ್ಲಿ ಡೋಲಿನ ಜನರ ಸಂಖ್ಯೆಯನ್ನು ೧೭೦ ರಷ್ಟು ಕಡಿಮೆ ಮಾಡಿದ್ದರಿಂದ ಬಡವರು ಗೋಳಾಡಹತ್ತಿರುವರು.

ಜಿಲ್ಹಾ ಹರಿಜನ ಸೇವಕ ಸಂಘದ ಕಟ್ಟಡ ನಿಧಿಗೆ ದೇಸಾಯಿ ಪಾಂಡುರಂಗರಾಯರ ಮಕ್ಕಳಾದ ಶ್ರೀ ಶಂಕರರಾವ ದೇಸಾಯಿ ಆಯ ಸಿ ಎಸ್ ಅವರು ೧೦೦೧ ರೂ. ಕಾಣಿಕೆಯಿತ್ತಿದ್ದಾರೆ.

ವಿಜಾಪುರ ದರಬಾರ ಹಾಯಸ್ಕೂಲಿನಲ್ಲಿ ದಿವಂಗತ ಹಣಮಂತರಾವ ಕೌಜಲಗಿ ಅವರ ಹೆಸರಿನಿಂದ ಚರಖಾ ವರ್ಗವು ತಾ ೨೬ ನೇ ದಿನ ಕಾಕಾ ಕಾರಖಾನೀಸರ ಹಸ್ತದಿಂದ ತೆರೆಯಲ್ಪಟ್ಟಿತು. ೧೮ ವಿದ್ಯಾರ್ಥಿಗಳು ೭ ವಿದ್ಯಾರ್ಥಿನಿಯರು ಶಿಕ್ಷಣ ಪಡೆಯುತ್ತಿರುವರು.

ಪಟ್ಟದಕಲ್ಲ ಬಸವೇಶ್ವರ ಜಾತ್ರೆಯು ತಾ. ೧೬ ನೇ ದಿನ ನಡೆಯುವದು. ಲಾವಣಿ, ನಾಟಕ, ಹಲಿಗೆ ಮಜಲು ಕಾರ್ಯಕ್ರಮ ಏರ್ಪಡಿಸಲ್ಪಟ್ಟಿವೆ.

ಉತ್ತರ ಕನ್ನಡ

ಸಿರ್ಸಿಯ ಸುಪ್ರಸಿದ್ಧ ವ್ಯಾಪಾರಿಗಳಾದ ಶ್ರೀ ವಾಸುದೇವರಾವ ಧಾಕಪ್ಪನವರು ನಿಧನ ಹೊಂದಿದ್ದರಿಂದ ಜವಳಿ ವರ್ತಕರೂ ಅಡಿಕೆ ವ್ಯಾಪಾರಿಗಳೂ ಸಭೆ ಸೇರಿ ದುಃಖ ಪ್ರದರ್ಶಿಸಿದರು.

ಭಟಕಳ ಬಂದರವನ್ನು ಮೈಸೂರು ಸರಕಾರದವರು ತಮ್ಮ ಕಡೆಗೆ ಬೇಡಿರುವರೆಂದು ತಿಳಿಯುತ್ತದೆ.

ಜಿಲ್ಹಾ ರೈತ ಸಂಘದ ಅಧ್ಯಕ್ಷರಾದ ಶ್ರೀ ಹೊರಾ ನಾಯ್ಕರರು ಪ್ರಾಥಮಿಕ ಶಿಕ್ಷಕರ ಬೇಡಿಕೆಗಳು ನ್ಯಾಯವಾಗಿವೆಯೆಂದು ಉಲ್ಲೇಖಿಸಿ ಅವರ ಸಂಪಿಗೆ ಸಂಘದ ಬೆಂಬಲವಿತ್ತಿದ್ದಾರೆ.

ಶ್ರೀ ಧಾರವಾಡ ಯಲಗುರ್ದರಾಯರು
ಬಾಗಲಕೋಟೆ ನಗರ ಸಭಾಧ್ಯಕ್ಷರು



ಇವರು ಬಾಗಲಕೋಟೆಯ ಸುಪ್ರಸಿದ್ಧ ವಕೀಲರೂ ಸಾಹಿತಿಗಳೂ ಸಾರ್ವಜನಿಕ ಧುರೀಣರೂ ಆಗಿದ್ದು ಇತ್ತೀಚಿನ ನಗರ ಸಭೆಯಲ್ಲಿ ಸರ್ವಾನುಮತದಿಂದ ಅಧ್ಯಕ್ಷರಾಗಿ ಆರಿಸಿ ಬಂದರು.

ಸೀದಾ ಅಂಗಡಿಗಳಲ್ಲಿ ಅಳತೆಯು ಸರಿಯಾಗಿರುವದಿಲ್ಲೆಂದು ಸಿರ್ಸಿಯ ನಾಗರಿಕರ ದೂರು ಇದೆ. ಮೇಲಾಗಿ ಇತ್ತೀಚಿಗೆ ಪಾಲಿಶ ಮಾಡದ ಅಕ್ಕಿ ಕೊಡಹತ್ತಿದ್ದಾರೆ.

ಮುಂಡಗೋಡದ ಶ್ರೀ ನಾಗೇಶರಾವ ಗೋಕರ್ಣ ಅವರು ನಿಧನಹೊಂದಿ ತಾಲೂಕು ಒಬ್ಬ ಬಡವರ ಸಹಾಯಕರನ್ನು ಕಳೆದುಕೊಂಡಂತಾಯಿತು.

ಹಳಿಯಾಳದ ಶ್ರೀ ಅಪ್ಪುರಾವ ಫಡನೀಸ ಹಾಗು ಶ್ರೀ ಶಂಕರ ಗಿರಿ ಅವರು ತಾ. ೫ನೇ ದಿನ ಖಾನುವಳ್ಳಿಗೆ ಹೋಗಿ ಅಲ್ಲಿ ೧॥ ವರ್ಷದಿಂದ ನಡೆದು ಬಂದ ಬಣಗಳನ್ನು ಮುರಿದು ಒಕ್ಕಟ್ಟು ಮಾಡಿದರು.

ಬಳ್ಳಾರಿ

ಶಾಸನ ಸಭೆಗೆ ಕಾಂಗ್ರೆಸದ ಹುರಿಯಾಳುಗಳಾಗಿದ್ದ ಶ್ರೀ ಎಚ್ ಸೀತಾರಾಮ ರೆಡ್ಡಿ ಹಾಗು ಶ್ರೀ ಬೂದಿಹಾಳ ಅನಂತಾಚಾರ್ಯರು ಅವಿರೋಧ ಆರಿಸಿ ಬಂದಿರುವರು. ಬಳ್ಳಾರಿ ತಾಲೂಕಿನ ಸ್ತ್ರೀ ಸ್ಥಳಕ್ಕೆ ಕಾಂಗ್ರೆಸಿನಿಂದ ಶ್ರೀಮತಿ ಜಯಲಕ್ಷ್ಮಿಬಾಯಿಯವರು ನಾಮಪತ್ರ ಸಲ್ಲಿಸಿದ್ದು ಅವರಿಗೆ ಶ್ರೀಮತಿ ಅಲ್ಲಂ ಸುಮಂಗಲಮ್ಮ ಅವರು ಎದುರಾಳಿಗಳಾಗಿರುವರು.

ಜಿಲ್ಹೆಯ ಮುಸಲ್ಮಾನ ಮತದಾರ ಸಂಘದಿಂದ ಶ್ರೀ ಅಬ್ದುಲ್ ರಾವುಫ ಸಾಹೇಬರು ಶಾಸನ ಸಭೆಗೆ ಅವಿರೋಧ ಆಯ್ಕೆ ಹೊಂದಿದ್ದಾರೆ.

ಹಡಗಲಿ ತಾಲೂಕ ಹೊಳಲುಗ್ರಾಮದ ಬೋರ್ಡ ಹಾಯರ ಎಲಿಮೆಂಟರಿ ಶಾಲೆಯ ಮತ್ತು ಉಪಾಧ್ಯಾಯರ ಸಂಘದ ವಾರ್ಷಿಕೋತ್ಸವವು ಅನುಕ್ರಮವಾಗಿ ಜಿ ನಾರಾಯಣಶೆಟ್ಟರು ಹಾಗು ಶ್ರೀ ಜಿ ಅನಂತಾಚಾರ್ಯರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ಶ್ರೀಯುತರಾದ ಚಿಕ್ಕಿ ಚನ್ನಪ್ಪ ಎಚ್ ಕೃಷ್ಣಾಚಾರ್ಯ, ಕೆ ಚನ್ನಬಸವನಗೌಡ ಮೊದಲಾದವರ ಭಾಷಣ, ವಿದ್ಯಾರ್ಥಿ ವಿದ್ಯಾರ್ಥಿನಿಯರ ನಾಟಕ, ಆಸನ, ಸೂರ್ಯನಮಸ್ಕಾರ ಮೊದಲಾದ ಕಾರ್ಯಕ್ರಮಗಳು ಜರುಗಿದವು.

ಅ. ಕ. ಏಕೀಕರಣ ಪ್ರಚಾರಕರಾದ ಶ್ರೀ ಶಿ ಪೆ ದೇಸಾಯಿಯವರು ಚಿಂತಕುಂಬಿ ಭಾಗದಲ್ಲಿ ಪ್ರಚಾರ ಕೈಕೊಂಡು ೭೫ ಸದಸ್ಯರನ್ನು ಮಾಡಿದ್ದಾರೆ.

ಹಿಂದುಸ್ಥಾನ ಹಾಗು ಪರದೇಶಗಳಲ್ಲಿ ಔದ್ಯೋಗಿಕ ಮತ್ತು ಕಲಾ ಸಂಬಂಧದ ಶಿಕ್ಷಣ ಹೊಂದಲು ಆರ್ಯಸಮಾಜದ ವಿದ್ಯಾರ್ಥಿಗಳಿಗೆ ಶ್ರೀ ಬಿ. ಜಿ. ಸತ್ಯನಾರಾಯಣ ಶೆಟ್ಟಿ ಬಳ್ಳಾರಿ ಅವರು ವರ್ಷಕ್ಕೆ ೨೦೦ ರೂ. ಸಹಾಯ ಮಾಡಲು ಮುಂದೆ ಬಂದಿದ್ದಾರೆ. ಇದಲ್ಲದೆ ಬಿಜಪಾಡದ ಶ್ರೀ ಜುಂಡೂರ ವೆಂಕಟರಡ್ಡಿಯವರ ವರ್ಷ ೧೦ ಸಾವಿರದಂತೆ ೫೦ ಸಾವಿರ ರೂ. ನಂದ್ಯಾಲದ ಶ್ರೀ ಯಲಕೂರಿ ಮಲ್ಲಯ್ಯ ಶೆಟ್ಟಿಯವರು ಜೀವಾವಧಿ ೫೦೦ ರೂ. ಹಾಗು ಬೆಂಗಳೂರಿನ ವೈ. ನಂಜಯ್ಯ ಶೆಟ್ಟಿ ಮತ್ತು ಬಂಧುಗಳು ಪರದೇಶದಲ್ಲಿ ಇಬ್ಬರು ವಿದ್ಯಾರ್ಥಿಗಳ ಶಿಕ್ಷಣ ಖರ್ಚು ಕೊಡಲು ಒಪ್ಪಿರುವರು.

ಜಿಲ್ಹಾ ಕ್ಷಾಮನಿವಾರಣ ಸಮಿತಿಯವರು ಹತ್ತೀ ಕಾಳಿನ ನಿರ್ಯಾತ ಪ್ರತಿಬಂಧಿಸಬೇಕು, ಹಳ್ಳಿಗಳಲ್ಲಿಯ ಅಧಿಕೃತ ಅಂಗಡಿಗಳಿಗೆ ಆಹಾರ ಸಾಮುಗ್ರಿ ಸಕಾಲಕ್ಕೆ ಸಾಕಷ್ಟು ಒದಗಿಸಬೇಕು ಎಂದು ಸರಕಾರಕ್ಕೆ ಕೇಳಿಕೊಂಡಿದ್ದಲ್ಲದೆ ಬಿನ್ನಿ ಕಂಪನಿಯಿಂದ ಕಂಬಳಿ ತರಿಸಿ ಮಾರಿ ಅದರ ಲಾಭವನ್ನು [illegible]

ಸಂಸ್ಥಾನಗಳು

ಕರ್ನಾಟಕ ಸ[illegible] ಶಾಖೆಯು ಹಾಯರೆಕ್ಷರದ ಸಂಪೆ ಮೇರೆಗೆ ಕೊಲ್ಹಾಪುರದ ಬ್ರಹ್ಮಪುರಿಯಲ್ಲಿ ನವ್ಹೆಂಬರದಿಂದ ಉತ್ಖನನ ಕಾರ್ಯ ಪ್ರಾರಂಭವಾಗಿ ಈಗ ಅಗೆದ ತಗ್ಗು ೨೬ ಫೂಟು ಆಳಕ್ಕೆ ಮುಟ್ಟಿದೆ. ಅದರಲ್ಲಿ ಮುಸಲ್ಮಾನ, ಯಾದವ, ಶಿಲಾಹಾರ, ಮಧ್ಯಯುಗೀನ ಮತ್ತು ಆಂಧ್ರ ಕಾಲಗಳ ಪದರುಗಳೂ ಗೋಡೆಗಳೂ ಹೊರಟಿವೆ.

ಇತ್ತೀಚೆಗೆ ಭಾರಿ ಬಿರುಗಾಳಿ ಬೀಸಿ ಮಳೆಯಾಗಿದ್ದರಿಂದ ಕುಂದಗೋಳ ಪೂರ್ವಭಾಗದ ಶಿರೂರ ಸಂಶಿ, ಹೊಸಳ್ಳಿ, ಬುರಾಪುರಗಳಲ್ಲಿ ಹತ್ತಿ ಬೆಳೆಗೆ ಹಾನಿ ಸಂಭವಿಸಿದೆ.

ಮ.ಹಾಲಿಂಗಪುರ ಮುನಸಿಪಾಲಿಟಿಯವರು ಸೇವಾದಲಕ್ಕೆ ಪ್ರತಿವರ್ಷ ೫೦ ರೂ. ಗ್ರಾಂಟ ಕೊಡಲು ನಿರ್ಧರಿಸಿದ್ದಾರೆ.

ಕ್ಯಾ. ರಶೀದರ ಶಿಕ್ಷೆ ನಿಷೇಧಿಸಲು ರಾಯಚೂರ ಸರಕಾರಿ ಹಾಯಸ್ಕೂಲಿನಲ್ಲಿ ವಿದ್ಯಾರ್ಥಿಗಳು ಊರೆಲ್ಲ ಮೆರವಣಿಗೆ ತೆಗೆದಿದ್ದರು.

ಜಮಖಂಡಿಯ ಶ್ರೀ ಸಾಬಡೆಯವರ ಮೇಲೆ ಪ್ರಯೋಗಿಸಲಾದ ನೋಟೀಸಿನ ಬಗ್ಗೆ ಶ್ರೀ ಖೇರರು ಅವರಿಗೆ ಬರೆದ ಒಂದು ಪತ್ರದಲ್ಲಿ ಆಶ್ಚರ್ಯ ವ್ಯಕ್ತ ಮಾಡಿ, ಪ್ರಜೆಗಳ ಚಳವಳಿ ಬಗ್ಗು ಬಡಿಯಲು ಸರಕಾರವು ನಿರ್ಧರಿಸಿದಂತೆ ತೋರುತ್ತದೆ. ಒಕ್ಕಟ್ಟಿನಿಂದ ಎಲ್ಲರೂ ಪ್ರತಿಭಟಿಸಬೇಕು ಎಂದು ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ.

ದಕ್ಷಿಣದ ಸಂಸ್ಥಾನಗಳ ಒಗ್ಗೆ ಸಂಯುಕ್ತ ಹಾಯಕೋರ್ಟು ತಾ ೧ ರಿಂದ ಕೊಲ್ಹಾಪುರದಲ್ಲಿ ಪ್ರಾರಂಭವಾಯಿತು. ಸರ್ ಎಚ್ ದಿವಾಟಿಯಾ ಅವರು ಮುಖ್ಯ ನ್ಯಾಯಾಧೀಶರಾಗಿಯೂ ರಾ ಬ ವ್ಹಿ ಎಸ್ ದೇವ ಹಾಗು ಶ್ರೀ ನಾಡಕರ್ಣಿ ಅವರು ನ್ಯಾಯಾಧೀಶರಾಗಿಯೂ ನೇಮಕ ಹೊಂದಿದ್ದಾರೆ.

ತಾ ೪ ನೇ ದಿನ ಕಸ್ತೂರಬಾ ದಿನ ನಿಮಿತ್ತ ರಾಯಚೂರಲ್ಲಿ ಶ್ರೀಮತಿ ಮಹಾದೇವಮ್ಮ ಶಿವಾರರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಹೈದರಾಬಾದದಿಂದ ಬಂದ ಶ್ರೀಮತಿ ಜ್ಞಾನಕುಮಾರಿ ಹೆಡ್ಡಾ ಅವರ ಭಾಷಣವಾಯಿತು.

ಶ್ರೀ ವಿಷ್ಣುತೀರ್ಥರ ಆರಾಧನೆಯು ತಾ. ೨೮ ರಿಂದ ತಾ. ೩ ರ ವರೆಗೆ ಮಾದನೂರಲ್ಲಿ ವಿಜೃಂಭಣೆಯಿಂದ ನಡೆಯಿತು. ಮದ್ರಾಸ [illegible] ಮೈಸೂರ, ನಿಜಾಮ ಭಾಗಗಳಿಂದ ಸಾವಿರಾರು ಜನರು ಬಂದಿದ್ದರು.

ಮುಧೋಳದಲ್ಲಿಯ ಶಿಕ್ಷಕರು ತಮ್ಮದೊಂದು ಸಂಘ ಸ್ಥಾಪಿಸಿಕೊಂಡು [illegible] ಪ್ರಾಥಮಿಕ ಶಿಕ್ಷಕರ ಸಂಪಿಗೆ [illegible] ಮಾಡುವರು.

ಶಂಕರರಾವ ದೇವ ಅವರು ತಾ. ೨೮ ನೇ ದಿನ ಮುಧೋಳಕ್ಕೆ ಆಗಮಿಸಿ ಸರಕಾರದೊಡನೆ ಇನ್ನು ನಡೆಯುವ ಮಾತುಕತೆ ಸ್ವರಾಜ್ಯದಲ್ಲಿ ಫಲಿಸದೆ ಹೋದರೆ ಮತ್ತೊಂದು ಹೋರಾಟ ಪ್ರಾರಂಭವಾಗುವದೆಂದೂ ತಮ್ಮ ಭಾಷಣದಲ್ಲಿ ಹೇಳಿದರು.

ಸಾಂಗಲಿ ಗುಂಪಿನ ಸಂಸ್ಥಾನಿಕರು ಪಟವರ್ಧನ ಸಂಸ್ಥಾನಗಳ ಸಂಯುಕ್ತೀಕರಣ ಸಂಬಂಧದಲ್ಲಿ ಒಂದು ಯೋಜನೆ ಸಿದ್ಧಪಡಿಸಿದ್ದಾರೆ. ಶ್ರೀ ಶಂಕರರಾವ ದೇವ ಅವರು ಈ ಬಗ್ಗೆ ಸಾಂಗಲಿಗೆ ಬಂದು ಸಲಹೆಗಾರರಾದ ಡೇ ಅವರ ಭೆಟ್ಟಿ ತೆಗೆದುಕೊಂಡು ಹೋದರು.

ಮುಂಬಯಿ

ಕಾಂಗ್ರೆಸ ವರ್ಕಿಂಗ ಕಮಿಟಿಯ ಸಭೆಯು ಮಾರ್ಚ ೧೨ ನೇ ತಾರೀಕಿಗೆ ಮುಂಬಯಿಯಲ್ಲಿ [illegible].

ಇತ್ತೀಚೆಗೆ ಬಂಡು ಹೂಡಿದ್ದ ನಾವಿಕರ ವಿಚಾರಣೆಗೆ ನಾಲ್ಕು ವಿಚಾರಣೆ ಮಂಡಳಗಳು ಘಟಿತವಾಗಿ ಕಾರ್ಯ ಪ್ರಾರಂಭಿಸಿವೆ. ಈ ಮಂಡಳಗಳಲ್ಲಿ ಬಂಡು ಹೂಡದ ನಾವಿಕರ ಠಾಣೆಗೆ ಸಂಬಂಧಿಸಿದವರೊಬ್ಬರು ಅಧ್ಯಕ್ಷರಾಗಿಯೂ ಇಬ್ಬರು ಮೆಂಬರರಲ್ಲಿ ಒಬ್ಬರು ಮೇಜರ ದರ್ಜೆಯ ಹಿಂದೀ ಸೇನಾಧಿಕಾರಿಗಳೂ ಇರುವರು.

ಪ್ರಾಥಮಿಕ ಶಿಕ್ಷಕರ ಕನಿಷ್ಟ ಸಂಬಳವನ್ನು ಇದೇ ಫೆಬ್ರುವರಿ ಪಗಾರದಿಂದ ರೂ. ೧೫ ರಿಂದ ೨೦ ಕ್ಕೆ ಏರಿಸಬೇಕೆಂದೂ ನಗರಗಳಲ್ಲಿಯ ಶಿಕ್ಷಕರಿಗೆ ೫ ರೂ. ನಗರ ಭತ್ತೆ ಕೊಡಬೇಕೆಂದೂ ಸರಕಾರದ ಆಜ್ಞೆ ಹೊರಟಿವೆ.

ಇಲಾಖಾ ಪ್ರಾಥಮಿಕ ಸಂಘದ ಅಧ್ಯಕ್ಷರಾದ ಶ್ರೀ ದೊಂದೆಯವರು ಬೇರೆ ಬೇರೆ ಭಾಗಗಳ ಪ್ರಾಥಮಿಕ ಶಿಕ್ಷಕರ ಬಿನ್ನಹದ ಮೇರೆಗೆ ಸಂಪು ತಡೆಹಿಡಿದ ತಮ್ಮ ಮೊದಲಿನ ನಿರ್ಣಯ ಬದಲಾಯಿಸಿ, ತಾ ೨ ರಿಂದ ಪುನಃ ಸಂಪು ಪ್ರಾರಂಭ ಮಾಡಿದ್ದಾರೆ. ಈ ಸಂಬಂಧದ ನಿರ್ಣಯಗಳೆಲ್ಲ ಇನ್ನು ಮುಂದೆ ಮಧ್ಯವರ್ತಿ ಸಂಪಿನ ಕಮಿಟಿಯವರಿಂದ ಕೈಕೊಳ್ಳಲ್ಪಡುವವು.

ಮುಂಬಯಿ ಗವರ್ನರರು ಸಿಪಾಯಿ ನಾಮದೇವ ಜಾಧವನಿಗೆ ಸನದ ಅರ್ಪಿಸಲು ಅಹಮ್ಮದನಗರಕ್ಕೆ ಬಂದಾಗ ಬೇಲಾಪುರ ರೋಡ ಸಕ್ಕರೆ ಕಾರಖಾನೆಯಿಂದ ೮೦೦೦ ಜನರು ರಾವಸಾಹೇಬ ಪಟವರ್ಧನರ ನೇತೃತ್ವದಲ್ಲಿ ಆಹಾರ ಪರಿಸ್ಥಿತಿ ಬಗ್ಗೆ ಅಸಂತೋಷ ವ್ಯಕ್ತಪಡಿಸಲು ದವುಡು ತೆಗೆದುಕೊಂಡು ಹೋಗಿದ್ದರು. ಹಾದಿಯಲ್ಲಿ ಪೋಲೀಸರು ಅವರನ್ನು ತಡೆದರು. ಹಿಂದುಗಡೆ ಕಮೀಶನರರು ಕೆಲಸಗಾರರ ಶಿಷ್ಟಮಂಡಳ ಕರೆಸಿಕೊಂಡು ಅವರ ಬೇಡಿಕೆ ಕೇಳಿಕೊಂಡರು.

ವಡಾಲಾದಲ್ಲಿಯ (ಮುಂಬಯಿ) ಸರಕಾರಿ ಟಿಂಬರ ಸಾಲ್ವೇಜ ಡಿಪೋಕ್ಕೆ ತಾ ೨ ನೇ ದಿನ ಬೆಂಕಿ ಹತ್ತಿ ೨ ಲಕ್ಷ ರೂ. ಹಾನಿಯಾಗಿರುವದು.

ಲಂಡನದಲ್ಲಿಯ ಹಿಂದಿ ಕೂಲಿಕಾರ ಸಂಘದ ಕಾರ್ಯದರ್ಶಿಗಳಾದ ಸರದಾರ ಶಹಾನವರು ಒಂದು ತಿಂಗಳಿಂದ ಅದೃಶ್ಯರಾಗಿರುವರೆಂದು ಸುದ್ದಿ ಬಂದಿದೆ.

ದಕ್ಷಿಣ ಆಫ್ರಿಕಾ ಹಿಂದಿ ಕಾಂಗ್ರೆಸದ ೫ ಜನರು ಕಾಂಗ್ರೆಸ ಅಧ್ಯಕ್ಷರಾದ ಅಝಾದರನ್ನೂ ಮಹಾತ್ಮಾ ಗಾಂಧಿಯವರನ್ನೂ ಕಂಡು ದಕ್ಷಿಣ ಆಫ್ರಿಕೆಯಲ್ಲಿ ಹಿಂದೀಯರ ವಿರುದ್ಧ ಬಂದ ಹೊಸ ಮಸೂದೆ ಬಗ್ಗೆ ಚರ್ಚೆ ಮಾಡಿಕೊಂಡು ಹೋಗಲು ಹಿಂದುಸ್ತಾನಕ್ಕೆ ಬಂದಿದ್ದಾರೆ.

ಎಪ್ರಿಲ ಮೊದಲನೇ ವಾರದಲ್ಲಿ ಗಾಂಧೀಜಿಯವರು ಮಹಾಬಳೇಶ್ವರಕ್ಕೆ ಹೋಗಿ ೫-೬ ವಾರ ಅಲ್ಲಿ ಇದ್ದು ಪಂಚಗಣಿಗೆ ಬರುವರು.

ಶಿಕ್ಷಣ ಸಲಹೆಗಾರರಾದ ಸರ್ ಆಯ ಎಚ್ ಟಾಂಟಿನರು ಅ ಪ್ರೆ ಪ್ರತಿನಿಧಿಗಿತ್ತ ಸಂದರ್ಶನದಲ್ಲಿ ಪ್ರಾಥಮಿಕ ಶಿಕ್ಷಕರ ಸಂಪಿನ ಬಗ್ಗೆ ಶಕ್ಯವಿದ್ದ ಪರಿಹಾರವನ್ನೆಲ್ಲ ಈಗ ಕೊಟ್ಟಿದೆ. ಯಾವ ಶಿಕ್ಷಕನಿಗೂ ಈಗ ೩೫ ರೂಪಾಯಿಗಿಂತ ಕಡಿಮೆ ಪಗಾರ ಸಿಗುವದಿಲ್ಲ ಸಮಗ್ರ ಸಂಪಿನ ಉಪಾಯ ಜುಲುಮೆಯದಾಗಿರುವದು ಅದರಿಂದ ಹೆಚ್ಚು ಪಗಾರ ಸಿಗದು. ಶಿಕ್ಷಕರು ಜಾಣರಾಗಿ ಕೆಲಸಕ್ಕೆ ಹಾಜರಾಗಬೇಕು ಎಂದು ಹೇಳಿದರು.

ಸಿಂಧ

ಕರಾಚಿಯಲ್ಲಿ ಹಿಂದಿ ಸೈನಿಕರು ನಾವಿಕ ಬಂಡುಗಾರರ ಮೇಲೆ ಗುಂಡು ಹಾರಿಸಲು ನಿರಾಕರಿಸಿದ್ದರಿಂದ ಅವರನ್ನು ನಿಶ್ಶಸ್ತ್ರಗೊಳಿಸಿ ಮಾಲೀರದಲ್ಲಿ ನಿರ್ಬಂಧದಲ್ಲಿಡಲಾಗಿದೆಯೆಂದು ಪ್ರಕಟವಾದ ಸುದ್ದಿ ನಿಜವಿರುವದಿಲ್ಲೆಂದು ಮಿಲಿಟರಿ ಅಧಿಕಾರಿಗಳು ಪ್ರಕಟಿಸಿದ್ದಾರೆ.

ಸಿಂಧ ಶಾಸನಸಭೆಯ ಆಯವ್ಯಯ ಅಧಿವೇಶನವು ಮಾರ್ಚ ೧೨ ಕ್ಕೆ ಪ್ರಾರಂಭವಾಗಲಿದೆ. ೧೦ ನಿಲುವಳಿ ಸೂಚನೆಗಳು ಬಂದಿದ್ದು ವಿಶೇಷವಾಗಿ ಅವು ಗೃಹಖಾತೆಗೆ ಸಂಬಂಧಿಸಿವೆ.

ಸಕ್ಕರದಲ್ಲಿ ಜವಾಹರಲಾಲರು ಚುನಾವಣೆ ಪ್ರಚಾರಕ್ಕೆ ಬಂದಾಗ ಮ್ಯುನಿಸಿಪಾಲಿಟಿಗೆ ಸಂಬಂಧಿಸಿದ ಸ್ಥಳದಲ್ಲಿ ಭಾಷಣ ಮಾಡಿದ್ದರಿಂದ ಮ್ಯುನಿಸಿಪಾಲಿಟಿಯವರು ಆ ಬಗ್ಗೆ ಸಕ್ಕರ ಕಾಂಗ್ರೆಸ ಕಮಿಟಿಗೆ ಬಾಡಿಗೆಯೆಂದು ೨೦೦ ರೂ. ಬಿಲ್ಲು ಕಳಿಸಿದ್ದಾರೆ.

ಹಿಂದುಸ್ಥಾನ

ಮದ್ರಾಸ

ಕಂಚಿಯಲ್ಲಿ ತಾ ೨ ನೇ ದಿನ ಜನಜಂಗುಳಿಯು ಸೀದಾ ಕಚೇರಿ ಮೇಲೆ ಕಲ್ಲು ಒಗೆದು ದಾಳಿ ಮಾಡಲು ಪ್ರಯತ್ನಿಸಿದ್ದರಿಂದ ಪೋಲೀಸರು ಗೋಳೀಬಾರ ಮಾಡಿದರು. ಗೋಳೀಬಾರಿನಲ್ಲಿ ೬ ಜನರಿಗೆ ಗಾಯಗಳಾಗಿವೆ. ೬ ಜನರು ಬಂಧಿಸಲ್ಪಟ್ಟಿರುವರು.

ನೀರಾವರಿಯಿಂದ ಭತ್ತ, ಜೋಳ, ರಾಗಿ ಇವುಗಳ ಅಲ್ಪಾವಧಿ ಬೆಳೆ ತೆಗೆದುಕೊಳ್ಳುವವರಿಗೆ ಮದ್ರಾಸ ಸರಕಾರದವರು ಎಕರೆಗೆ ೧೫ ರೂ. ಪ್ರತಿಫಲ ಕೊಡಲು ೧ ಕೋಟಿ ರೂ. ವೆಚ್ಚ ಮಾಡಲಿರುವರು.

ಮದ್ರಾಸ ಶಾಸನ ಸಭೆಗೆ ಕಾಂಗ್ರೆಸದಿಂದ ನಾಮಪತ್ರ ಸಲ್ಲಿಸಿದ ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿ, ಶ್ರೀ ಜಿ ರಾಜಮನ್ನಾರ ಶ್ರೀ ಎಸ್ ಕೆ ಗೋವಿಂದರಾಜು ಅವರು ಅವಿರೋಧ ಆರಿಸಿ ಬಂದಿರುವರು.

ಶಾಸನ ಸಭೆಗೆ ಮಧುರಾ ಜಿಲ್ಹೆಯಿಂದ ಕಾಂಗ್ರೆಸ್ಸಿನ ಎಂ ಪಟ್ಟಾಭಿ ರಾಮಯ್ಯ, ಕೆ ಪಿ ಕಾಮಾಜಿ ಚೆಟ್ಟಿಯರ, ಬಾಲಕೃಷ್ಣನ್ ವ್ಹಿ ಗೌಂಡರ ಹಾಗು ಶ್ರೀ ಶ್ರೀಮತಿ ಲಕ್ಷ್ಮಿ [illegible] ರಾಮನಾಡು ಜಿಲ್ಹೆಯಿಂದ ೧ ಪಿ ಎಸ್ ಕುಮಾರಸ್ವಾಮಿ ರಾಜಾ, ೨ ಫೆಮಾರ ೩ ಡಾ ಎಸ್ ಸುಬ್ರಹ್ಮಣ್ಯ ೪ ಆರ್ ವ್ಹಿ ಸ್ವಾಮಿನಾಥನರೂ, ವಿಶಾಖಾಪಟ್ಟಣ ಜಿಲ್ಹೆಯ ೧ ಟಿ ವಿಶ್ವನಾಥನ್ ೨ ಡಿ ವ್ಹಿ ರಾಮಸ್ವಾಮಿ ೩ ಎಲ್ ಎನ್ ರಾಜೂ ೪ ಅಲ್ಲೂರಿ ಜೋಗಿ ನಾಯಡು ೫ ಪ್ಹಿ ವ್ಹಿ ಗಿರಿ ೬ ಕುಮಾರಸ್ವಾಮಿ ಅವರೂ ಅವಿರೋಧ ಆರಿಸಿ ಬಂದಿದ್ದಾರೆ.

ಹಾಯಕೋರ್ಟ ನ್ಯಾಯಾಧೀಶರಾದ ಬಯರ್ಸರ ಪಿಸ್ತೂಲಿಗೆ ಓರ್ವ ೧೭ ವರ್ಷದ ಬಾಲಕನು ಆಹುತಿಯಾದ ಪ್ರಕರಣದಲ್ಲಿ ಸರಕಾರದವರು ಕ್ರಮಬದ್ಧ ಖಟ್ಲೆ ಹೂಡಲು ತಿಳಿಸಿದ್ದಾರೆ. ಹರತಾಳದ ಸಮಯದಲ್ಲಿ ಕಾರಿನಲ್ಲಿ ಹೋಗುತ್ತಿರುವಾಗ ಕಾರ ಮೇಲೆ ಕಲ್ಲುಗಳು ಬಿದ್ದದ್ದರಿಂದ ಬಯರ್ಸರು ಪಿಸ್ತೂಲ ಹಾರಿಸಿದ್ದರು.

ಬಂಗಾಲ

ವಿಧಿ ಮಂಡಳಕ್ಕೆ ಹಿಂದು ಮಹಾಸಭೆಯಿಂದ ನಿಂತ ಕಲಕತ್ತಾ ಮೇಯರರಾದ ಡಿ ಎನ್ ಮೂಕರ್ಜಿಯವರು ಕೇವಲ ೬೦೩ ಮತ ದೊರಕಿಸಿ ಪರಾಭವ ಹೊಂದಿರುವರು. ಕಾಂಗ್ರೆಸ್ಸಿನ ಕುಮಾರ ವಿಶ್ವನಾಥರಾಯರು ೩೫೯೯ ಮತ ದೊರಕಿಸಿ ಆರಿಸಿ ಬಂದಿದ್ದಾರೆ.

ಮೋಟಾರ ಕರ ನಿಷೇಧಾರ್ಥ ವ್ಯಾಪಾರಿಗಳು ಹೂಡಿದ ಹರತಾಳವು ೧೫ ದಿವಸ ನಂತರ ಹಿಂತೆಗೆದುಕೊಳ್ಳಲ್ಪಟ್ಟಿತು. ಕರ ಹೆಚ್ಚಿಸಿದ್ದನ್ನು ಗವ್ಹರ್ನರರು ಜನತಾ ಮಂತ್ರಿಮಂಡಳ ಅಸ್ತಿತ್ವದಲ್ಲಿ ಬರುವ ವರೆಗೆ ಮುಂದೂಡಿದ್ದಾರೆ.

ಓಡಿಸಾ

ಶಾಸನ ಸಭೆ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ೧೨ ಜನರ ಅವಿರೋಧ ಆಯ್ಕೆಯಾಗಿದೆ. ಅದರಲ್ಲಿ ಹರಿಕೃಷ್ಣ ಮೆಹತಾಬ, ನಿತ್ಯನಂದ, ಕಾನುಂಗೋ, ಪ್ರಿಯಂವದಾದೇವಿ, ರಣಜಿತಸಿಂಗ, ಭಾಗವತದಾಸ, ಲಾಲ ಮೋಹನ ಪಟ್ನಾಯಿಕ ಅವರು ಪ್ರಮುಖರಿರುವರು.

ಹಿಂದಿನ ಮಂತ್ರಿಗಳಾದ ಪಂ. ಗೋದಾವರೀಶ ಮಿಶ್ರರು ವೃತ್ತಪತ್ರದಲ್ಲಿ ತಮ್ಮ ವಿರುದ್ಧ ಲಂಚಗುಳಿತನದ ಆರೋಪ ಮಾಡಲ್ಪಟ್ಟಿದ್ದರಿಂದ ಉಪವಾಸ ಪ್ರಾರಂಭಿಸಿದ್ದಾರೆ

ಆಸಾಮ

ಆಸಾಮ ಶಾಸನ ಸಭೆಯ ಆಯವ್ಯಯ ಅಧಿವೇಶನವು ಮಾರ್ಚ ೧೨ಕ್ಕೆ ಆರಂಭವಾಗಿ ೩ ವಾರ ನಡೆಯುವದು.

ಕಾಂಗ್ರೆಸ ಮಂತ್ರಿಮಂಡಳದವರು ಅಧಿಕಾರದಲ್ಲಿ ಬಂದಕೂಡಲೆ ರಾಜಕೀಯ ಕೈದಿಗಳನ್ನೆಲ್ಲ ಬಿಟ್ಟಿದ್ದಲ್ಲದೆ ನಿರ್ಬಂಧಕಾಜ್ಞೆಗಳನ್ನೆಲ್ಲ ಹಿಂತೆಗೆದುಕೊಂಡಿರುವರು.

ದಿಲ್ಲಿ

ಶ್ರೀ ಮೋಹರೆ ಹಣಮಂತರಾಯರು ದಿಲ್ಲಿಯ ಮಹಾರಾಷ್ಟ್ರ ಪತ್ರಿಕೋದ್ಯೋಗಿ ಸಂಘದಲ್ಲಿ ಭಾಷಣ ಮಾಡುತ್ತ ದೇಶಿ ವೃತ್ತಪತ್ರಗಳು ತಮ್ಮ ಹಿತಸಂಬಂಧ ರಕ್ಷಿಸಿಕೊಳ್ಳಲು ಯೋಗ್ಯ ರೀತಿ ಸಂಘಟಿತವಾಗುವದು ಅವಶ್ಯವಿದೆಯೆಂದೂ ಇಂಗ್ಲಿಷ ಪತ್ರಿಕೆಗಳೊಡನೆ ಸ್ಪರ್ಧೆ ಮಾಡಬೇಕಾಗಿದ್ದರೆ ಆಧುನಿಕ ಸಲಕರಣೆಗಳಿಂದ ಅವು ಸಜ್ಜಾಗಬೇಕೆಂದೂ ಹೇಳಿದರು.

ಝಾಂಸಿ ರಾಣಿ ದಲದ ಲೆ. ಕ. ಲಕ್ಷ್ಮಿಯವರು ತಾ ೪ ನೇ ದಿನ ದಿಲ್ಲಿಗೆ ಆಗಮಿಸಿದರು. ಆ. ಹಿಂ. ಸೈನಿಕರೂ ಕಾಂಗ್ರೆಸ್ಸಿಗರೂ ಮಹಿಳಾ ಸಂಘದವರೂ ಅವರನ್ನು ಸ್ವಾಗತಿಸಿದರು. ಅವರು ೧ ವಾರ ದಿಲ್ಲಿಯಲ್ಲಿದ್ದು ಹಿಂದುಗಡೆ ಮದ್ರಾಸಕ್ಕೆ ಹೊರಡುವರು.

ಹಿಂದುಸ್ತಾನದ ಆರೋಗ್ಯ ವರ್ಧನೆ ಕುರಿತು ಸರಕಾರದವರು ನೇಮಿಸಿದ ಭೋರ ಸಮಿತಿಯವರು ತಮ್ಮ ವರದಿ ಒಪ್ಪಿಸಿದ್ದು, ಅದರಲ್ಲಿ ಅವರು ಹಣವಿಲ್ಲದ್ದಕ್ಕೆ ಯಾರಿಗೂ ಔಷಧ ದೊರೆಯಲಿಲ್ಲ [illegible] ಕಟ್ಟಿಸಿಕೊಡಬೇಕು. ಸಮಸ್ತರಿಗೂ ಸಾಕಷ್ಟು ನೀರು ಸಿಗುವಂತೆ ವ್ಯವಸ್ಥೆ ಮಾಡಬೇಕು, ವರ್ಷಂಪ್ರತಿ ೪೫೦೦ ಡಾಕ್ಟರರನ್ನು ತಯಾರಿಸಬೇಕು, ಮಲೇರಿಯಾ ನಿವಾರಕ ಸಂಸ್ಥೆಗಳನ್ನು ವಿಸ್ತರಿಸಬೇಕು. ಆಯುರ್ವೇದ ಮತ್ತು ಯುನಾನಿ ಪದ್ಧತಿಗಳ ಸ್ಥಾನಮಾನ ನಿರ್ಧರಿಸಬೇಕು ಮುಂತಾಗಿ ಸೂಚಿಸಿದ್ದಾರೆ.

ಈ ವರೆಗೆ ಹಿಂದಿ ಸಶಸ್ತ್ರ ದಲಗಳಿಂದ ೩ ಲಕ್ಷ ಜನರು ಮುಕ್ತರಾಗಿದ್ದು ಮೇ ೩೧ ರೊಳಗಾಗಿ ಇನ್ನೂ ೫॥ ಲಕ್ಷ ಜನರು ಮುಕ್ತರಾಗಲಿರುವರು

ಭಾರತ ಮಂತ್ರಿಗಳೂ ಮಂತ್ರಿಮಂಡಳದ ಬೇರೆ ಇಬ್ಬರು ಸಭಾಸದರೂ ಮಾರ್ಚ ಮಧ್ಯದಲ್ಲಿ ಹಿಂದುಸ್ತಾನಕ್ಕೆ ಬರಲಿರುವರು. ವ್ಹಾಯಿಸರಾಯರ ಮಿಲಿಟರಿ ಕಾರ್ಯದರ್ಶಿಯ ಮನೆಯಲ್ಲಿ ಅವರನ್ನು ಇಳಿಸುವ ವ್ಯವಸ್ಥೆ ಮಾಡಲಾಗಿದೆ.

ಹಿಂದುಸ್ತಾನದಲ್ಲಿಯ ಅಮೇರಿಕನ್ ಅಧಿಕಾರಿಗಳು ದೇಶದಲ್ಲಿಯ ಆಹಾರ ಪರಿಸ್ಥಿತಿ ಸಂಬಂಧದ ಮಾಹಿತಿ ಸಂಗ್ರಹಿಸುತ್ತಿದ್ದಾರೆ. ಸರಕಾರೇತರರಿಂದ ಪರಿಸ್ಥಿತಿ ತಿಳಿದುಕೊಳ್ಳಲು ಅವರಿಗೆ ಬರೆದು ಬಂದಿರಬೇಕು.

ಕೇಂದ್ರ ಸರಕಾರದ ಯೋಜನೆ ಖಾತೆಯ ಆರ್ಥಿಕ ತಜ್ಞರಾದ ಪ್ರೊ. ವಕೀಲರೂ ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟಿದ್ದಾರೆ. ಆಳರಸರ ಧೋರಣ ಇನ್ನೂ ಬದಲಾಗಿಲ್ಲವೆಂದೂ ಅವರು ತಮ್ಮ ಸಲಹೆ ಅಲಕ್ಷಿಸಿದರೆಂದು ಮುಂತಾದ ಅವರು ಕಾರಣ ತೋರಿಸಿರುವರು.

ಭಾರತ ಮಂತ್ರಿ ಪೆಥಿಕ ಲಾರೆನ್ಸರು ನಿವೃತ್ತರಾಗುವ ಇಚ್ಛೆ ವ್ಯಕ್ತಪಡಿಸಿದ್ದು ಅವರ ಸ್ಥಳದಲ್ಲಿ ಕ್ರಿಪ್ಸರು ಭಾರತ ಮಂತ್ರಿಗಳಾಗುವ ಸಂಭವವಿದೆಯೆಂದು ಲಂಡನದ ಒಂದು ಪತ್ರಿಕೆಯಲ್ಲಿ ಪ್ರಸಿದ್ಧವಾಗಿದೆ.

ಬ್ರಹ್ಮಿ ಫ್ಯಾಸಿಸ್ಟ ವಿರೋಧಿ ಸಂಸ್ಥೆಯ ಅಧ್ಯಕ್ಷರಾದ ಅಂಗಸಾನರು ಏಶಿಯಾದ ಪರಾಧೀನ ಜನರ ಪರಿಷತ್ತು ಕರೆಯುವ ಸಂಬಂಧವಾಗಿ ಹಿಂದಿ ಮುಖಂಡರೊಡನೆ ವಿಚಾರ ಮಾಡಲು ಬೇಗನೆ ಬರಲಿದ್ದಾರೆ.

ಜನರಲ್ ಭೋಸಲೆ ಹಾಗು ಕ್ಯಾಪ್ಟನ್ ಮೋಹನಸಿಂಗರ ಪ್ರಕರಣಗಳು ತೊಡಕಿನವಿರುವದರಿಂದ ಶೀಘ್ರದಲ್ಲಿ ಅವರ ಬಿಡುಗಡೆಯಾಗುವ ಸಂಭವವಿಲ್ಲವೆಂದು ತಿಳಿಯುತ್ತದೆ.

ಹಿಂ. ರಾ ಸೈನ್ಯದ ಸರಕುದಾರು ಫಾಸಾ ಅವರನ್ನು [illegible] ಬಂಧನದಲ್ಲಿಟ್ಟಿರುವದರಿಂದ ಲಾಹೋರ ಹಾಯಕೋರ್ಟಿಗೆ ಅರ್ಜಿ ಮಾಡಿದ್ದಾರೆ.

ಅಂಚೆ ಹಾಗು ತಂತಿ ಖಾತೆ ಕೆಲಸಗಾರ ಯೂನಿಯನದವರು ಹಾಗು ಅಧಿಕಾರಿಗಳಲ್ಲಿ ಕೆಲವೊಂದು ಒಡಂಬಡಿಕೆ ಆಗಿದ್ದರಿಂದ ಅವರ ಸಂಪು ನಡೆಯುವದಿಲ್ಲೆಂದು ತಿಳಿಯುತ್ತದೆ. ಉಭಯ ಪಕ್ಷದವರೂ ತಂಟೆಯನ್ನು ಮಧ್ಯಸ್ಥನಿಗೆ ಒಪ್ಪಿಸಲು ನಿರ್ಧರಿಸಿದ್ದಾರೆ.

ಸಂಯುಕ್ತಪ್ರಾಂತ

ಪ್ರಾಂತಿಕ ಶಾಸನಸಭೆಯ ೨೨೮ ಸ್ಥಳಗಳಲ್ಲಿ ಈ ವರೆಗೆ ಕಾಂಗ್ರೆಸದವರು ೮೦, ಮುಸ್ಲಿಂ ಲೀಗ ೧, ಸ್ವತಂತ್ರ ೧೨ ಜನರು ಅವಿರೋಧ ಆರಿಸಿ ಬಂದಿರುವರು.

ಡೆಹರಾಡೂನ ಎಕ್ಸಪ್ರೆಸ್ಸಿಗೂ ಗುಡ್ಸಗಾಡಿಗೂ ಲಖನೌದಿಂದ ೪೮ ಮೈಲಿನ ಮೇಲಿರುವ ಭಾಗಾವಲಿ ರೇಲ್ವೆ ಸ್ಟೇಶನದಲ್ಲಿ ತಾ ೪ ನೇ ದಿನ ಢಿಕ್ಕಿ ಸಂಭವಿಸಿ ೪೩ ಜನರು ಮರಣ ಹೊಂದಿದ್ದು ೧೦[illegible] ಜನರು ಗಾಯಗೊಂಡಿರುವರು. ಡಾಕಾ ವಿಶ್ವವಿದ್ಯಾಲಯದ ವ್ಹಾಯಸ ಚಾನ್ಸಲರರಾದ ಕರ್ನಲ್ ಹುಸೇನರೂ ಗಾಯಾಳುಗಳಲ್ಲಿರುವರು.

ಸರಕಾರದವರು ಪಂಡಿತ ಜವಾಹರಲಾಲರಿಗೆ ಮಲಾಯಕ್ಕೆ ಹೋಗಲು ಸೌಕರ್ಯ ಕಲ್ಪಿಸಿ ಕೊಟ್ಟದ್ದರಿಂದ ಅವರು ಇದೇ ೧೬ ನೇ ತಾರೀಖಿಗೆ ವಿಮಾನದಿಂದ ಮಲಾಯಕ್ಕೆ ತೆರಳುವರು. ಶ್ರೀ ಜಿ ಪಿ ಹತ್ತಿಸಿಂಗರು ಅವರೊಡನೆ ಕಾರ್ಯದರ್ಶಿಗಳೆಂದು ಹೋಗುವರು. ಒಂದು ವಾರ ಅಲ್ಲಿದ್ದು ತಾ. ೨೫ ಕ್ಕೆ ಅವರು ಹಿಂತಿರುಗುವರು.

ಬರೇಲಿ ಜಿಲ್ಹೆಯಿಂದ ಕಾಂಗ್ರೆಸ್ಸಿನ ಶ್ರೀ ರಾಮಮೂರ್ತಿಯವರು ಶಾಸನಸಭೆಗೆ ಅವಿರೋಧ ಆರಿಸಿ ಬಂದಿರುವರು.

ಬಿಹಾರ

ಬಿಹಾರ ಶಾಸನಸಭೆಯ ೧೫೨ ಜನರಲ್ಲಿ ಈಗಾಗಲೆ ಕಾಂಗ್ರೆಸದವರು ೪೫ ಜನರು, ಲೀಗದವರು ಇಬ್ಬರು, ಮೂವರು ಯುರೋಪಿಯನರು, ಒಬ್ಬರು ಆಂಗ್ಲೊ ಇಂಡಿಯನರು ಕೂಡಿ ೫೬ ಜನರು ಅವಿರೋಧ ಆರಿಸಿ ಬಂದಿದ್ದಾರೆ. ಉಳಿದ ೯೬ ಸ್ಥಳಗಳಿಗೆ ೨೧೩ ಹುರಿಯಾಳುಗಳು ನಿಂತಿರುವರು ಅವರಲ್ಲಿ ೯ ಮುಸಲ್ಮಾನರನ್ನೊಳಗೊಂಡು ೫೯ ಜನರು ಕಾಂಗ್ರೆಸ್ಸಿಗರಿರುವರು. ಮೋಮಿನ ಪಕ್ಷದವರು ೧೯, ರಾಷ್ಟ್ರೀಯ ಮುಸಲ್ಮಾನರು ೪, ಜಮಾಯತ ಉಲ್-ಉಲೇಮಾದವರು ೬ ಜನರು ನಿಲ್ಲಿಸಿದ್ದಾರೆ.

ನೇಪಾಳದಲ್ಲಿ ಭತ್ತದ ಧಾರಣೆ ಬಿಹಾರಕ್ಕಿಂತ ಇಮ್ಮಡಿ ಅಂದರೆ ಚೀಲಕ್ಕೆ ೩೦ ರೂಪಾಯಿ ಇರುವದರಿಂದ ಪ್ರತಿ ದಿವಸ ೨೦೦೦ ಭತ್ತದ ಚೀಲಗಳು ಕಳ್ಳತನದಿಂದ ಅಲ್ಲಿ ಹೋಗುತ್ತಿರುವವೆಂದು ತಿಳಿಯುತ್ತದೆ.

ಪಂಜಾಬ

ಗವ್ಹರ್ನರರು ಕಾರಿನಲ್ಲಿ ಹೊರಟಾಗ ಕೆಲವು ವಿದ್ಯಾರ್ಥಿಗಳು ಅವರ ಕಾರನ್ನು ತಡೆದು ಕಾರಿಗೆ ಹಚ್ಚಿದ್ದ ಯೂನಿಯನ್ ಜಾಕ ಹರಿದೊಗೆದಿದ್ದನ್ನು ಕಾಂಗ್ರೆಸ ಅಧ್ಯಕ್ಷರಾದ ಮೌಲಾನರು ನಿಷೇಧಿಸಿದ್ದಾರೆ. ವಿದ್ಯಾರ್ಥಿ ಕಾಂಗ್ರೆಸ್ಸಿನವರೂ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಲು ನಿರ್ಧರಿಸಿರುವರು.

ಶಾಸನ ಸಭೆ ಕಾಂಗ್ರೆಸ ಪಕ್ಷಕ್ಕೆ ಲಾಲಾ ಭೀಮಸೇನ ಸಾಚಾರರು ಧುರೀಣರಾಗಿ ಆರಿಸಲ್ಪಟ್ಟಿರುವರು. ದಿವಾಣ ಚಮನಲಾಲರು ಪ್ರಾಂತಿಕ ಶಾಸನ ಸಭೆಗೆ ರಾಜೀನಾಮೆಯನ್ನು ಕೊಟ್ಟು ಕೇಂದ್ರ ಶಾಸನ ಸಭೆಯಲ್ಲಿ ಉಳಿಯಲು ನಿರ್ಧರಿಸಿರುವರು.

ಮಧ್ಯಪ್ರಾಂತ ವರ್ಹಾಡ ಗುರುದ್ವಾರ ಪ್ರಬಂಧ ಕಮಿಟಿಯವರು ಮಾಸ್ಟರ ತಾರಾಸಿಂಗರಿಗೆ ತಂತಿ ಕಳಿಸಿ ಲೀಗದವರೊಡನೆ ಕೂಡಿಕೊಂಡು ಹೋಗ ಬಾರದು ತರವಲ್ಲೆಂದು ಎಚ್ಚರಿಸಿದ್ದಾರೆ

ಸರಹದ್ದ

ಸರಹದ್ದ ಶಾಸನಸಭೆ ಚುನಾವಣೆಯು ಪಾಕಿಸ್ತಾನ ಬೇಕೋ ಬೇಡವೋ ಎಂಬ ಮತ ಕೇಳಿಸಿ ಹೋರಾಡಲ್ಪಟ್ಟು ಸರಹದ್ದ ಪ್ರಾಂತದ [illegible] ತೆಂದೂ ೩೬ ಮುಸಲ್ಮಾನ ಸ್ಥಳಗಳಲ್ಲಿ ಕಾಂಗ್ರೆಸ ಹಾಗು ಜಮಾಯತ ಉಲ್ ಉಲೇಮಾದವರು ಕೂಡಿ ೨೧ ಸ್ಥಳಗಳು ಸಿಕ್ಕಿದ್ದು ಲೀಗದವರಿಗೆ ಕೇವಲ ೧೫ ಸ್ಥಳಗಳು ದೊರೆತವೆಂದೂ ಪಾಕಿಸ್ತಾನಕ್ಕೆ ೧೪೫೪೩೨, ಪಾಕಿಸ್ತಾನ ವಿರುದ್ಧ [illegible] ಮತಗಳು ಬಿದ್ದವೆಂದೂ ಸರಹದ್ದ ಕಾಂಗ್ರೆಸ ಕಮೀಟಿ ಅಧ್ಯಕ್ಷರಾದ ಖಾನ ಅಲಿಗುಲಖಾನರು ಪ್ರಸಿದ್ಧಿಸಿದ್ದಾರೆ.

ಜಗತ್ತಿನ ಕಮ್ಯುನಿಸ್ಟ ಪಕ್ಷಗಳ ಧೋರಣೆ

(೬ ನೇ ಪುಟದಿಂದ)

ಬಂಡವಳಶಾಹಿಗೆ ನಿಷೇಧ ಪ್ರದರ್ಶನ ಮಾಡುವದಕ್ಕಿಂತ ಇದೇ ಸ್ಟಾಲಿನ್ನನಿಗೆ ಹೆಚ್ಚು ಅನುಕೂಲ. ಕಟ್ಟಡದ ಹೊರಗೆ ನಿಂತು ಘೋಷಗಳನ್ನು ಅರಚುತ್ತಿರುವದಕ್ಕಿಂತ ಒಳಗೆ ಕುಳಿತು ಸೂತ್ರಗಳನ್ನು ಎಳೆದಾಡುವದು ಒಳಿತು ಸಂದರ್ಭ ಬಂದಾಗ ಕಮ್ಯುನಿಸ್ಟರು ಎರಡನ್ನೂ ಮಾಡಬಹುದು. ಆದರೆ ಮಹತ್ವದ ನಿರ್ಣಯಗಳಾಗುತಿರುವಾಗ ಸರಕಾರಿ ಸಭಾ ಸಮಿತಿಗಳಲ್ಲಿ ಸೇರಿರುವದೇ ಮಹತ್ವದ್ದು.

ಈ ಹೊಸ ಕಮ್ಯುನಿಸ್ಟ ಪಕ್ಷ ಧೋರಣೆಯಲ್ಲಿ ತತ್ವ ಧ್ಯೇಯಗಳಿಗೆ ಗೌಣಸ್ಥಾನ. ಮುಖ್ಯ ಮಾತು ಮಾಸ್ಕೋದ ಹಿತ. ಹಿಂದೀ ಕಮ್ಯುನಿಸ್ಟರು ಬ್ರಿಟಿಶ ಸಾಮ್ರಾಜ್ಯವಾದಿಗಳೊಡನೆ ಸಹಕರಿಸಿದರು. ಚೀನಿ ಕಮ್ಯುನಿಸ್ಟರು, ಅವರೇ ಮೊದಲು ಫ್ಯಾಸಿಸ್ಟನೆಂದು ಕರೆದ ಚಿಯಾಂಗರೊಡನೆ ಸಹಕರಿಸುತ್ತಾರೆ. ರುಮೇನಿಯನ್ ಕಮ್ಯುನಿಸ್ಟರು ಇಂದು ಯುರೋಪಿಯನ ಪ್ರತಿಗಾಮಿಗಳಲ್ಲಿ ಅಗ್ರಣಿಯಾದ ವಿದೇಶ ಮಂತ್ರಿ ತತರೆಸ್ಕುನೊಡನೆ ಸಹಕರಿಸುತ್ತಿದ್ದಾರೆ. ತೀವ್ರಗಾಮಿ-ಮಂದಗಾಮಿಗಳೆಂಬುದು ಮಹತ್ವದ್ದಲ್ಲ. ಸರಕಾರಗಳ ಮೇಲೆ ಅಂಕೆ, ಇದೇ ಮುಖ್ಯ.

ಅಮೇರಿಕೆಯಲ್ಲಿ

ಅಮೇರಿಕೆಯಂಥ ಕಮ್ಯುನಿಸ್ಟರ ಸಂಖ್ಯೆ, ಬಲ ಕಡಿಮೆಯಾಗಿರುವ ದೇಶಗಳಲ್ಲಿ ಕೂಡ, ಅವರಿಗೆ ಅಧ್ಯಕ್ಷರ ಮಂತ್ರಿಮಂಡಲದಲ್ಲಿ ಸೇರಿಕೊಳ್ಳುವಷ್ಟು ಬಲವಿಲ್ಲದಿದ್ದರೂ ಇದೇ ಧೋರಣೆ ಅನ್ವಯಿಸುವದು. ಮಂತ್ರಿಗಳ ಮೇಲೂ ವಿಧಾಯಕ ಸಭಾ ಸದಸ್ಯರ ಮೇಲೂ ಸಾಧ್ಯವಿದ್ದಷ್ಟು ಪ್ರಭಾವ ಬೀರಲು ಪ್ರಯತ್ನಿಸುವದು, ಸರಕಾರಿ ಖಾತೆಗಳಲ್ಲಿ, ಡೆಮಾಕ್ರಟಿಕ ಪಕ್ಷದಲ್ಲಿ, ಬಂಡವಳಗಾರ ಪತ್ರಿಕೆಗಳಲ್ಲಿ, ಆಕಾಶವಾಣಿ ಕೇಂದ್ರಗಳಲ್ಲಿ, ಕೂಲಿಕಾರ ಸಂಘಗಳಲ್ಲಿ ಮತ್ತು- ಅರ್ಲ ಬ್ರೌಡರ (ಅಮೆರಿಕನ್ ಕಮ್ಯುನಿಸ್ಟ)ನ ಆಡಳಿತೆಯಲ್ಲಿ- ಕಾರಖಾನೆದಾರರ ರಾಷ್ಟ್ರೀಯ ಸಂಘದಲ್ಲಿ ಕೂಡ ಚಂಚುಪ್ರವೇಶ ಮಾಡುವದು ಅಮೇರಿಕನ್ ಕಮ್ಯುನಿಸ್ಟರ ಧೋರಣೆ. ಹಳೆಯ ಕಮ್ಯುನಿಸ್ಟ ಉಪಾಯವೆಂದರೆ "ಒಳಹೊಕ್ಕು ಕೈಕಾಲು ಚಾಚುವ" ಏನಾದರೂ ಪ್ರಭಾವವಿರುವ ಸಂಸ್ಥೆಗಳಲ್ಲೆಲ್ಲ ಕಮ್ಯುನಿಸ್ಟ ಪ್ರಭಾವ ಹೆಚ್ಚಿಸುವದಕ್ಕಾಗಿ ಎಲ್ಲ ಕೂಲಿಕಾರ ಸಂಘ ಮತ್ತು ಪ್ರಗತಿಗಾಮಿ ಪಕ್ಷಗಳಲ್ಲಿ ಅವರು ಸೇರಿಕೊಳ್ಳುತ್ತಾರೆ. ಆದರೆ ಆ ಸಂಸ್ಥೆಗಳು ಪ್ರಗತಿಶೀಲವೇ ಇರಬೇಕೆಂಬ ನಿಯಮವಿಲ್ಲ. ಅಮೇರಿಕೆಯ ಕಮ್ಯುನಿಸ್ಟರು ಈಗ ಹೆಚ್ಚು ಪ್ರಗತಿಶೀಲ ಸ್ವರೂಪದ ಅಮೇರಿಕನ್ ವೆಟರನ್ ಕಮಿಟಿಯನ್ನು ಬಿಟ್ಟು ಹಳೆಯ ವೆಟರನ್ಸ ಲೀಜಿಯನ್ ಸೇರುವಂತೆ ನಿವೃತ್ತ ಸೈನಿಕರಿಗೆ ಪ್ರೋತ್ಸಾಹ ಕೊಡುತಿದ್ದಾರೆ. ಏಕೆಂದರೆ ವೆಟರನ್ಸ ಲೀಜಿಯನ್ನಿಗೆ ವಾಶಿಂಗ್‌ಟನ್ನಿನಲ್ಲಿ ಬಹಳ ಪ್ರಭಾವವುಂಟು.

ಅಮೇರಿಕೆಯಲ್ಲಿ ಸೋವಿಯಟ್ ಸರಕಾರದ ಟೀಕೆಗಳ ಬಾಯಿಗೆ ಬೀಗ ಹಾಕಿದ್ದು, ಕಮ್ಯುನಿಸ್ಟರು ಸಾಧಿಸಿದ್ದರಲ್ಲಿ ಕಡಿಮೆ ಮಹತ್ವದ್ದಲ್ಲ. ಔದ್ಯೋಗಿಕ ಸಂಘಟನಾ ಕಾಂಗ್ರೆಸ್ಸಿನ ರಾಜಕೀಯ ಕ್ರಿಯಾ ಸಮಿತಿಯವರು ಬ್ರಿಟಿಶ ಸರಕಾರವನ್ನೂ ಅಮೇರಿಕನ್ ಸರಕಾರವನ್ನೂ ಬಾಯಿತುಂಬ ಟೀಕಿಸುತ್ತಾರೆ. ಆದರೆ ಆ ಸಂಸ್ಥೆಯಲ್ಲಿ ಕಮ್ಯುನಿಸ್ಟರ ಮಾತು ನಡೆಯುವ ವರೆಗೆ ಮಾಸ್ಕೊ ಮಾತ್ರ ಗೋಮಾತೆಯಾಗಿರುವದು. ರಾಜಕೀಯ ಕ್ರಿಯಾ ಸಮಿತಿ ಮಾಸ್ಕೋವನ್ನೂ ಟೀಕಿಸಿದ ಉದಾಹರಣೆಯೇ ಇಲ್ಲ.

ಹೀಗೆ ಚಾಣಕ್ಯ ನೀತಿಯಿಂದ ಸ್ಟಾಲಿನ್ನನು ಒಂದು ಕಾಟವನ್ನು ದೂರ ಮಾಡಿಕೊಂಡನು: ಅಧಿಕೃತವಾಗಿ ಕಾಮಿಂಟರ್ನ್ ಸತ್ತುಹೋಗಿದೆ; ಅಧಿಕೃತವಾಗಿ ಜಗತ್ತಿನ ಕಮ್ಯುನಿಸ್ಟ ಪಕ್ಷಗಳಿಗೆ ಮಾಸ್ಕೋದೊಡನೆ ಏನೂ ಸಂಬಂಧವಿಲ್ಲ. ಆದರೆ ಅವು ಈಗ ಸೋವಿಯಟ ಸರಕಾರಕ್ಕೆ ಎಂದಿಗಿಂತ ಹೆಚ್ಚು ಉಪಕಾರಕ್ಕೆ ಬೀಳುವವು. ವಿದೇಶಿ ಕಮ್ಯುನಿಸ್ಟ ಪಕ್ಷಗಳು ಸೋವಿಯಟ್ಟಿನ ಜಾಗತಿಕ ಧ್ಯೇಯಗಳನ್ನು ಮುಂದೊತ್ತಲು ಬಹಳ ಸಹಾಯ ಮಾಡಿವೆ.

ರೇಲ-ರಸ್ತೆ ಯೋಜನೆ ದುಸ್ಸಾಧ್ಯ

ಶ್ರೀ ದಿವಾಕರರ ಅಭಿಪ್ರಾಯ

ರೇಲ್ವೆ ಮುಂಗಡ ಪತ್ರಿಕೆಯಲ್ಲಿ ರೇಲ-ರಸ್ತೆ ಸಂಯುಕ್ತೀಕರಣಕ್ಕೆ ಹಣವನ್ನು ಮಂಜೂರ ಮಾಡದಿದ್ದದ್ದು ಅಧಿಕಾರಿ ವರ್ಗದ ವಿರುದ್ಧ ಜನತೆಯ ಪ್ರತಿನಿಧಿಗಳ ನಿರ್ಧಾರದ ಪ್ರತೀಕವಾಗಿದೆ. ಸರದಾರ ಪಟೇಲ, ನವಾಬಜಾದಾ ಲಿಯಾಕತರಂಥ ಮುಂದಾಳುಗಳು ಈ ಯೋಜನೆ ಜನಪ್ರಿಯ ಮಂತ್ರಿಮಂಡಳಗಳು ಬರುವ ವರೆಗೆ ಮುಂದೂಡಬೇಕೆಂದು ಹೇಳುವಾಗ, ದೇಶದಲ್ಲಿ ಈ ಬಗ್ಗೆ ಪ್ರಬಲ ಆಂದೋಲನ ನಡೆದಾಗ, ಕೇಂದ್ರ ಅಥವಾ ಪ್ರಾಂತಿಕ ಸರಕಾರವು ಈ ನಿರ್ಧಾರವನ್ನು ಕಡೆಗಣಿಸಿ ಸಂಯುಕ್ತಿಕರಣ ಯೋಜನೆಯನ್ನು ಮುಂದುವರಿಸಲಾರದು ಎಂದು ಮುಂಬಯಿ ಪ್ರಾಂತಿಕ ಮೋಟಾರ ಯುನಿಯನ್ನದ ಅಧ್ಯಕ್ಷರಾದ ಶ್ರೀ ರಂಗರಾವ ದಿವಾಕರರು ಅಪ್ರೆಕ್ಕೆ ಕೊಟ್ಟ ಸಂದರ್ಶನದಲ್ಲಿ ಹೇಳಿದರು.

ರೇಲ-ರಸ್ತೆ ಸಂಯುಕ್ತಿಕರಣ, ಉತ್ತಮ ಸಾರಿಗೆ ಇವು ಜನರಂತೆ ಮೋಟಾರ ಒಡೆಯರಿಗೂ ಬೇಕಾಗಿದೆ. ಆದರೆ ಕೇವಲ ಆರ್ಥಿಕ ವಿಷಯವೆ ಮುಖ್ಯವಾಗಿರುವ ಗುತ್ತಿಗೆ ಸ್ವರೂಪದ ಯೋಜನೆಯಗಳಿಗೆ ಇವರು ತಲೆಬಾಗಲಾರರು.

ಪ್ರಶ್ನೆ- ಹಾಗಾದರೆ ಯೋಜನೆಯ ಗತಿಯೇನು?

ಉತ್ತರ- ಬಹುಮತದ ನಿರ್ಣಯದ ವಿರುದ್ಧ ವಾಯಿಸರಾಯರು ತಮ್ಮ ಅಧಿಕಾರದಿಂದ ಈ ಯೋಜನೆಗೆ ಹಣ ಮಂಜೂರ ಮಾಡಬಹುದು. ಆದರೆ ಅಧಿಕಾರದಾನದ ಈ ಸಂಕ್ರಾಂತಿಕಾಲದಲ್ಲಿ ಅವರು ಆ ರೀತಿ ವರ್ತಿಸುವರೆಂದು ನಾನು ಆಶಿಸಿಲ್ಲ. ಅಲ್ಲದೆ ಇನ್ನೊಂದೆರಡು ತಿಂಗಳಲ್ಲಿ ಜನಪ್ರಿಯ ಮಂತ್ರಿಮಂಡಳಗಳು ಸ್ಥಾಪಿತವಾಗಲಿವೆ. ರಸ್ತೆಯ ಪ್ರಶ್ನೆ ಪ್ರಾಂತಿಕವಾಗಿರುವದರಿಂದ ವಾಯಿಸರಾಯರು ಯಾವದೊಂದು ಸಿದ್ಧ ಯೋಜನೆಯನ್ನು ಪ್ರಾಂತಗಳ ಮೇಲೆ ಹೇರುವದು ಒಳ್ಳೆಯದಲ್ಲ.

ಪ್ರಶ್ನೆ— ಈಗಾಗಲೆ ಪ್ರಾರಂಭಿಸಿರುವ ಯೋಜನೆಗಳ ಗತಿಯೇನು ?

ಉತ್ತರ— ಇಲ್ಲಿ ರೇಲ್ವೆಗಳು ಭಾಗವಹಿಸಲಿಲ್ಲವಾದರೆ ಅದು ರೇಲ-ರಸ್ತೆ ಯೋಜನೆಯಾಗುವದಿಲ್ಲ. ಪ್ರೊಮೋಟರರೂ ಸರಕಾರವೂ ಸಹಕರಿಸಬೇಕಾಗುವದು. ಆಗ ರೇಲ-ರಸ್ತೆ ಯೋಜನೆಯ ತಳಹದಿಯೇ ಉಳಿಯದೆ ಕೆಲವು ಕಂಪನಿಗಳು ಸರಕಾರದ ಸಹಾಯದಿಂದ ನಡೆಸುವ ಒಂದು ವ್ಯಾಪಾರಿ ಸಂಸ್ಥೆಯಾದಂತಾಗುವದು. ಹೊಸದಾಗಿ ರಚಿತವಾಗಲಿರುವ ಪ್ರಾಂತಿಕ ಸರಕಾರಗಳು ಇಂಥ ವ್ಯಾಪಾರಿ ವಿಷಯದಲ್ಲಿ ಭಾಗವಹಿಸದಿರುವ ಹೆದರಿಕೆಯೂ ಇದೆ.

ಪ್ರಶ್ನೆ— ಆದರೆ ಈಗ ಆಪರೇಟರರ ವಿರುದ್ಧ ನಡೆದುಕೊಂಡ ಪ್ರೊಮೋಟರರ ಗತಿಯೇನು ?

ಉತ್ತರ— ಬಹುಸಂಖ್ಯಾಕ ಆಪರೇಟರರು ಈ ಯೋಜನೆಯ ವಿರೋಧಿಗಳಿದ್ದಾರೆಂದು ಕಂಡುಕೊಂಡ ಪ್ರಮೋಟರರು ಕೂಡಲೆ ರಾಜೀನಾಮೆ ಕೊಟ್ಟರು. ಆದರೆ ಪ್ರಾಂತಿಕ ಸರಕಾರಗಳನ್ನಾಗಲಿ, ಅಧಿಕಾರಿಗಳನ್ನಾಗಲಿ ತೋಷಿಸಬೇಕೆಂಬ ಇಚ್ಛೆಯಿಂದ ಮುಂದೆ ಕೆಲಸ ನಡಿಸಿದವರು ಆಪರೇಟರರ ಸಹಾನುಭೂತಿಯನ್ನು ಕಳೆದುಕೊಂಡರು. ಇನ್ನೆರಡು ತಿಂಗಳಲ್ಲಿ ಹೊಣೆಗಾರ ಮಂತ್ರಿಮಂಡಳಗಳನ್ನು ಎದುರಿಸಬೇಕಾಗಿರುವ ರೇಲ್ವೆಯವರು ಈಗ ಇದರಲ್ಲಿ ಭಾಗವಹಿಸಲು ಒಪ್ಪದಿರುವದರಿಂದ ಈ ಯೋಜನೆಯೂ ಈಗ ಇಲ್ಲದಂತಾಯಿತು.

ಹೊರನಾಡಿನಲ್ಲಿ ಕನ್ನಡಿಗರು

ಬಾಸಿಮುದಲ್ಲಿ ಕರ್ನಾಟಕ ಸಂಘ

ವರ್ಹಾಡ ಪ್ರಾಂತದ ಬಾಸಿಮುದಲ್ಲಿ "ರಾಜಸ್ಥಾನ ಆರ್ಯನ ಕಾಲೇಜ" ಸ್ಥಾಪಿತವಾದಂದಿಂದ ಆ ಕಾಲೇಜಿನಲ್ಲಿ ನಿಜಾಮ ಕನ್ನಡಿಗ ವಿದ್ಯಾರ್ಥಿಗಳ ಸಂಖ್ಯೆ ಬೆಳೆಯತೊಡಗಿ ಕಾಲೇಜಿನ ಅಧ್ಯಾಪಕರಲ್ಲೊಬ್ಬರಾದ ಶ್ರೀ ಟಿ. ಕೆ. ಜಹಾಗಿರದಾರರ ನೇತೃತ್ವದಲ್ಲಿ ಕರ್ನಾಟಕ ಸಂಘವೊಂದು ಸ್ಥಾಪಿತವಾಗಿ ಒಂದು ವರ್ಷ ಮಿಕ್ಕಿತು. ಆ ಸಂಬಂಧದಲ್ಲಿ ತಾ. ೧೬-೨-೪೬ ರಲ್ಲಿ ಸಂಘದ ಪ್ರಥಮ ವಾರ್ಷಿಕೋತ್ಸವ ಕಾಲೇಜ ಭವನದಲ್ಲಿ ಶ್ರೀ ಆರ್. ಎಸ್. ಅಪರಂಜಿ, ಅಕೋಲಾ ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಸಾಂಗವಾಯಿತು. ಸಂಘದ ಕಾರ್ಯದರ್ಶಿ ಶ್ರೀ ಎಸ್. ಬಿ. ಮೋದಿಯವರು ವರದಿ ಓದಿದ ಬಳಿಕ ಸಂಘದ ಅಧ್ಯಕ್ಷ ಶ್ರೀ ವಿ. ಎಸ್. ಮುಧೋಳರು ಸನ್ಮಾನ್ಯ ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ "ಕರ್ನಾಟಕದ ವೈಶಿಷ್ಟ್ಯ, ಏಕೀಕರಣದ ಅವಶ್ಯಕತೆಗಳನ್ನು ಕುರಿತು ಚರ್ಚಿಸಿದರು. ಪ್ರಿನ್ಸಿಪಾಲ ಶ್ರೀ ಪಿ. ವಿ. ಮೊಸಗಾಂವಕರರು ಕರ್ನಾಟಕ ಸಂಘಕ್ಕೆ ಸಹಕಾರದ ಆಶ್ವಾಸನವಿತ್ತರು. ವಿದ್ಯಾರ್ಥಿಗಳ ವಿವಿಧ ವಿನೋದಾವಳಿ, ಶ್ರೀಮತಿ ಶಾಂತಾದೇವಿ ಪಾಡಿಗೇರರ ವೀಣಾ ವಾದನಗಳಿಂದ ಉತ್ಸವಕ್ಕೆ ಕಳೆಯೇರಿತು.

ಹಿಂದುಸ್ತಾನದ ಆರೋಗ್ಯ ವರ್ಧನೆ

ಸಮಸ್ತ ಪ್ರಜರಿಗೂ ಮನೆ, ನೀರು ಮತ್ತು ಔಷಧೋಪಚಾರ

ಭೋರ ಸಮಿತಿಯ ಸೂಚನೆಗಳು

ಹಿಂದುಸ್ತಾನದ ಆರೋಗ್ಯ ವರ್ಧನೆ ಕುರಿತು ಹಿಂದುಸ್ತಾನ ಸರಕಾರದವರು ನೇಮಿಸಿದ ಭೋರ ಸಮಿತಿಯವರು ತಮ್ಮ ವರದಿಯನ್ನು ಒಪ್ಪಿಸಿದ್ದು ೧೦ ವರ್ಷ ಒಂದು ಅವಸರದ ಮತ್ತು ದೀರ್ಘಾವಧಿಯ ವಿಸ್ತೃತ ಸೂಚನೆಗಳು ಅದರಲ್ಲಿ ಮಾಡಲ್ಪಟ್ಟವೆ.

ಹಳ್ಳಿಗನಿಗೆ ಹೆಚ್ಚು ಹಿತವಾಗುವಂತೆ ಅವರು ಪ್ರಯತ್ನಿಸಿದ್ದಾರೆ.

ಅವರ ಸೂಚನೆಗಳೇನಂದರೆ—

೧) ಭಾರತದಲ್ಲಿ ಹುಟ್ಟಿದ ಯಾವದೇ ವ್ಯಕ್ತಿಗೆ ಹಣವಿಲ್ಲದ್ದಕ್ಕೆ ಔಷಧೋಪಚಾರ ದೊರೆಯಲಿಲ್ಲವೆಂದು ಎನಿಸದಂತೆ ವ್ಯವಸ್ಥೆ ಮಾಡುವ ಗುರಿ ಇಟ್ಟುಕೊಳ್ಳಬೇಕು.

೨) ಬಡವರಿಗಾಗಿ ಮನೆ ಕಟ್ಟಿಸಿ ಕೊಡುವದಕ್ಕೆ ಪ್ರಥಮ ಪ್ರಾಶಸ್ತ್ಯ ಕೊಡಬೇಕು. ಈ ಸಂಬಂಧದಲ್ಲಿ ಮನ್ನಣೆ ಪಡೆದ ಯೋಜನೆಗಳಿಗೆ ಸರಕಾರದವರು ಹಣ ರೂಪದಿಂದ ಸಹಾಯ ಮಾಡಬೇಕು. ಪ್ರಾಂತಿಕ ಸರಕಾರಗಳು, ಸ್ಥಾನಿಕ ಸಂಸ್ಥೆಗಳು, ಸಹಕಾರಿ ಸಂಘಗಳು ಮತ್ತು ಖಾಸಗಿ ಸಂಸ್ಥೆಗಳು ಈ ಯೋಜನೆಗಳನ್ನು ಕೈಕೊಳುವಂತೆ ಪ್ರೋತ್ಸಾಹಿಸಬೇಕು.

೩) ಸಮಸ್ತ ಪ್ರಜಾವರ್ಗಕ್ಕೆ ವಿಪುಲ ನೀರು ದೊರೆಯುವಂತೆ ವ್ಯವಸ್ಥೆ ಮಾಡಬೇಕು. ೩೫ ವರುಷಗಳಲ್ಲಿ ಈ ಯೋಜನೆಯು ಕಾರ್ಯಕಾರಿಯಾಗುವಂತೆ ಗುರಿ ಇಟ್ಟುಕೊಳ್ಳಬೇಕು.

೪) ಪ್ರಾರಂಭದ ೧೦ ವರ್ಷಗಳಲ್ಲಿ ಈಗಿನಕಿಂತ ಎರಡುಪಟ್ಟು ಅಥವಾ ವರ್ಷಪ್ರತಿ ೪೦೦೦--೪೫೦೦ ವಿದ್ಯಾರ್ಥಿಗಳು ಡಾಕ್ಟರರಾಗಿ ಹೊರಬೀಳುವಂತೆ ಯೋಜಿಸಬೇಕು.

೫) ಮಲೇರಿಯಾ ನಿವಾರಣೆಗೆ ಸರ್ವವಿಧದ ಉಪಾಯ ಕೈಕೊಳ್ಳಬೇಕು. ಈಗಿದ್ದ ಮಲೇರಿಯಾ ನಿವಾರಣೆ ಸಂಸ್ಥೆಯನ್ನು ವಿಸ್ತರಿಸಬೇಕು. ಪ್ರಾಂತಿಕ ಸರಕಾರಗಳು ಇಂಥ ಸಂಸ್ಥೆ ಸ್ಥಾಪಿಸಬೇಕು. ಮಲೇರಿಯಾ ನಿವಾರಕ ಪಥಕಗಳನ್ನು ಏರ್ಪಡಿಸಬೇಕು.

೬) ಆರೋಗ್ಯ ವರ್ಧನೆಯ ಕಾರ್ಯದಲ್ಲಿ ಆಯುರ್ವೇದ ಮತ್ತು ಯುನಾನಿ ಪದ್ಧತಿಗಳ ಸ್ಥಾನವನ್ನು ಪ್ರಾಂತಿಕ ಸರಕಾರಗಳು ನಿರ್ಣಯಿಸಬೇಕು.

೭) ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳನ್ನು ನೇಮಿಸಬೇಕು. ಸ್ಥಾನಿಕ ಸಂಸ್ಥೆಗಳಲ್ಲಿ ಆರೋಗ್ಯ ಶಾಖೆಗಳನ್ನು ಏರ್ಪಡಿಸಬೇಕು.

೮) ಕೇಂದ್ರ ಮತ್ತು ಪ್ರಾಂತಿಕ ಆರೋಗ್ಯ ಮಂತ್ರಿಗಳ ಒಂದು ಮಧ್ಯವರ್ತಿ ಆರೋಗ್ಯ ವರ್ಧಕ ಮಂಡಲವನ್ನು ನೇಮಿಸಬೇಕು.

೯) ಡಾಕ್ಟರರಿಗೆ ಮತ್ತು ಆರೋಗ್ಯ ಕೆಲಸಗಾರರಿಗೆ ಇದೇ ದೇಶದಲ್ಲಿ ಅತ್ಯುತ್ತಮ ಶಿಕ್ಷಣ ಲಭಿಸುವ ಏರ್ಪಾಡು ಮಾಡಲು ಅ. ಭಾ. ಡಾಕ್ಟರರ ಒಂದು ಸಂಸ್ಥೆಯನ್ನು ಸ್ಥಾಪಿಸಬೇಕು.

೧೦) ಈ ಸೂಚನೆಗಳನ್ನು ಮತ್ತು ಇನ್ನಿತರ ಯುದ್ಧೋತ್ತರ ಯೋಜನೆಗಳನ್ನು ಮೊದಲು ದಿಲ್ಲಿ ಪ್ರಾಂತದಲ್ಲಿ ಪ್ರಯೋಗಿಸಿ ಜನರಿಗೆ ಪರಿಣಾಮ ತೋರಿಸಿ ಕೊಡಬೇಕು.

೧೧) ಸೈನ್ಯ ಖಾತೆಯಲ್ಲಿ ಆರೋಗ್ಯರಕ್ಷಕ ಅಧಿಕಾರಿಗಳು ಅನೇಕರಿದ್ದು ಅವರ ಸಹಾಯ ಪಡೆಯಬೇಕು.

ಕೇಂದ್ರ ವಿಧಿಮಂಡಲದಲ್ಲಿ ಪ್ರಾಂತೀಕರಣ ಗೊತ್ತುವಳಿ

ಕೇಂದ್ರ ವಿಧಿಮಂಡಲದಲ್ಲಿ ಶ್ರೀ ತಿರುಮಲರಾಯರು (ಕಾಂಗ್ರೆಸ) ತಂದ ಪ್ರತ್ಯೇಕ ಆಂಧ್ರ ಪ್ರಾಂತವಾಗಬೇಕೆಂಬ ಗೊತ್ತುವಳಿ ತಾ॥ ೨೭ಕ್ಕೆ ವಿರೋಧವಿಲ್ಲದೆ ಅಂಗೀಕೃತವಾಯಿತು ಮದ್ರಾಸ ಗವ್ಹರ್ನರ ಸಲಹೆಗಾರ ಸ್ಟ್ಯಾಥೆಯವರ ಸೂಚನೆಯಂತೆ ಮದ್ರಾಸ ಸಂಸ್ಥಾನವನ್ನು ಆಡಳಿತೆಯ ದೃಷ್ಟಿಯಿಂದ ಆಂಧ್ರ, ತಮಿಳುನಾಡು ಪ್ರದೇಶಗಳಾಗಿ ವಿಂಗಡಿಸಬೇಕೆಂದು ಅವರ ಗೊತ್ತುವಳಿಯ ಆಶಯವಾಗಿತ್ತು. ಶ್ರೀ. ತಿರುಮಲರಾಯರು ಪ್ರತ್ಯೇಕ ಕರ್ನಾಟಕ, ಕೇರಳ ಪ್ರಾಂತಗಳೂ ಆಗಬೇಕೆಂದು ಗೊತ್ತುವಳಿ ತಂದಿದ್ದರು. ಆದರೆ ಅಧ್ಯಕ್ಷರು ಅದನ್ನು ಕಿತ್ತು ಹಾಕಿದರು. ಶ್ರೀ. ಡೇವಿಡ ದೇವಿದಾಸ, ಗೋಪಾಲಸ್ವಾಮಿ ಅಯ್ಯಂಗಾರ, ಮೋತಿಲಾಲ ಮೊದಲಾದವರು ಗೊತ್ತುವಳಿಗೆ ಬೆಂಬಲ ಕೊಟ್ಟರು. ಬೇಗನೇ ಹೊಸ ರಾಜ್ಯಘಟನೆಯಾಗಲಿರುವದರಿಂದ ಈ ಗೊತ್ತುವಳಿ ಅವಶ್ಯವಿಲ್ಲವಾದರೂ ತಮ್ಮ ವಿರೋಧವಿಲ್ಲೆಂದು ಸರಕಾರದ ಪರವಾಗಿ ಸಭೆಯ ಧುರೀಣರಾದ ಸರ್ ಮಹಮದ ಉಸ್ಮಾನರು ಹೇಳಿದ್ದರಿಂದ ಅದು ಅವಿರೋಧ ಅಂಗೀಕೃತವಾಯಿತು.

ಸಿಂಧ ಲೀಗದಲ್ಲಿ ಪುನಃ ಒಡಕು

ಗಝುದಾರರೂ ಹೊರಬಿದ್ದರು?

ಮುಸ್ಲಿಂ ಲೀಗಕ್ಕೆ ಚಿಂತಾಜನಕವಾದ ಸುದ್ದಿಗಳು ಸಿಂಧದಿಂದ ದಿನವೂ ಬರಹತ್ತಿವೆ. ತಾ ೧೨ಕ್ಕೆ ಶಾಸನ ಸಭೆ ಪ್ರಾರಂಭವಾದೊಡನೆ ಸಮ್ಮಿಶ್ರ ಪಕ್ಷದ ಅವಿಶ್ವಾಸ ಗೊತ್ತುವಳಿ ಅವರನ್ನು ಎದುರಿಸುತ್ತಿದೆ. ಇದರಲ್ಲಿ ಅವರು ತತ್ಕಾಲ ಪಾರಾಗಬೇಕಾದರೆ ಯುರೋಪಿಯನ್ನರೇ ಶರಣು. ಆದರೆ ಲೀಗ ಪಕ್ಷದ ಸದಸ್ಯರು ಕಡಿಮೆ ಸಂಖ್ಯೆಯಲ್ಲಿ ಹಾಜರಿದ್ದ ದಿನ ನೋಡಿ ವಿರೋಧಿ ಪಕ್ಷ ಅವರನ್ನು ಉರುಳಿಸಲು ಪ್ರಯತ್ನಿಸುವದು. ಆದರೆ ಈಗ ಸಿಂಧಪ್ರಾಂತಿಕ ಲೀಗದ ಅಧ್ಯಕ್ಷರಾದ ಗಝುದಾರರೇ ಶಾಸನ ಸಭೆಯ ಅಧ್ಯಕ್ಷಸ್ಥಾನಕ್ಕೆ ಲೀಗ ಹುರಿಯಾಳನ್ನು ವಿರೋಧಿಸಿ ನಿಲ್ಲುವ ಇಚ್ಛೆಯನ್ನು ವ್ಯಕ್ತಗೊಳಿಸಿ ಸಮ್ಮಿಶ್ರ ಪಕ್ಷದ ನಾಯಕರಾದ ಶ್ರೀ ಜಿ. ಎಂ. ಸಯ್ಯದರಿಗೆ ಬೆಂಬಲ ಬೇಡಿ ಪತ್ರ ಬರೆದಿದ್ದಾರೆ. ಇದರಿಂದ ಲೀಗದವರು ಅಧ್ಯಕ್ಷತೆಗೆ ನಿಲ್ಲಿಸಿದ ಸಯ್ಯದ ಮಿರಾನಸಾಹೇಬರಿಗೆ ದಿಗಿಲುಂಟಾಗಿ ನವಾಬಜಾದಾ ಲಿಯಾಕತ ಅಲ್ಲಿಯವರಿಗೆ ತಂತಿ ಬಿಟ್ಟಿದ್ದಾರೆಂದು ತಿಳಿಯುತ್ತದೆ. ಗಝುದರರು ಮೊನ್ನೆ ಕರಾಚಿಯಲ್ಲಿ ದಂಗೆಯಾದಾಗ ಸರಕಾರದವರು ಮಿಲಿಟರಿಯವರಿಗೆ ನಗರದ ಭಾಗಗಳನ್ನು ಬಿಟ್ಟುಕೊಟ್ಟದ್ದನ್ನು ಟೀಕಿಸಿ ಹೇಳಿಕೆ ಹೊರಡಿಸಿದ್ದು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿತ್ತು.

ಮೈಸೂರು ರಾಜಕಾರಣ

ಮೈಸೂರು ಕಾಂಗ್ರೆಸ್ ಅಧಿವೇಶನ

ಮೈಸೂರು ಕಾಂಗ್ರೆಸ್ಸಿನ ಆರನೆ ಮಹಾ ಅಧಿವೇಶನ ಇದೇ ತಿಂಗಳು ಹಾಸನದಲ್ಲಿ ಸೇರತಕ್ಕದ್ದೆಂದು ನಿರ್ಣಯಿಸಲಾಗಿದೆ. ಶ್ರೀ ಸಿದ್ಧವನಹಳ್ಳಿ ನಿಜಲಿಂಗಪ್ಪನವರ ಅಧ್ಯಕ್ಷತೆಯು ಒಂದು ವರ್ಷದ ಅವಧಿ ಮುಗಿದುಹೋಗಿ ಈಗ ಹೊಸ ಅಧ್ಯಕ್ಷರ ಆಯ್ಕೆಯು ಎತ್ತುಗಡೆಯೂ ನಡೆದಿದೆ. ಅಧಿವೇಶನದ ಮುಂಚೆ ಆಗಬೇಕಾದ ಕಾಂಗ್ರೆಸ್ ಪ್ರತಿನಿಧಿ ಚುನಾವಣೆಯೂ ಮುಗಿದುಹೋಗಿದೆ. ಅಧ್ಯಕ್ಷ ಚುನಾವಣೆಯ ವಿಷಯದಲ್ಲಿ ಹಿಂದಿನ ಬಾರಿ ಆದಂತೆ ಈ ಬಾರಿಯೂ ಸ್ಪರ್ಧೆಯುಂಟಾಗುವ ಲಕ್ಷಣ ತೋರುತ್ತದೆ- ಶ್ರೀಮತಿ ಯಶೋಧರಾ ದಾಸಪ್ಪನವರನ್ನು-ಕಳೆದ ಬಾರಿ ಸ್ಪರ್ಧಿಸಿ ಅವರು ಅಯಶಸ್ವಿಯಾಗಿದ್ದರು-ಈ ಬಾರಿಯಾದರೂ ಆರಿಸಿ ತರಬೇಕೆಂದು ಹಲ ಕಾಂಗ್ರೆಸ್ ಕಾರ್ಯಕರ್ತರು ಇಚ್ಛಿಸಿದ್ದರೆ ಮೈ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸದಸ್ಯರಲ್ಲೊಬ್ಬರು ಈ ಪದವಿಗೆ ಆಶಿಸುತ್ತಿರುವರೆಂದು ಸುದ್ದಿಯಿದೆ. ಮೈಸೂರು ಕಾಂಗ್ರೆಸ್ಸಿನಲ್ಲಿದ್ದ ಭಿನ್ನಾಭಿಪ್ರಾಯಗಳು ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯ ಕಾಲದಲ್ಲಿ—ಅವರ ಸಾತ್ವಿಕತೆಯ ಫಲವಾಗಿ—ಅಳಿದುಹೋಗಿ ಐಕ್ಯವಾಗಬಹುದೆಂಬ ಆಸೆ ಅಷ್ಟೊಂದು ಸಫಲವಾಗಲಿಲ್ಲವೆಂದು ಹಲವರ ತಿಳುವಳಿಕೆ. ಶ್ರೀ ನಿಜಲಿಂಗಪ್ಪನವರ ಸಾತ್ವಿಕತೆಯನ್ನು ಸ್ವಾರ್ಥಸಾಧಕರು ದುರುಪಯೋಗಪಡಿಸಿಕೊಂಡಿದ್ದಾರೆಂಬ ಭಾವನೆಯೂ ಪ್ರಚಲಿತವಾಗಿದೆ. ಆದುದರಿಂದ ಅವರು ಪುನಃ ಆಯ್ಕೆಗೆ ಇಚ್ಛಿಸುವರೋ ಇಲ್ಲವೋ ಹೇಳುವುದು ಕಠಿಣ.

ಚಿನ್ನದ ಗಣಿ ಸಂಪು

ಕೋಲಾರದ ಚಿನ್ನದಗಣಿ ಸಂಪು ಈ ಎರಡು ತಿಂಗಳುಗಳಿಂದಲೂ ನಡೆಯುತ್ತಲೇ ಇದ್ದು ಸರಕಾರ ಕೈ ಈ ಸಂಪಿನ ದಿನಕ್ಕೆ ಬಿಗಿಯಾಗಿ ಸಹ ವಾಗುತ್ತ ಬರುತ್ತಿರುವ ಮತ್ತು ಕೂಲಿಕಾರರ ಸ್ಥಿತಿ ಕಠಿಣವಾಗಿರುವ ಸಂಗತಿಯನ್ನು ಸರಕಾರದ ಮನಸ್ಸಿನ ಮೇಲೆ ಬಿಂಬಿಸಲು ಶ್ರೀ ಕೆ. ಟಿ. ಭಾಷ್ಯಂ ಅವರ ನೇತೃತ್ವದಲ್ಲಿ ಸಾರ್ವಜನಿಕ ಶಿಷ್ಟ ಮಂಡಲವೊಂದು ದಿವಾನರನ್ನೂ ಕಂದಾಯ ಮಂತ್ರಿ ಹುಲ್ಲಾರೆಡ್ಡಿಯವರನ್ನು ಕಳೆದ ವಾರ ಭೆಟ್ಟಿಯಾಗ ಮಂತ್ರಿವರ್ಯರು ಅವರಿಗಿತ್ತ ಉತ್ತರ ಅಷ್ಟೊಂದು ಆಶಾದಾಯಕವಾಗಿರಲಿಲ್ಲ. ಕಾರ್ಖಾನೆಯ ಮೇರೆಗೆ ಸರಕಾರ ಈ ಕೂಲಿಕಾರ ಒಡೆಯ ತಕ್ರಾರಿನಲ್ಲಿ ಪ್ರವೇಶಿಸಲು ಬರುವದಿಲ್ಲ. ಚಿನ್ನದ ಗಣಿಯವರಿಗೆ ದೊರೆಯುತ್ತಿರುವ ಲಾಭವನ್ನು ನೋಡಿದರೆ ಕೂಲಿಕಾರರ ಬೇಡಿಕೆಗಳ ವಿಷಯದಲ್ಲಿ ಕಂಪನಿಯವರನ್ನು ಒತ್ತಾಯಗೊಳಿಸುವ ಸ್ಥಿತಿಯಿಲ್ಲ. ಇನ್ನೊಂದು ವಾರದಲ್ಲಿಯೇ ಕಂಪನಿಯವರು ಸಂಬಳ, ಗ್ರಾಚ್ಯುಯಿಟಿ, ಪೆನ್ಷನ್ ಮೊದಲಾದ ವಿಷಯಗಳಲ್ಲಿ ತಮ್ಮ ಹೊಸ ಸ್ಕೀಮುಗಳ ನಿರ್ಣಯವನ್ನು ಪ್ರಕಟಿಸಲಿರುವರು. ಕೂಲಿಕಾರರು ಅದಕ್ಕೆ ಹೊಂದಿಕೊಂಡು ಕೆಲಸಕ್ಕೆ ಮರಳಬೇಕು ಎಂದು ಅವರು ಹೇಳಿಬಿಟ್ಟರು. ಇದರಿಂದ ಸಂಪು ಇನ್ನೂ ಮುಂದುವರಿಯುವ ಮತ್ತು ಕಂಪನಿಯವರ ಪ್ರಕಟನೆ ಕೂಲಿಕಾರರ ಬೇಡಿಕೆಗಳನ್ನು ಮನ್ನಿಸಿದಿದ್ದರೆ ಇನ್ನೂ ವಿಪತ್ತಿದಾಯಕ ದುಷ್ಪರಿಣಾಮಗಳಾಗುವ ಸ್ಥಿತಿಯುಂಟಾಗಿದೆ. ಅತ್ಯಂತ ಶಿಸ್ತಿನಿಂದಲೂ ಶಾಂತತೆಯಿಂದಲೂ ಸಾಗಿರುವ ಈ ಐಕ್ಯಪೂರ್ಣವಾದ ಸಂಪಿನ ವಿಷಯದಲ್ಲಿ ಸಾರ್ವಜನಿಕರಾಗಲಿ ಅಖಿಲ ಭಾರತ ಕೂಲಿಕಾರ ಸಂಸ್ಥೆಗಳಾಗಲಿ ಚಕಾರ ಶಬ್ದ ಆಡದಿರುವದು ವಿಚಿತ್ರವೇ ಸರಿ.

ಲಂಚಗುಳಿತನ ವರದಿ

ಸರಕಾರದವರು ನೇಮಿಸಿದ ಲಂಚನಿರೋಧ ವಿಚಾರಣಾ ಸಮಿತಿಯವರು ತಮ್ಮ ವರದಿಯನ್ನು ಇತ್ತಿಗೊಳಿಸಿ ಕಳೆದ ವಾರಾಂತ್ಯದಲ್ಲಿ ಸರಕಾರಕ್ಕೊಪ್ಪಿಸಿದರು. ಸರಕಾರದ ಅಧಿಕಾರಿ ಮತ್ತು ನೌಕರ ವರ್ಗದಲ್ಲಿ ಲಂಚಗುಳಿತನ ಹಬ್ಬಿದಯೆಂಬ ಮಾತನ್ನು ಅವರು ನೇರವಾಗಿ ಒಪ್ಪಿಕೊಂಡಿದ್ದಾರೆ. ಈ ದುರ್ವಿಚಾರಿಯ ಸಡತೆಯನ್ನು ಪರಿಣಾಮಕಾರಿಯಾಗಿ ತಡೆಯಲು ಅದನ್ನು ವಿಚಾರಿಸುವ ಯೋಗ್ಯ ಕ್ರಮ ಕೈಕೊಳ್ಳುವ ಸರಕಾರಿ ಖಾತೆಯೊಂದನ್ನು ನಿರ್ಮಿಸಬೇಕೆಂದು ಸೂಚಿಸಲಾಗಿದೆ. ಸಮಿತಿಯವರು ಈಗಿರುವ ಇಲಾಖಾ ವಿಚಾರಣೆಯ ಪದ್ಧತಿಯಿಂದ ಲಂಚ ನಿರೋಧಕ್ಕೆ ಯಾವ ಪ್ರಯೋಜನವೂ ಇಲ್ಲವೆಂಬುದು ಸಮಿತಿಯ ಅಭಿಪ್ರಾಯವಾಗಿದೆ. ಈ ಸಮಿತಿಯ ವರದಿಯನ್ನು ಸರಕಾರದವರು ಪೂರ್ಣವಾಗಿ ಪ್ರಕಟಿಸುವರೆ, ಯಾವಾಗ ಪ್ರಕಟಿಸುವರು ಎಂಬುದು ಇನ್ನೂ ಗೊತ್ತಾಗಿಲ್ಲ.

ವ್ಯಾಪಾರ ಪ್ರಪಂಚ

ಮುಂಬಯಿ ಶೇರ ಪೇಟೆ

ಕೇಂದ್ರ ಆಯವ್ಯಯ ಪತ್ರಿಕೆಯಲ್ಲಿ ಅಧಿಕ ಲಾಭದ ತೆರಿಗೆಯನ್ನು ರದ್ದುಗೊಳಿಸಲಾದ ಸುದ್ದಿ ಬಂದೊಡನೆ ಶೇರ ಪೇಟೆಯಲ್ಲಿ ಒಮ್ಮಿಂದೊಮ್ಮೆ ತೇಜಿ ಹೆಚ್ಚಿಬಿಟ್ಟಿತು. ಟಾಟಾ ಸ್ಟೀಲ ಪಾಲುಗಳೂ ಡಾಯಿಂಗ ಪಾಲುಗಳೂ ಪರಮಾವಧಿ ಏರಿಕೆಯನ್ನು ತೋರಿದವು. ತಾ. ೨೮ನೆ ದಿನ ಇನ್ನೂ ೨೮೩೭ ರಲ್ಲಿದ್ದ ಟಾಟಾ ಸ್ಟೀಲ ಡೆಫರ್ಡ ಪಾಲು ಒಂದೇ ಸಿಟ್ಟಿಗೆ ೨೯೨೦-೦-೦ ಕ್ಕೆ ಹಾರಿತು. ಮುಂದೆ ಅದು ೨೯೪೭-೮-೦ ರ ವರೆಗೂ ಹೋಗಿ ಹಿಂದೇಟು ಬಿದ್ದು ೨೯೨೫-೦-೦ ಕ್ಕೆ ಮರಳಿತು. ೨೨೪೭-೮-೦ ರಲ್ಲಿದ್ದ ಡಾಯಿಂಗ ಪಾಲು ೨೪೫೦ ಕ್ಕೆ ಅಭೂತಪೂರ್ವವಾಗಿ ಏರಿತು. ಆದಿಗ ೨೪೬೭-೮-೦ ರಲ್ಲಿವೆ. ಸ್ವದೇಶಿ ೬೭೮-೦-೦ ರಿಂದ ೭೧೫-೦-೦ ಕ್ಕೆ ಜಿಗಿದು ೬೨೮-೦-೦ ರ ವರೆಗೂ ಹೋಗಿ ೭೦೫-೦-೦ ಕ್ಕಿಳಿಯಿತು. ಸೆಂಚೂರಿ ಮಾತ್ರ ೯೯೫ ರಲ್ಲಿ ಯಥಾಸ್ಥಿತಿ. ಸೆಂಟ್ರಲ ಇಂಡಿಯಾ ೪೬೩-೦-೦ ರಿಂದ ೪೯೯-೦-೦ ಕ್ಕೇರಿ ೪೯೦ ರಲ್ಲಿದೆ. ಬೇಲಾಪುರ ೨೪೯-೦-೦ ರಿಂದ ೨೫೭ ರ ವರೆಗೂ ಹೋಗಿ ೨೫೪-೮-೦ ಗಿಳಿಯಿತು. ಅಸೋಸಿಯೇಟಿಡ್ ಸಿಮೆಂಟ್ಸ ೨೩೮-೮-೦ ರಿಂದ ೨೬೧-೦ ಕ್ಕೇರಿತು. ಸೆಂಟ್ರಲ್ ಬ್ಯಾಂಕು ೧೧೦-೪-೦ ರಿಂದ ೧೦೯-೮-೦ ಕ್ಕೂ ಇಂಪೀರಿಯಲ ಎಫ್. ಪಿ. ೨೩೯೭-೮-೦ ರಿಂದ ೨೫೫೦-೦-೦ ಕ್ಕೂ ರಿಝರ್ವ ಬ್ಯಾಂಕ ೧೫೭-೦-೦ ರಿಂದ ೧೬೦-೦-೦ ಕ್ಕೂ ಏರಿದವು.

ಜಿ. ಪಿ. ನೋಟುಗಳು ಇಳಿಮುಖವಾಗಿ ೧೦೨-೧೪-೦ ಕ್ಕೆ ಬಂದವು. ೩॥ (೧೯೪೭-೫೦) ಸಾಲ ೧೦೩-೬-೦ ರಲ್ಲಿ ಯಥಾಸ್ಥಿತಿ.

ಚಿನ್ನ-ಬೆಳ್ಳಿ

ಕೇಂದ್ರ ಹಣಕಾಸಿನ ಮಸೂದೆಯಲ್ಲಿ ಚಿನ್ನದ ಮೇಲೆ ತೊಲೆಗೆ ೨೫-೦-೦ ರೂ. ಬೆಳ್ಳಿಯ ಮೇಲೆ ೦-೮-೦ ಸುಂಕದ ಸೂಚನೆಯಿದ್ದುದು ಪೇಟೆಯನ್ನು ಮೊದಲು ಕ್ರಾಸಗೊಳಿಸಿತು. ಚಿನ್ನದ ಅಂತರ್ರಾಷ್ಟ್ರೀಯ ಬೆಲೆ ರೂ. ೪೬-೦-೦ ಸುಂಕ ೨೫-೦-೦ ಹೀಗೆ ಆದರ ಬೆಲೆ ೭೧-೦-೦ ಆಗುವದು. ಇದು ಇಳಿತಕ್ಕೆ ಕಾರಣವಾಗಿ ಚಿನ್ನ ರೂ. ೮೬ ರ ವರೆಗೂ ಬಂದಿದ್ದರೂ ಮುಂದೆ ಸುಧಾರಿಸಿ ರೂ. ೮೯-೦-೦ ಕ್ಕೆ ನಿಂತಿದೆ. ವಾಯಿದಾ ವ್ಯಾಪಾರವಿಲ್ಲ. ಬೆಳ್ಳಿ ೧೪೩-೨-೦ ರ ವರೆಗೂ ಇಳಿದು ಈಗ ೧೪೬-೦-೦ ರಲ್ಲಿದೆ.

ಅರಳೆ ಪೇಟೆ

ಮಾರ್ಚ ವಾಯಿದೆ ಅರಳೆ ಬೆಲೆ ತಾ. ೭೮ ಕ್ಕೆ ೪೬೬-೦-೦ ರಲ್ಲಿದ್ದದು ೪೭೧-೦-೦ ವರೆಗೂ ಏರಿ ಮತ್ತೆ ೪೬೭-೮-೦ ಕ್ಕಿಳಿಯಿತು. ಮೇ ರೂ. ೪೭೧-೮-೦; ಜುಲೈ ೪೮೦-೮-೦ ಸಪ್ಟಂಬರ ೪೮೬-೮-೦.

ಎಣ್ಣೆಕಾಳು

ಶೇಂಗಾ	ರೂ.	೧೦೨-೮-೦
ಅಗಸಿ	,,	೨೨-೧೨-೦
ಅಗಸಿಎಣ್ಣೆ	,,	೧೩-೨-೦

ಸಾಂಗಲಿ ಪೇಟೆ

ಜಿಲ್ಲ ಬಂಗಾಲಿಮಣ	ರೂ.	೧೪ —	೧೬
ಅರಿಸಿಣ ಹೇರು	,,	೬೩ —	೭೨
ಮೆಣಸಿನಕಾಯಿ	,,	೧೪೦ —	೧೮೦
ಶೇಂಗಾ (ಖಂಡಿ)	,,	೯೩ —	೯೫
ಶೇಂಗಾ ಎಣ್ಣೆ (ಮಣ)		೧೨—೬—೦	
ದೇಶಿ ತಂಬಾಕು (ಹೇರು)		೧೦೦ —	೧೯೫

ಶಿವಮೊಗ್ಗೆ

ತೀರ್ಥಹಳ್ಳಿ ಬೇಸಾವರ ಅಡಿಕೆ ಮಣ ರೂ.	೨೨-೨೬
ಕೊಪ್ಪ ಶೃಂಗೇರಿ	೨೦-೨೩
ತೂರಸಾಲು	೧೮-೨೨
ಇಸ್ನಾವರಂ	೧೮-೨೦
ಅಲವು	೨೨-೨೫
ಬೆಟ್ಟವಂತಿ	೧೨-೧೩॥
ಚಿಪ್ಪು	೧೦-೧೧॥
ನೆಣಸು	೧೪-೧೫
ಶೀಗೆಕಾಯಿ	೪॥।

ಪೇಟೆ ಬಿಗಿಯಾಗಿದೆ. 'ಆಯಾತ ತೆರಿಗೆ'ಯಿಂದ ಸಂತೋಷವಾಗಿದೆ. ಆದರೆ ಆದರಿಂದ ದೇಶಿ ಅಡಿಕೆಗೆ ಯೋಚಿಸಿದಷ್ಟು ರಕ್ಷಣೆ ದೊರೆಯಲಿಲ್ಲ ವೆಂಬ ಖೇದವಿದೆ-

ಹುಬ್ಬಳ್ಳಿ ಪೇಟೆ

ಜಯವಂತಿ ಹತ್ತಿ (ಕುಂದಗೋಳ)	೩೩೫-೩೩೭
" (ಏರಿ)	೩೨೫-೩೨೫
" (ಬಂಕಾಪುರ)	೩೨೮-೩೩೦
ಅಪ್ಲಂಡ ಹೊಸವು	೩೦೦-೩೦೫

ದಕ್ಷಿಣ ಕನ್ನಡ

ದಕ್ಷಿಣ ಕನ್ನಡ ಜಿಲ್ಲಾ ಪತ್ರಿಕೋದ್ಯೋಗಿ ಸಂಘದ ವಾರ್ಷಿಕ ಮಹಾಸಭೆ ತಾ. ೨೮ (ಫೆ.) ಗೆ ಶ್ರೀ ಎ. ಎಲ್. ಪಿಂಟೋ ಅವರ ಅಧ್ಯಕ್ಷತೆಯಲ್ಲಿ ಮಂಗಳೂರಲ್ಲಿ ಸೇರಿತ್ತು. ಕಳೆದ ವರ್ಷದ ಕಾರ್ಯಕಾರಿ ಮಂಡಳಿಯನ್ನೇ ಪುನಃ ಆರಿಸಿದ್ದಲ್ಲದೆ ಶ್ರೀ ಪಿಂಟೋ ಅವರನ್ನು ಸಹಾಯಕ ಉಪಾಧ್ಯಕ್ಷರಾಗಿಯೂ ಶ್ರೀ ಕೆ. ಕೃಷ್ಣರಾವ, ಜ. ಬಿ. ಎಂ. ಇಸ್ತ್ರೀಸಬ್ಬ ಮತ್ತು ಮೈಕೆಲ ಸಲ್ಡಾಞ ಇವರನ್ನು ಹೆಚ್ಚಿನ ಕಾರ್ಯಕಾರಿ ಸದಸ್ಯರಾಗಿಯೂ ಆರಿಸಲಾಯಿತು. ಸಂಘದ ಮುಂದಿನ ಬೆಳವಣಿಕ್ಕಾಗಿ ನಿಧಿ ಸಂಗ್ರಹ ಮಾಡಬೇಕೆಂಬ ನಿರ್ಣಯವೂ ಆಯಿತು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮದ್ರಾಸ ಶಾಸನ ಸಭೆಯ ಮೂರು ಸಾಮಾನ್ಯ ಸ್ಥಳಗಳೂ ಹರಿಜನ ಸ್ಥಳವೂ ಕ್ರಿಶ್ಚಿಯನ್ ಸ್ಥಳವೂ ಕಾಂಗ್ರೆಸ್ಸಿಗೆ ಅವಿರೋಧವಾಗಿ ದೊರೆತಿವೆ. ಶ್ರೀ ಕೆ. ಆರ್. ಕಾರಂತರಿಗೆ ವಿರುದ್ಧವಾಗಿ ರ್‍ಯಾಡಿಕಲ್ ಪಕ್ಷದ ಶ್ರೀ ಕೃಷ್ಣಭಟ್ಟರು ನಾಮಪತ್ರ ಕೊಟ್ಟಿದ್ದರೂ ಪರಿಶೀಲನೆಯಲ್ಲಿ ಅದು ನಿರಾಕರಿಸಲ್ಪಟ್ಟದ್ದರಿಂದ ಅವರು ಅವಿರೋಧವಾಗಿ ಆರಿಸಿ ಬಂದರು. ಹರಿಜನ ಸ್ಥಾನಕ್ಕೆ ಕಾಂಗ್ರೆಸ್ಸದ ಶ್ರೀ ಕೆ. ಈಶ್ವರರ ವಿರುದ್ಧ ನಿಂತಿದ್ದ ಶ್ರೀ ಗೋಪಾಲ ಸಾಲ್ಯಾನ್ನರು ಹಿಂತೆಗೆದುಕೊಂಡರು. ಹೀಗೆ ಶ್ರೀ ಕೆ. ಆರ್. ಕಾರಂತ (ಪುತ್ತೂರು ವಿಭಾಗ), ಡಾ. ಯು. ಪಿ. ಮಲ್ಯ (ಮಂಗಳೂರು), ಶ್ರೀ ಎ. ಬಿ. ಶೆಟ್ಟಿ (ಕುಂದಾಪುರ), ಶ್ರೀ ಕೆ. ಈಶ್ವರ (ಹರಿಜನ) ಮತ್ತು ಶ್ರೀ ಎಲ್. ಸಿ ಪಾಯಸ (ಕ್ರಿಶ್ಚನ್) ಇವರು ಅವಿರೋಧ ಆರಿಸಿಬಂದಂತಾಯಿತು.

ಬಲುಚಿಸ್ತಾನದ ಮುಸ್ಲಿಂ ಲೀಗ ನಾಯಕರಾದ ಕಾಜಿ ಮಹಮ್ಮದ ಈಸಾ ಅವರು ಚುನಾವಣೆ ಪ್ರಚಾರದ ನಿಮಿತ್ತ ತಾ. ೨೮ (ಫೆ.) ಕ್ಕೆ ಮಂಗಳೂರಿಗೆ ಬಂದರು. ಅವರೊಡನೆ ಕೇಂದ್ರ ಶಾಸನ ಸಭೆಯ ಪಶ್ಚಿಮ ಕರಾವಳಿ ಮುಸ್ಲಿಂ ಸದಸ್ಯರಾದ ಹಾಜಿ ಅಬ್ದುಲ ಸತ್ತಾರ ಸೇಠರೂ ಇದ್ದರು. ಮಂಗಳೂರು ಮೈದಾನದಲ್ಲಿ ಸೇರಿದ ಸಭೆಯಲ್ಲಿ ಅವರು,ಮುಸ್ಲಿಮರೆಲ್ಲರೂ ಮುಂದಿನ ಶಾಸನ ಸಭಾ ಚುನಾವಣೆಯಲ್ಲಿ ಲೀಗ ಹುರಿಯಾಳಿಗೇ ಬೆಂಬಲ ಕೊಡಬೇಕೆಂದೂ ಪಾಕಿಸ್ತಾನವೇ ಮುಸ್ಲಿಮರಿಗೆ ಪರಮ ಧ್ಯೇಯವೆಂದೂ ಸಾರಿದರು.

ಉಪ್ಪಿನಂಗಡಿಯ ನೆರೆಹೊರೆಯ ೭ ಗ್ರಾಮಗಳ ಗ್ರಾಮಸ್ಥರ ಸಭೆಯೊಂದು ತಾ. ೨೪ ಕ್ಕೆ ಉಪ್ಪಿನಂಗಡಿಯಲ್ಲಿ ಶ್ರೀ ಪಿ. ಎಸ್. ತಿಮ್ಮಪ್ಪಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಕೂಡಿ "ಹೆಚ್ಚು ಆಹಾರ ಬೆಳೆಯಿರಿ" ಪ್ರಚಾರ ಭಾಷಣ ಮಾಡಲಾಯಿತು.

ಬೆಂಗಳೂರಲ್ಲಿ

ವಿದ್ಯಾವತಿಯರಾದ ಮಹಿಳೆಯರನ್ನು ಸೆಕ್ರೆಟೆರಿಯಟ್ ಕಚೇರಿಗಳಲ್ಲಿಯೂ ಸರಕಾರಿ ಕಚೇರಿಗಳಲ್ಲಿಯೂ ಸ್ಟೆನೋಗ್ರಾಫರ ಕೆಲಸಕ್ಕೆ ತೆಗೆದುಕೊಳ್ಳಬೇಕೆಂಬ ಪಬ್ಲಿಕ್ ಸರ್ವಿಸಸ ಕಮಿಶನರರ ಸಲಹೆಯನ್ನು ಮೈಸೂರ ಸರಕಾರ ಅಂಗೀಕರಿಸಿದೆ.

ವ್ಯವಸಾಯಾಭಿವೃದ್ಧಿ ಸಮಿತಿಯ ಸಲಹೆಯಂತೆ ೫ ವರ್ಷಗಳಲ್ಲಿ ೧೦೫ ಪಶುವೈದ್ಯ ಶಾಲೆಗಳನ್ನು ಸಂಸ್ಥಾನದಲ್ಲಿ ತೆರೆಯಲು ಮೈಸೂರ ಸರಕಾರ ಒಪ್ಪಿದೆ.

ಬೆಂಗಳೂರು ನಗರ ಸಭೆಯಲ್ಲಿ, ಕಲಕತ್ತೆ, ಮುಂಬಯಿ ಮತ್ತು ಮದುರಾಸುಗಳಲ್ಲಿ ಪೋಲೀಸ ಮತ್ತು ಮಿಲಿಟರಿ ಗೋಳಿಬಾರಗಳಿಂದುದಕ್ಕಾಗಿ ವಿಷಾದ ವ್ಯಕ್ತಗೊಳಿಸುವ ಮತ್ತು ಆದರಿಂದ ಸಾವುನೋವುಗಳಿಗೀಡಾದವರ ಒಗ್ಗೆ ಅನುತಾಪ ವ್ಯಕ್ತಗೊಳಿಸುವ ಗೊತ್ತುವಳಿಯೊಂದು ಅಂಗೀಕೃತವಾಯಿತು.

ಗಾಂಧೀ ನಿಧಿ ಶೇಖರಣೆ ಸಮಿತಿಯವರು ೨೫೦೦ ಗಾಂಧೀಜಿಗರ್ಪಿಸಲು ೨೫,೫೦೭ ರೂಪಾಯಿ ಸಂಗ್ರಹಿಸಲ್ಪಟ್ಟಿದ್ದು ೬,೩೦೪ ರೂ. ಈಗಾಗಲೆ ಕೂಡಿದೆ. ಈ ತಿಂಗಳ ಅಂತ್ಯದ ವರೆಗೆ ನಿಧಿ ಸಂಗ್ರಹಿಸಿ ಗಾಂಧೀಜಿಗೊಪ್ಪಿಸಬೇಕೆಂದು ನಿರ್ಣಯಿಸಲಾಗಿದೆ.

ಮೈಸೂರು ಸಂಸ್ಥಾನದ ಪ್ರಸಿದ್ಧ ವೀರಶೈವ ಮಠವಾದ ದೇವನೂರು ಮಠದ ಪ್ರಕರಣದಲ್ಲಿ ಮೈಸೂರು ಸೆಶನ್ಸ ಜಜ್ಜರು ತೀರ್ಪು ಕೊಟ್ಟಿದ್ದು ಮಠದ ಆಸ್ತಿ ಸಾರ್ವಜನಿಕರಿಗೆ ಸೇರಿದ್ದೆಂದೂ ಅದರ ಬಗ್ಗೆ ತಕ್ಷಣ ಒಂದು ಆಡಳಿತವ್ಯವಸ್ಥೆ ಉಚಿತವಾಗಬೇಕೆಂದೂ ಹೇಳಿದ್ದಾರೆ. ಈ ಮಠದ ಆಸ್ತಿ ಮಠದ ಸ್ವಾಮಿಗಳ ಯಾವಮಾನ್ಯಕ್ಕೆ ಸೇರಿದ್ದೆಂದು ಮಠದ ಸ್ವಾಮಿಗಳೂ ಸಾರ್ವಜನಿಕರಿಗೆ ಸೇರಿದ್ದೆಂದು ಮಠದ ಶಿಷ್ಯರೂ ವಾದಿಸಿ ವ್ಯಾಜ್ಯ ಹೂಡಿದ್ದರು.

ಮೈಸೂರು ಸರಕಾರದ ಆರ್ಥಿಕ ಸಮ್ಮೇಲನದವರು ನೀರಾವರಿಗಳ ಬಗ್ಗೆ ೫ ವರ್ಷಗಳ ಯೋಜನೆಯೊಂದನ್ನು ಮಂಜೂರು ಮಾಡಿದ್ದು ೨೦೦ ಲಕ್ಷ ರೂಪಾಯಿ ವೆಚ್ಚದಲ್ಲಿ ೯೭೦೦೦ ಎಕರೆ ಭೂಮಿಗೆ ನೀರು ಕೊಡುವ ೩೪ ನೀರಾವರಿ ಕಾಮಗಾರಿಗಳನ್ನು ಕೈಕೊಂಡು ಪೂರೈಸುವದು ಅದರಲ್ಲಿ ಅಡಕವಾಗಿದೆ. ವ್ಯವಸಾಯ ರಾಸಾಯನಿಕಗಳ ಅಭಿವೃದ್ಧಿಗಾಗಿ ೭೪ ಲಕ್ಷ ಅನ್ನತ್ರ ಮತ್ತು ೮೦ ಲಕ್ಷ ಆನಾವೃತ್ತ ವೆಚ್ಚದ ೪೨ ಪಂಚವಾರ್ಷಿಕ ಯೋಜನೆಗಳೂ ಅಂಗೀಕೃತವಾದವು.

ತಾ. ೪ಕ್ಕೆ ಹಿಂದುಸ್ತಾನ ಸರಕಾರದ ಫುಡ್‌ಬೋರ್ಡ ಸಮಿತಿಯವರು ಬೆಂಗಳೂರಿಗೆ ಬಂದರು. ತಾ. ೫ಕ್ಕೆ ದಿವಾನರ ಕಚೇರಿಯಲ್ಲಿ ಮೈಸೂರು ಸರಕಾರ ಮತ್ತು ಈ ಸಮಿತಿಯವರು ಸಮ್ಮೇಲನ ಸೇರಿ ಆಹಾರ ಪರಿಸ್ಥಿತಿ ಸುಧಾರಿಸುವ ಮಾರ್ಗಗಳನ್ನು ಚರ್ಚಿಸಿದರು. ಸುಧಾರಿಸಿದ ಗೊಬ್ಬರ ಮತ್ತು ಇತರ ವೈಜ್ಞಾನಿಕ ವಿಧಾನಗಳಿಂದ ಅತ್ಯಲ್ಪ ಕಾಲದಲ್ಲಿ ಹೆಚ್ಚಾಗಿ ಬೆಳೆಯನ್ನು ತೆಗೆಯುವ, ಬಂಜರು ಭೂಮಿಯನ್ನು ಹಸನು ಮಾಡಿ ಅಲ್ಪಸ್ವಲ್ಪ ಮಳೆಯಾದಾಗ ಅದರಲ್ಲಿ ಬೆಳೆ ತೆಗೆಯುವ ಮತ್ತು ತ್ವರೆಯಾಗಿ ಆಹಾರ ಪದಾರ್ಥಗಳನ್ನು ಒದಗಿಸುವುದು ನಿಟ್ಟಿನಲ್ಲಿ ಸಾಗಿಸುವ ವಿಚಾರಗಳಲ್ಲಿ ಮಿಲಿಟರಿಯವರಿಂದಾಗಬಹುದಾದ ಸಹಾಯವನ್ನು ಕುರಿತು ಚರ್ಚಿಸಲಾಯಿತು.

ಮೈಸೂರು ಸರಕಾರದ ಆರ್ಥಿಕಾಭಿವೃದ್ಧಿ ಸಮ್ಮೇಲನದ ರೇಶ್ಮೆ ವ್ಯವಸಾಯ ಸಮಿತಿಯ ಸಭೆಯಾಗಿ ಸಂಸ್ಥಾನದಲ್ಲಿ ರೇಶ್ಮೆ ನಿಯಂತ್ರಣಾಜ್ಞೆಗಳನ್ನು ಹಿಂತೆಗೆದುಕೊಳ್ಳಬೇಕೆಂದು ಸರಕಾರಕ್ಕೆ ಸೂಚಿಸುವ ಗೊತ್ತುವಳಿ ಅಂಗೀಕರಿಸಲ್ಪಟ್ಟಿತು.

ಉಡುಪಿಯ ಸಂಸ್ಕೃತ ಕಾಲೇಜ ಕಟ್ಟಡದ ನಿಧಿಗಾಗಿ ಸಂಚಾರ ಕೂಂಡಿದ್ದ ಪಲಿಮಾರು ಮಠದ ಶ್ರೀಪಾದಂಗಳವರು ಉತ್ತರ ಕರ್ನಾಟಕ ಭಾಗದ ಸಂಚಾರದಲ್ಲಿಯೇ ಸುಮಾರು ೧ ಲಕ್ಷ ರೂಪಾಯಿ ಸಂಗ್ರಹಿಸಲು ಸಮರ್ಥರಾಗಿದ್ದು ಈಗ ಮೈಸೂರು ಸಂಸ್ಥಾನದಲ್ಲಿ ಸಂಚರಿಸುತ್ತಿದ್ದಾರೆಂದು ತಿಳಿಯುತ್ತದೆ.

ಹೆರಾಲ್ಡ ಲಾಸ್ಕಿಯವರ ಕಿವಿಮಾತು

(೧ನೇ ಪುಟದಿಂದ)

ಒಪ್ಪಂದಕ್ಕೆ ಬಂದೇ ತೀರುವೆನೆಂಬ ಕಳಕಳಿಯ ನಿರ್ಧಾರದಿಂದ ಪ್ರಾರಂಭಿಸಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಜಿನ್ನಾ ಸಾಹೇಬರು ಬರಿ ಮುಸ್ಲಿಮ ಲೀಗಕ್ಕಷ್ಟೆ ಉತ್ತರವಾದಿಗಳಲ್ಲ: ಅವರು ಇಡಿ ಹಿಂದುಸ್ತಾನದ ಭವಿತವ್ಯಕ್ಕೆ ಉತ್ತರವಾದಿಗಳು. ಅಂತೆಯೇ ಗಾಂಧೀಜಿ, ಅಝಾದ, ನೆಹರು ಮತ್ತು ಡಾ. ಅಂಬೇಡಕರರು. ಅವರೆಲ್ಲರೂ ಇಂದಿನ ಪರಿಸ್ಥಿತಿಯಲ್ಲಿ ತಮ್ಮ ಬೇಡಿಕೆಗಳನ್ನು ಜಾಗತಿಕ ಹಿನ್ನಲೆಯಲ್ಲಿಟ್ಟು ನೋಡಲಾರದೆ ಹೋದರೆ, ಅವರು ನಾಗರಿಕತೆಗೆ ದ್ರೋಹ ಮಾಡಿದಂತಾಗುವದು.

ಸರ್ವಮಾನ್ಯವಾದ ಮೂಲತತ್ವಗಳನ್ನು ಅರಸಿ ಕಾಣಲು ಅವರು ಸಫಲರಾಗುವದರ ಮೇಲೆಯೇ ಶಾಂತಿ ಅಥವಾ ಯುದ್ಧದ ಪ್ರಶ್ನೆ ತೂಗಾಡುತ್ತಿದೆ; ಅನೇಕ ರಾಷ್ಟ್ರಗಳ ಭವಿತವ್ಯ, ಯುರೋಪಿನಲ್ಲಿಯೂ ಮಧ್ಯಪೂರ್ವದಲ್ಲಿಯೂ ಬರಲಿರುವ ದಿನಗಳ ರೂಪರೇಷೆ, ಅದನ್ನೇ ಅವಲಂಬಿಸಿದೆ. ಯಶಸ್ವೀ ಒಪ್ಪಂದವಾದರೆ ಮಧ್ಯಪೂರ್ವದಲ್ಲಿರುವ ಉದ್ವೇಗದ ಪರಿಸ್ಥಿತಿ ಒಡನೆ ಶಾಂತವಾಗುವದು. ಭೂಮಧ್ಯ ಸಮುದ್ರದ ಅನೇಕ ಕಠಿನ ಪ್ರಶ್ನೆಗಳನ್ನು ಅದು ಹಗುರು ಮಾಡುವದು. ಈ ಹಾಳುಬಿದ್ದು ಸೂರೆಯಾದ ಯುರೋಪಿನ ದುರಂತಕ್ಕೆ ಹೆಚ್ಚು ಮನಸು ಕೊಡಲು ಅದು ಅವಕಾಶ ದೊರಕಿಸಿಕೊಡುವದು. ಮತ್ತು ಎಲ್ಲಕ್ಕಿಂತ ಹೆಚ್ಚಾಗಿ, ಹಿಂದುಸ್ತಾನದ ರಾಜಕೀಯ ಮುಂದಾಳುಗಳಲ್ಲಿ ಅನೇಕ ಪ್ರಾಯರಾದವರನೇಕರು ವಿಘಾತಕ ಕ್ರಿಯೆಗಳ ಬದಲು ವಿಧಾಯಕ ಕ್ರಿಯೆಗಳ ಕಡೆಗೆ ತಿರುಗುವಂತಾಗುವದು. ಹಿಂದೀಯರಿಗೆ, ತಮ್ಮ ಹೃದಯ ಬುದ್ಧಿಗಳನ್ನೆಲ್ಲ ಆ ದೇಶದ ಕೇಂದ್ರ ಸಮಸ್ಯೆಯಾದ ಕಠೋರ, ಕ್ಷಯಕಾರಕ ದಾರಿದ್ರ್ಯದ ನಿವಾರಣೆಯತ್ತ ಹೊರಳಿಸಿ ೪೦೦ ಕೋಟಿಯ ಉದ್ಧಾರಕ್ಕೆ ಸಾಧನವಾಗಿ ಮಾಡುವ ಅವಕಾಶ ದೊದಗಿಸುವದು.

೨೦ ವರ್ಷಕ್ಕೂ ಹೆಚ್ಚು ಕಾಲದಿಂದ— ಅಮೃತಸರ ಮಾನಹಾನಿ ಪ್ರಕರಣದ ವಿಚಾರಣೆಯ ಬ್ರಿಟಿಶ ಜೂರಿಯಲ್ಲೊಬ್ಬನಾಗಿ ನಾನು ಪ್ರಸಂಗವಶಾತ್ ಕಂಡುಂಡ ಅನುಭವದಿಂದ ಎಷ್ಟೇ ಒಳ್ಳೆಯ ರಾಷ್ಟ್ರವಾದರೂ ಅದು ಇನ್ನೊಂದು ರಾಷ್ಟ್ರವನ್ನು ಆಳಲು ಯೋಗ್ಯವೆನಿಸಲಾರದೆಂಬ ತತ್ವದ ಸತ್ಯತೆಯನ್ನು ಮನಗಂಡಾಗಿನಿಂದ—ನಾನು ಹಿಂದೀಸ್ವಾತಂತ್ರ್ಯದ ಬೆಂಬಲಿಗನಾಗಿಯೆ ಇದ್ದೇನೆ. ಹಿಂದುಸ್ತಾನಕ್ಕೆ ಪೂರ್ಣ ಸ್ವರಾಜ್ಯವನ್ನು ಕೊಡುವ ಒಪ್ಪಂದವೊಂದನ್ನು ನಾವು ಸಾಧಿಸಬಲ್ಲೆವಾದರೆ, ಮತ್ತು ಅದಕ್ಕೂ ಹೆಚ್ಚಾಗಿ, ಆ ಒಪ್ಪಂದ ಎಲ್ಲ ಪಕ್ಷಗಳ ಔದಾರ್ಯದ ಫಲವಾಗಿ ಒದಗಿಬಂತೆಂದಾದರೆ ಇಂದು ನಮ್ಮ ನಾಗರಿಕತೆಯನ್ನು ಆವರಿಸಿರುವ ಕರಾಳ ಛಾಯೆ ದೂರವಾಗುವದೆಂದು ನನ್ನ ನಂಬಿಕೆ. ಹಾಗಾದರೆ ದ್ವಿತೀಯ ಮಹಾಯುದ್ಧದಲ್ಲಿ ದೊರೆತ ವಿಜಯವನ್ನು, ಆ ಯುದ್ಧ ಯಾವ ಧ್ಯೇಯಕ್ಕಾಗಿ ಹೋರಾಡಲ್ಪಟ್ಟಿತೋ ಆ ಮಹಾಕಾರ್ಯದ ಸಾಧನೆಗೆ ಬಳಸಿದಂತಾಗುವದು. ಇದರಲ್ಲಿರುವದು ಹಳೆಯ ಅರ್ಥದ ಪ್ರತಿಷ್ಠೆಯ ಪ್ರಶ್ನೆಯಲ್ಲ. ರಾಷ್ಟ್ರರಾಷ್ಟ್ರಗಳು ಅನ್ಯಥಾ ಬಲಪ್ರಯೋಗದಿಂದಲೇ ಬಗೆಹರಿಸಿಕೊಳ್ಳಬೇಕಾಗುವ ಸಮಸ್ಯೆಗಳನ್ನು ಪರಸ್ಪರ ಸೌಹಾರ್ದದಿಂದ ಬಗೆಹರಿಸಿಕೊಳ್ಳುವದರಲ್ಲಿ ಅಡಕವಾದ ಆ ಉಚ್ಚ ಪ್ರತಿಷ್ಠೆ ರಾಷ್ಟ್ರಗಳಿಗೂ ಅವುಗಳ ಮುಂದಾಳುಗಳಿಗೂ ಭೂಷಣಪ್ರಾಯವಾಗುವದು. ಅಟ್ಲಿಯವರ ಸರಕಾರ ಒಂದು ದೊಡ್ಡ ಹೆಜ್ಜೆ ಮುಂದಿಟ್ಟಿದೆ. ಅದರ ಸದಸ್ಯರು ಹಿಂದುಸ್ತಾನದಲ್ಲಿ ಸಹನೆಯಿಂದಲೂ ನಿರ್ಭಯದಿಂದಲೂ ಅದೇ ದಾರಿಯಲ್ಲಿ ಮುಂದೆ ಸಾಗಿದರೆ ಅವರು ಹಿಂದೀ ಮುಂದಾಳುಗಳಲ್ಲಿಯೂ ಅದೇ ಬಗೆಯ ಸಹನೆ ಸಾಹಸಗಳನ್ನು ಕಾಣಬಹುದು. ಒಂದು ತಲೆಮಾರಿಗೂ ಮೀರಿ ಭಾರತ—ಬ್ರಿಟನಗಳ ಸಂಬಂಧ ಕರಾಳ, ವಿಕೃತ ಸ್ವರೂಪದ್ದಾಗಿದೆ. ಇದರಲ್ಲಿ ಅಡಕವಾಗಿರುವ ಪ್ರಚಂಡ ಪ್ರಶ್ನಾಂತರಗಳನ್ನು ಬಗೆಹರಿಸುವ ಕಾರ್ಯ ಯಾರಿಗೆ ಒಪ್ಪಿಸಲ್ಪಟ್ಟಿದೆಯೋ ಅವರೆಲ್ಲರೂ ಈ ಕರಿತೆರೆಯನ್ನು ಬದಿಗೆ ಸರಿಸಿ, ಮುಂಬೆಳಗಿನ ತಿಳಿ ಬೆಳಕನ್ನು ಒಳಬಿಡಲು ಬೇಕಾದ ಜಾಣತನವನ್ನು ತೋರುವರೆಂದು ಹೃತ್ಪೂರ್ವಕವಾಗಿ ಆಶಿಸುತ್ತೇನೆ.

ತರಂಗ-ಪಾಶ

ರಾಮಮೋಹನ ಮೂಡಬಿದ್ರಿ, ಮಂಗಳೂರು

ವೈಭವದ ವನಿತೆಯಮರ್ದಿನ ಕೊಡವ ತರುತಿರಲು,
ತೊಲಗಿಸಿದೆ,ಮರುಗಿದಳು ದೇವ! ನೀನೊಲಿದಿರಲು;
ಶೂಲಶಯ್ಯೆಯಲಿಂದು ಇರುಳ ಕಳೆಯುವೆನೆನಲು,
ಆಶೆಪಾಶವನು ತಂದಳುಯೆನ್ನಬಂಧಿಸಲು;

ಓ ಎನ್ನ ಜೀವನವೆ ಬಂಧನದಲಿ
ಸಿಲುಕದಿರು ಜೋಕೆಯೆಚ್ಚರವದಿರಲಿ!
ಅಭಿಲಾಷೆಗಳ ಮುರಿದುಹೋದವನೆಲ್ಲಿ?
ಆರ ಪದಕಮಲಗಳನಾಶ್ರಯಿಸಲಿ?

'ಚಾರಿತ್ರ'- ಅಣಕಿಸುತ ಕರೆಯುತಿರುವವರಾರು ?
ಚಾರಿತ್ರ'- ತಣಿಸುವೆನು ತವ ಕೀರ್ತಿಲೋಭವನು,
'ಚಾರಿತ್ರ'- ಅದುರುವೆನು; ಕಲ್ಲನೆಸೆವವರಾರು?
'ಚಾರಿತ್ರ'- ಹಿಡಿದಿಹಳು ಮಮತೆಗಳ ಪಾಶವನು

ಉತ್ಸಾಹ ಕುಗ್ಗಿ ತರೆದಾರಿಯಲ್ಲಿ,
ಶಕ್ತಿ ಬೇಸತ್ತು ಹಿಂಜರಿಯಿತಲ್ಲಿ
ದೇವದೇವನೆ! ಪತಿತಭಕುತನಲ್ಲಿ,
ದಯದೋರಿ ಮುದದೋರಿ ಬರುವುದಿಲ್ಲಿ

ಅನ್ನವನು ಮಣ್ಣೊಳೆಸೆದವನು ನಗೆ, ಬೆದರಿಸಿದೆ,
ಪರಶುವಿಂ ಸಫಲ ತರುಗಳನು ಕಡಿಯಲು ತಡೆದೆ;
ಮುನಿದು ಸುಮಗಳಕಿತ್ತೊಗೆದುನಡೆಯೆ ವನಪಥದಿ
ಕಾರಣವ ಕೇಳ್ವೆನೆನೆ ಹಾರಿದನು ಸುಮರಥದಿ;

ಕನಸು ಮುರಿಯಿತು ಕಣುಗಳನು ತೆರೆದೆನು-
ದೇಶವನು ಮರೆತನಾ ಕುಳಿತಿರುವೆನು.
ದನಿಕೇಳಿಸಿತು-'ಕಲಿತು ಪಾಠವನ್ನು
ನಷ್ಟವಾಟಿಕೆಯಿಂದ, ಬರುವುದಿನ್ನು'

ಆಹ್ವಾನ— ಕಂಬನಿಗಳನು ಸುರಿಸದಿರುವಂಗೆ,
ಆಹ್ವಾನ— ಸ್ತುತಿನಿಂದೆಗಳನು ಗಣಿಸದವಂಗೆ,
ಆಹ್ವಾನ— ಸುರಗಿಯನು ಝಳಪಿಸದೆ ಗೆಲುವಂಗೆ
ಆಹ್ವಾನ— ಆತ್ಮಬಲಿದಾನವನು ಮಾಳ್ಪಂಗೆ.

ಕಾಲ ಕಳೆಯುವ ತನಕ ಮೌನವಿರಲಿ,
ಸರ್ವಜ್ಞ ದೇವನೂ ಅರಿಯದಿರಲಿ.
ಪ್ರೇಮಪಂಥದ ಪಥಿಕರೋಡಿ ಬನ್ನಿ,
'ಮುರಲಿ ಮೋಹನ'ನ ಸನ್ನಿಧಿಗೆ ಬನ್ನಿ!

ಅಂಚೆಯಿಂದ ತರಿಸಿಕೊಳ್ಳುವ ನಮ್ಮ ಚಂದಾದಾರರಲ್ಲಿ ವಿನಂತಿ


ಪತ್ರವ್ಯವಹಾರ ಮಾಡುವಾಗ್ಗೆ ಮತ್ತು ಮನಿಆರ್ಡರ ಕಳಿಸುವಾಗ್ಗೆ ನಿಮಗೆ ಬರುತ್ತಿದ್ದ ಪತ್ರಿಕೆಯ ಮೇಲಿನ ವಿಳಾಸದಲ್ಲಿ ನಾವು ಸೇರಿಸಿದ ನಂಬರ ಬರೆಯಬೇಕು. ನಂಬರ ಇಲ್ಲದ ಪತ್ರಕ್ಕೆ ಉತ್ತರ ಸಿಗಲಾರದು.

ಅವಧಿ ಮುಗಿಯುವ ೧೫ ದಿನ ಮುಂಚೆಯೆ ನಾವು ನಮ್ಮ ಪದ್ಧತಿಯಂತೆ ವ್ಹಿ. ಪಿ. ಮಾಡುವೆವು. ಬೇಡಾದವರು ಮೊದಲೇ ನಮಗೆ ತಿಳಿಸಬೇಕು.

ತಿಂಗಳು, ಎರಡು ತಿಂಗಳು ಚಂದಾದಾರರಾಗಲಿಚ್ಛಿಸುವವರು ಮುಂಗಡ ಹಣ ಕಳಿಸಬೇಕು. ಅವರಿಗೆ ವ್ಹಿ. ಪಿ. ಯನ್ನು ಕಳಿಸಲಾಗುವದಿಲ್ಲ. ವಾರಪತ್ರಿಕೆ (ಕರ್ಮವೀರ) ಯನ್ನು ೬ ತಿಂಗಳಿಗಿಂತ ಕಡಿಮೆ ವ್ಹಿ. ಪಿ. ಮಾಡುವದಿಲ್ಲ. ಮೊದಲನ ವ್ಹಿ. ಪಿ. ಕಳಿಸಿದ ಪ್ರತಿಯನ್ನು ನಾವು ಲೆಕ್ಕಕ್ಕೆ ಹಿಡಿಯದೆ ನಿಮ್ಮಿಂದ ವ್ಹಿ. ಪಿ. ಹಣ ಬಂದು ನಮ್ಮ ಕೈಸೇರಿದ ನಂತರ ಪತ್ರಿಕೆಯನ್ನು ಕಳಿಸಲು ಪ್ರಾರಂಭಿಸಿ ಅಂದಿನಿಂದಲೆ ನಿಮ್ಮ ಅವಧಿಯನ್ನು ಗಣಿಸಲಾಗುವದು.

—ವ್ಯವಸ್ಥಾಪಕ

ಕರ್ಮವೀರ, ಹುಬ್ಬಳ್ಳಿ.



ಜ್ಯೋತಿಷಿ:-ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಮಾರ್ಚ ೧೧ ರಿಂದ ೧೮ ರ ವರೆಗೆ

ಮೇಷ

ನಿಮ್ಮ ಪ್ರಕೃತಿ ನೆಟ್ಟಗೆ ಆದರೆ ಹೆಂಡತಿಯದು ಸ್ವಲ್ಪ ಕೆಡುವದು. ಪ್ರಾಪಂಚಿಕ ಸುಖದಲ್ಲಿ ಅನೇಕ ಅಡಚಣಿಗಳಿಂದರೂ ಸಂತತಿಯಲ್ಲಿ ಒಬ್ಬನ ವಿಶೇಷ ಏಳ್ಗೆ. ಮನೆಯ ಕೆಲಸಗಳಲ್ಲಿ ಬಹಳ ವೆಚ್ಚವಾದರೂ ಯಾವದೊಂದೂ ಮನಸ್ಸಿನಂತೆ ಆಗದಿರುವ ಕುಯೋಗ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ ಆದರೆ ಪ್ರತಿಷ್ಠೆ ಕಡಿಮೆ. ಪ್ರತಿಯೊಂದು ಕೆಲಸದಲ್ಲಿ ವಿಪರೀತ ಗೊಂದಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿನ್ನೆಟ್ಟುವಿಕೆ. ಶತ್ರುಗಳಿಂದ ಬಹಿರಂಗವಾಗಿಯೂ ಗುಪ್ತರೀತಿಯಿಂದಲೂ ವಿವಿಧ ತೊಂದರೆ. ಗೆಳೆತನದಲ್ಲಿ ಕ್ಲೇಶ. ನಿಮ್ಮ ಬೆಲ್ಲದ ಮಾತು ಎರಡನೆಯವರಿಗೆ ಬೇರೆಯಾಗಿ ಪರಿಣಮಿಸುವವು. ಪ್ರವಾಸ ಉತ್ತಮ. ಭೆಟ್ಟಿಯಲ್ಲಿ ಸ್ವಲ್ಪ ತೊಂದರೆಯಿಂದ ಯಶ. ಪತ್ರವ್ಯವಹಾರ ಬಹಳೆ ಮನಸ್ಸಿಗೆ ಹತ್ತುವಂತೆ ಆಗುವದು. ಅಶ್ವಿನಿಯ ೪ನೇ ಮತ್ತು ಭರಣಿಯ ಮೊದಲ ೩ ಚರಣಗಳಿಗೆ ತ್ರಾಸ ಕಡಿಮೆ ತಾ. ೧೧, ೧೬ ಮತ್ತು ೧೭ ನೆಟ್ಟಗೆ.

ವೃಷಭ

ಪ್ರಕೃತಿ ಉತ್ತಮ. ಆಸ್ತಿಯಲ್ಲಿ ಹೆಚ್ಚಳ ಇಲ್ಲವೆ ಅನುಕೂಲ ಸ್ಥಿತ್ಯಂತರ. ಸಂತತಿಯಿಂದ ಕೆಲವು ಉತ್ತಮ ಕೆಲಸಗಳು ನಡೆದರೂ ಪ್ರಾಪಂಚಿಕವಾದ ಇತರ ಸುಖ ಬಹಳ ಕಡಿಮೆ. ಉದ್ಯೋಗದಲ್ಲಿ ಪ್ರಗತಿ ನೆಟ್ಟಗೆ, ಪ್ರತಿಷ್ಠೆ ಚನ್ನಾಗಿರುವದು. ಲಾಭವು ವಿಶೇಷ ಪಾಗುವದೆಂದು ನಿಶ್ಚಿತವಿದ್ದರೂ ಕೈಗೆ ದೊರೆಯುವ ವರೆಗೆ ಬಹಳ ತೊಂದರೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿನ್ನೆಟ್ಟುವಿಕೆ, ಗೆಳೆತನದಲ್ಲಿ ವಿರೋಧ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಸ್ವಲ್ಪ ನೆಟ್ಟಗೆ. ಕೃತ್ತಿಕೆಯ ೪ನೇ ಮತ್ತು ರೋಹಿಣಿಯ ಮೊದಲ ೩ ಚರಣಗಳಿಗೆ ತ್ರಾಸ ಕಡಿಮೆ. ತಾ. ೧೧, ೧೩ ಮತ್ತು ೧೪ ನೆಟ್ಟಗೆ.

ಮಿಥುನ

ನಿಮ್ಮ ಹಾಗೂ ಹೆಂಡತಿಯ ಪ್ರಕೃತಿ ಚನ್ನಾಗಿದ್ದರೂ ಪರಸ್ಪರರಲ್ಲಿ ಮೇಲಿಂದ ಮೇಲೆ ಮತಭೇದವುಂಟಾಗಿ ಉಳಿದುದೆಲ್ಲ ನೆಟ್ಟಗಿದ್ದರೂ ಸಮಾಧಾನದಿಂದ ನಡೆದುಕೊಳ್ಳದಿರುವ ವರ್ತನೆ ಹಟದಿಂದ ಉಂಟಾಗುವದು. ಇತರರಿಗೆ ಒಳ್ಳೆಯವಾದರೂ ನಮಗೆ ಮನಸ್ಸಿಗೆ ಹತ್ತುವ ಮಹತ್ವದ ಕೃತಿ ಸಂಭವಿಸುವದು ! ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಮತ್ತು ಲಾಭ ಉತ್ತಮವಿದ್ದರೂ ಎರಡನೆಯವರ ಬಗ್ಗೆ ಅಸೂಯೆ. ವಾದದಲ್ಲಿ ಸ್ಪರ್ಧೆಯಲ್ಲಿ ಅನುಕೂಲತೆ. ಗೆಳೆತನದಲ್ಲಿ ಪರಸ್ಪರರ ಉದ್ಧಟ ವರ್ತನ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ನೆಟ್ಟಗೆ. ಮೃಗಾದ ೪ನೇ ಮತ್ತು ಆರ್ದ್ರಾದ ಮೊದಲ ೩ ಚರಣಗಳಿಗೆ ತ್ರಾಸದಿಂದ ಯಶಸ್ಸು. ತಾ. ೧೧, ೧೨, ೧೩ ಮತ್ತು ೧೪ ನೆಟ್ಟಗೆ.

ಕರ್ಕ

ಪ್ರಕೃತಿಗೆ ಬೇಸರವನ್ನುಂಟುಮಾಡುವ ಕಿರುಕುಳ ಕ್ಲೇಶ. ಪತ್ನಿಗಾದರೂ ಮನಸ್ಸಿಗೆ ವಿಶೇಷ ತ್ರಾಸವಾಗುವಂಥ ಒಂದು ಘಟನೆ ಸಂಭವಿಸುವ ಯೋಗ. ಇತರ ಪ್ರಾಪಂಚಿಕ ಸುಖ ಅಷ್ಟಕ್ಕಷ್ಟೆ. ಸಂತತಿಯಲ್ಲಿ ಒಬ್ಬನಿಗೆ ಅಪಘಾತ ಇಲ್ಲವೆ ಅಪಮಾನದ ಹೆದರಿಕೆ. ಉದ್ಯೋಗದಲ್ಲಿ ಪ್ರಗತಿ ಮಧ್ಯಮ, ಪ್ರತಿಷ್ಠೆ ತೀರ ಇಲ್ಲದಂತಾದರೂ ದ್ರವ್ಯ ಲಾಭ ಬೇಕಾದಷ್ಟು. ಮಿತ್ರ ಸುಖ ಉತ್ತಮ. ವಾದದಲ್ಲಿ ಸ್ಪರ್ಧೆಯಲ್ಲಿ ಹಿನ್ನೆಟ್ಟುವಿಕೆ. ಶತ್ರುವಿನಿಂದ ವಿಪರೀತ ತ್ರಾಸ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ನೆಟ್ಟಗೆ ಪುಷ್ಯದ ೪ನೇ ಆಶ್ಲೇಷಾದ ಮೊದಲ ೩ ಚರಣಗಳಿಗೆ ತ್ರಾಸ ಕಡಿಮೆ. ತಾ. ೧೫,೧೬ ಮತ್ತು ೧೭ ನೆಟ್ಟಗೆ.

ಸಿಂಹ

ಪ್ರಕೃತಿ ನೆಟ್ಟಗೆ. ಪ್ರಾಪಂಚಿಕ ಸುಖ ಒಟ್ಟಿನಮೇಲೆ ಚನ್ನಾಗಿದೆ. ಅನಿರೀಕ್ಷಿತವಾಗಿ ಬಹಳ ಹಣ ವೆಚ್ಚವಾಗುವ ಯೋಗ. ಉದ್ಯೋಗದಲ್ಲಿ ಪ್ರಗತಿ ಉತ್ತಮ. ಲಾಭ ಬೇಕಾದಷ್ಟು, ಪ್ರತಿಷ್ಠೆಯೂ ನೆಟ್ಟಗೆ ಆದರೂ ಅದಕ್ಕಾಗಿ ಗೌಣರೀತಿಯಲ್ಲಿ ನಡೆದುಕೊಂಡರೆಂಬ ಲೋಕಾಪವಾದ ಬರುವದು. ಆಕಸ್ಮಿಕ ಲಾಭದ ಯೋಗವೂ ಇದೆ ವಾದದಲ್ಲಿ ಸ್ಪರ್ಧೆಯಲ್ಲಿ ಬಹಳ ಅನುಕೂಲ. ನಿಮ್ಮಲ್ಲಿ ಅಥವಾ ನಿಮ್ಮ ಆಪ್ತರಲ್ಲಿ ಶುಭಕಾರ್ಯಗಳು ಸಂಭವಿಸುವವು ಪ್ರವಾಸಾದಿ ಕೆಲಸಗಳು ಸ್ವಲ್ಪ ಕಷ್ಟಕರ. ಮಘಾದ ೪ನೇ ಮತ್ತು ಪೂರ್ವಾದ ಮೊದಲ ೩ ಚರಣಗಳಿಗೆ ತ್ರಾಸ ಕಡಿಮೆ. ತಾ. ೧೧, ೧೨, ೧೬ ಮತ್ತು ೧೭ ನೆಟ್ಟಗೆ.

ಕನ್ಯಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ವೆಚ್ಚ ಹೆಚ್ಚಾದರೂ ಮನಸ್ಸಿನಂತೆ ಕೆಲಸ ನಡೆಯುವದು ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಉತ್ತಮ. ಲಾಭ ಬಯಸಿದ್ದಕ್ಕಿಂತ ಕಡಿಮೆ ಗೆಳೆತನದಲ್ಲಿ ವಿರೋಧ ಅನೇಕ ಕಾರ್ಯಗಳಲ್ಲಿ ನೆರೆಹೊರೆಯವರು ಅಸೂಯೆಯಿಂದ ಹೇವದಿಂದ ನಡೆದುಕೊಳ್ಳುವರು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ನೆಟ್ಟಗೆ. ತಾ. ೧೧, ೧೨, ೧೩ ಮತ್ತು ೧೪ ನೆಟ್ಟಗೆ.

ತುಲಾ

ಪ್ರಕೃತಿಗೆ ಒಂದಿಲ್ಲೊಂದು ಕ್ಲೇಶ. ರತಿಸುಖ ನೆಟ್ಟಗೆ. ಆದರೆ ಪ್ರತಿಯೊಂದು ವಿಷಯದಲ್ಲಿ ಸ್ತ್ರೀಯ ವಿರೋಧ ಮತ್ತು ಸಿಟ್ಟು. ಪ್ರಾಪಂಚಿಕ ಸುಖವು ಒಟ್ಟು ಅಸಮಾಧಾನದ್ದು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ತೀರ ಕಡಿಮೆ ಆ ಪ್ರಮಾಣದಿಂದ ದ್ರವ್ಯಲಾಭ ನೆಟ್ಟಗೆ. ಮಿತ್ರ ಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ ಕಂಡು ಬಂದರೂ ನಿಮಗೆ ವಿವಿಧ ತ್ರಾಸ ಕೊಡಲು ಶತ್ರುಗಳು ನಡುಕಟ್ಟಿ ನಿಂತಿದ್ದಾರೆ. ಪ್ರವಾಸಾದಿ ಕೆಲಸಗಳು ತ್ರಾಸದ್ದು. ಚಿತ್ರಾದ ೪ನೇ ಮತ್ತು ಸ್ವಾತಿಯ ಮೊದಲ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ॥ ೧೫, ೧೬ ಮತ್ತು ೧೭ ನೆಟ್ಟಗೆ.

ವೃಶ್ಚಿಕ

ಪ್ರಕೃತಿಗೆ ಆರೋಗ್ಯ ಕಡಿಮೆ. ಸ್ತ್ರೀ ಸುಖ ಉತ್ತಮ. ಇತರ ಪ್ರಾಪಂಚಿಕ ತ್ರಾಸ ಇದ್ದದ್ದೆ. ಉದ್ಯೋಗದಲ್ಲಿ ಪ್ರಗತಿ ಕಡಿಮೆ. ಆದರೆ ಪ್ರತಿಷ್ಠೆ ಮತ್ತು ಲಾಭ ಒಟ್ಟಾರೆ ನೆಟ್ಟಗೆ. ವಾದದಲ್ಲಿ ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಪ್ರವಾಸಕ್ಕಿಂತ ಭೆಟ್ಟಿ ಪತ್ರವ್ಯವಹಾರ ನೆಟ್ಟಗೆ. ಅನುರಾಧಾದ ೪ ನೇ ಜೇಷ್ಠಾದ ಮೊದಲ ೩ ಚರಣಗಳಿಗೆ ತೊಂದರೆ ಕಡಿಮೆ. ತಾ ೧೩, ೧೪, ೧೫ ಮತ್ತು ೧೬ ನೆಟ್ಟಗೆ,

ಧನು

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ನೆಟ್ಟಗೆ. ಆದರೆ ಸ್ತ್ರೀಯೊಂದಿಗೆ ಮತ್ತೈಕ್ಯ ಕಡಿಮೆ. ಉದ್ಯೋಗದಲ್ಲಿ ಒಂದು ಮಹತ್ವದ ಕಠಿಣವೆನಿಸುವ ಕೆಲಸದಲ್ಲಿ ಸಾಹಸದಿಂದ ಯಶಸ್ಸು ಸಂಪಾದಿಸುವ ಯೋಗ. ವಾದದಲ್ಲಿ, ಸ್ಪರ್ಧೆಯಲ್ಲಿ ಅನುಕೂಲತೆ. ಸ್ವಲ್ಪ ತ್ರಾಸದಿಂದ ಬಹಳ ದ್ರವ್ಯಲಾಭ. ಮಿತ್ರ ಸುಖ ಉತ್ತಮ. ಪ್ರವಾಸಾದಿ ಕೆಲಸಗಳು ಹಿತಕರ. ಮೂಲಾದ ೪ನೇ ಮತ್ತು ಪೂರ್ವಾಷಾಢದ ಮೊದಲ ೩ ಚರಣಗಳಿಗೆ ತ್ರಾಸ ಕಡಿಮೆ. ತಾ॥ ೧೧, ೧೫, ೧೬, ಮತ್ತು ೧೭ ನೆಟ್ಟಗೆ.

ಮಕರ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಅಷ್ಟಕ್ಕಷ್ಟೆ ೨-೩ ದಿನ ಪ್ರಾಪಂಚಿಕ ತೊಂದರೆ ಬಹಳ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಉತ್ತಮ. ಆದರೆ ದ್ರವ್ಯಲಾಭ ಕಡಿಮೆ. ಕೊಡಕೊಳ್ಳುವ ಕೆಲಸದಲ್ಲಿ ಮನಸ್ಸಿಗೆ ಹತ್ತುವ ಕರಾರುಗಳನ್ನು ಪಾಲಿಸುವ ಪ್ರಸಂಗ. ಗೆಳೆತನದಲ್ಲಿ ವಿರೋಧ. ಸ್ಥಾವರ ಆಸ್ತಿಯಲ್ಲಿ ಹಾನಿ. ಪ್ರವಾಸಾದಿ ಕೆಲಸಗಳು ಸಾಧಾರಣ ನೆಟ್ಟಗೆ. ಉತ್ತರಾಷಾಢಾದ ೪ ನೇ ಮತ್ತು ಶ್ರವಣಾದ ಮೊದಲ ೩ ಚರಣಗಳಿಗೆ ತ್ರಾಸ ಕಡಿಮೆ. ತಾ॥ ೧೩, ೧೪ ನೆಟ್ಟಗೆ.

ಕುಂಭ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ನೆಟ್ಟಗೆ ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಮತ್ತು ಲಾಭ ಬಹಳ ಹೆಚ್ಚಿಗೆ. ಗೆಳೆಯರಲ್ಲಿ ಒಬ್ಬನಿಗೆ ವಿಶೇಷ ಭಾಗ್ಯೋದಯವಾಗುವದು. ಮನೆಯಲ್ಲಿ ಶುಭ ಕಾರ್ಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ನೆಟ್ಟಗೆ ಧನಿಷ್ಠಾದ ೪ ನೇ ಮತ್ತು ಶತತಾರಕೆಯ ಮೊದಲ ೩ ಚರಣಗಳಿಗೆ ಮಾತ್ರ ತ್ರಾಸದಿಂದ ಯಶಸ್ಸು. ತಾ॥ ೧೧, ೧೨, ೧೬ ಮತ್ತು ೧೭ ನೆಟ್ಟಗೆ.

ಮೀನ

ಪ್ರಕೃತಿ ಸಾಧಾರಣ. ಸ್ತ್ರೀ ಸುಖ ನೆಟ್ಟಗೆ ಆಪ್ತರಿಂದ ರೋಚಿಗೆಬ್ಬಿಸುವ ಕೆಲಸಗಳು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಸಾಧಾರಣ ಆದರೆ ಖರ್ಚ ಅಳತೆಮೀರಿ. ಪತ್ರವ್ಯವಹಾರವು ಪ್ರವಾಸ ಭೆಟ್ಟಿಗಳಿಗಿಂತ ನೆಟ್ಟಗೆ. ಉತ್ತರ ಭಾದ್ರಪದದ ೪ನೇ ಮತ್ತು ರೇವತಿಯ ಮೊದಲ ೩ ಚರಣಗಳಿಗೆ ತ್ರಾಸ ಕಡಿಮೆ. ತಾ ೧೩, ೧೪ ನೆಟ್ಟಗೆ.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟಿನ ಪರವಾಗಿ ಹ. ರಾ. ಮೋಹರೆಯವರಿಂದ ಮುದ್ರಿತ ಪ್ರಕಟವಾಯಿತು.

ಚಿಕ್ಕ ಕತೆ

(೨ನೇ ಪುಟದಿಂದ)

"ಮಾದಾ ಪಗಾರ ತಂದೀ?"

ಮಾದನು ಪಗಾರ ಆಕೆಯ ಕೈಯಲ್ಲಿ ಕೊಟ್ಟನು.

"ಈಟ?"

"ನಾವ ದಗದಾ ಮಾಡಿದರೂ ಏಳು ದಿನಾ ಖಾಡಾ ಹಿಡಿದರು. ನಿಂಗೀ, ಈ ದಗದಾ ನಾವೊಲ್ಲಿಸಿ" ಕೊರಳು ತುಂಬಿ ಬಂದು ಅವನೆಂದನು. "ಈ ದಗದಾ ಮರಿಯೋವೊಲ್ಲೆ."

"ಮಾದಾ, ಏಟ ಪಗಾರ ಬರಲಿ, ಯಾಳ್ಯಾಕ ಬರತತಿ. ಇದನ್ನ ಬಿಟ್ಟರ ಮುಂದ ಏನ ಗತಿ? ಮತ್ತ ಈಗ ಬಿಟ್ಟೀ ಅಂದರ ನಿನಗ ಗಡಾನ ಬ್ಯಾರೆ ದಗದಾ ಎಲ್ಲಿ ಸಿಗತತಿ?''

"ಮಾಡಾಕ ನಿಂತಿತೂ ಅಂದರ ದಗದಕ್ಕೇನು ಕಮ್ಮ? ಮುನಸೀಪಾಲಟಿ ಗಟಾರ ಬಳಧಾಂಗ ಇನ್ನ ಮನೀ ಮನೀ ಗಟಾರ ಬಳೀತಿನಿ. ಹಿತ್ತಲಾ ಸ್ವಚ್ಛ ಮಾಡತೀನಿ. ಬಾವಿಯಾಗ ಬಿದ್ದ ಬಿಂದಗೀ ತಂಬಗೀ ತಗೀತೀನಿ. ಕಲ್ಲ ಕಟೇತೀನಿ, ಎಮ್ಮಿ ಬೋಳಸತೇನಿ, ಕಲ್ಲಿಗೆ ಮುಳ್ಳ ಆಡಸತೀನಿ, ಕೀಲಿ ದುರಸ್ತ ಮಾಡತೀನಿ, ಛತ್ತರಿಗೆ ದುರಸ್ತ ಮಾಡತೀನಿ, ಕಿವೀ ಕೂಗಣೀ ತಗಿತೀನಿ, ಒಂದ ಎರಡ, ನಿಂಗೀ, ದೇಶದಾಗ ಏಟ ಮಂದಿ ಆಗೇತಿ ಅಟ ಕೆಲಸ ಹುಟ್ಟತಾವ....ಈ ಕೆಲಸ ಮರಿಯೋವೊಲ್ಲೆ.''

* * *

"ನಿನಗ ತಿಳದ್ದ ಮಾಡ" ಅವಳೆಂದಳು.

ಮರುದಿನ ಮಾದನು ಬೇಗನೇಳಲಿಲ್ಲ. ಹಾಜರಿಯ ಖಾಡಾ ಅಂಜಿಕೆ ಇರದ್ದರಿಂದ ನಿಧಾನವಾಗಿ ಎದ್ದು ಹೆಗಲ ಮೇಲೆ ಒಂದು ಸಲಕಿಯನ್ನು ಹೇರಿಕೊಂಡು ಮೆಲ್ಲಗೆ ಅರಣ್ಯದ ಒಂದು ಮಿಕವು ಊರಿಗೆ ಬೇಟೆ ಹೋಗುವಂತೆ ನಡೆದನು. ಅವನು ಸಮಗಾರ ಓಣಿ, ಮೇದಾರ ಓಣಿ, ಬಣಗಾರ ಓಣಿ ಮತ್ತು ಬಡಿಗೇರ ಓಣಿಗಳನ್ನು ಸುತ್ತಿ ಮುನಸೀಪಾಲಟಿಯ ಕಡೆಗೆ ಬಂದನು. ಆ ಕಟ್ಟಡದ ಮೇಲೆ ನೋಡಲಾರದಷ್ಟು ಸಿಟ್ಟು ಒಡಮೂಡಿತ್ತು. ಆದರೂ ಚಿಕ್ಕವನಿರುವಾಗಿನಿಂದಲೂ ಮುನಸಿಪಾಲಟಿಯು ಅವನಿಗೆ ಆಧಾರವಾಗಿತ್ತು. ಪ್ರತಿ ಬುಧವಾರಕ್ಕೆ ಪಗಾರ ತರಲಿಕ್ಕೆ ಅಷ್ಟೇ ಅಲ್ಲದೆ ಗಟಾರ ಬಳಿಯುವ ಕೆಲಸ ತೀರಿದ ಕೂಡಲೇ ಅಲ್ಲಿ ಹೋಗಿ ತನ್ನ ಓರಿಗೆಯವರೊಡನೆ ಅದರ ವಿಶಾಲವಾದ ಪಟಾಂಗಣದಲ್ಲಿ, ಅದರ ಆಕಾಶ ಮಲ್ಲಿಗೆಯ ತೋಪುಗಳಲ್ಲಿ, ಅದರ ಡೇರೆ ಹೂವುಗಳ ತೋಟದಲ್ಲಿ ಸ್ವಚ್ಛಂದವಾಗಿ, ಅವಿರತವಾಗಿ, ತನ್ನ ಗುಡಿಸಲು ಅಂಗಳಗಳಲ್ಲಿ ಆಡುವಂತೆ, ರೊಕ್ಕ ಹಚ್ಚಿ, ಇಸ್ಪೀಟು ಮತ್ತು ಗುಂಡುಗಳನ್ನಾಡುತ್ತಿದ್ದನು. ನಾಲ್ಕೈದು ಜನರು ದುಡ್ಡುಗಳನ್ನು ನೆಲದ ಮೇಲೆ ಒಗೆದು ಯಾರ ದುಡ್ಡ ಮೇಲೆ ಒಂದು ನೊಣ ಬಂದು ಕೂಡುವದೋ ಅವರ ಬಿದ್ದ ದುಡ್ಡುಗಳನ್ನು ಗೆದೆಯುವ ಆಟ ಕೂಡ ಆಡುತಿದ್ದರು. ಈಗ ಆ ಕಟ್ಟಡ ನೋಡಬಾರದೆಂಬ ಹಟದಿಂದ ನಡೆದ ಅವನಿಗೆ ಇವೆಲ್ಲ ವಿಚಾರಗಳು ತಲೆಯಲ್ಲಿ ಸುತ್ತಿದ ಕೂಡಲೇ ಸೆಟೆದು ನಡೆಯುತ್ತಿದ್ದ. ಅವನು ಕೊರಳು ಹೊರಳಿಸಿ ಆ ಕಟ್ಟಡದ ಕಡೆಗೆ ದೃಷ್ಟಿ ಬೀರಿದನು. ಕೆಲಸ ತೀರಿಸಿದ ಅವನ ಒಂದು ಕಾಲದ ಸಂಗಡಿಗರು ರೊಕ್ಕ ಹಚ್ಚಿ ಆಡುತ್ತಿದ್ದರು. ಅವರು ಇವನನ್ನು ನೋಡಿ ಮೋರೆ ತಿರುಗಿಸಿದರು. ಬಗಲೊಳಗಿಂದ ನೋಡಹತ್ತಿದರು. ತಗ್ಗಿಸಿ ಮಾತನಾಡಹತ್ತಿದರು. ತೀರ ಪರಿಚಿತರಾದ ಮುನಸೀಪಾಲಟಿಯ ಆಳು ಹೋಳುಗಳು ಕೂಡ ಪರದೇಶದಿಂದ ಬಂದವನಂತೆ ತನ್ನ ಕಡೆಗೆ ನೋಡುತ್ತಿದ್ದರು. ಹತ್ತು ವರುಷದಿಂದಲೂ ಅಖಂಡವಾಗಿ ನಗರ ಸಭೆಯ ಸೇವೆ ಮಾಡಿ ಈಗ ಒಂದೇಒಂದು ಭಿನ್ನಾಭಿಪ್ರಾಯದಿಂದ ಅದರಿಂದ ದೂರವಾಗಿದ್ದಕ್ಕೆ ತನ್ನ ಅಸ್ತಿತ್ವವನ್ನೇ ನೆನಹಿನ ರಾಜ್ಯದಿಂದ ಕಿತ್ತಿ ದೇಶಿಗನಂತೆ ತನ್ನನ್ನು ಕಾಣುವ ಆ ಆಳುಹೋಳುಗಳ, ಗೆಳೆಯರ, ಆ ಕಟ್ಟಡದ ರೀತಿಯು ಅವನಿಗೆ ತಡೆಯಲಾರದ ಅಳಲನ್ನ ತಂದಿತು. ಅವನು ಅಲ್ಲಿ ನಿಲ್ಲಲಿಲ್ಲ. ಜಡಮನಸ್ಸಿನಿಂದ ಜಡವಾದ ಸಲಿಕೆಯನ್ನು ಹೊತ್ತುಕೊಂಡು ಜಡಕಾಲುಗಳನ್ನೆತ್ತಿ ಜಡವಾದ ಭೂಮಿಯನ್ನು ತುಳಿಯುತ್ತ ಹೆಜ್ಜೆ ಹಾಕಿದನು. ಹಳೇ ಊರನ್ನು ದಾಟಿ ಹೊಸವೂರಿಗೆ ಬಂದನು. ಇಲ್ಲಿ ಅವನು ಈಗೆರಡು ವರುಷಗಳಿಂದಲೂ ದುಡಿಯುತ್ತಿದ್ದನು. ತನಗೆ ಮೀಸಲಾಗಿಟ್ಟ ಐದು ವೈಲುದ್ದ ಗಟಾರದ ಕಡೆಗೆ ನೋಡಿದನು. ಕತ್ತೆ ಕಡಿದಂತೆ ಗಟಾರದ ತಳದಲ್ಲಿ ತಗ್ಗುದಿನ್ನೆಗಳಾಗಿದ್ದವು. ದೂರದಲ್ಲಿ ತನ್ನ ಸ್ಥಳವನ್ನಾಕ್ರಮಿಸಿದ ಹೊಸ ಗಟಾರಿಗನು ಮುಸಲೇ ಗಟಾರದ ಕೂಡ ಗುದ್ದಾಡುತಿದ್ದನು. ಮಾದನು ಅವನ ಹತ್ತಿರ ಹೋದನು. ಬಗ್ಗಿ ಉದ್ದವಾದ ಗಳವನ್ನು ನೀಡಿ ನೀರು ಗೊಜ್ಜುತ್ತಿದ್ದ ಗಟಾರಿಗನು ಮಾದನನ್ನು ಮೊದಲು ನೋಡಲಿಲ್ಲ. ಅವನು ಆ ನೀರನ್ನು ಮುಂದೆ ಗೊಜ್ಜಲಾರದೆ ಏಳಲಾರದ ಟೊಂಕವನ್ನು ಎತ್ತುತ್ತ ಎಡಗೈಯನ್ನು ಟೊಂಕದ ಮೇಲಿಟ್ಟು ಎದ್ದನು. ಮೊದಲು ಮಾದನನ್ನು ನೋಡಿ ಅವನು ನಾಚಿಗೆಪಟ್ಟುಕೊಂಡನು. ತನ್ನ ಅಸಮರ್ಥತೆ ಮತ್ತು ಅನನುಭವಗಳನ್ನು ಕಂಡುಹಿಡಿದನಲ್ಲಾ ಎಂದು ಹೊರಡಲಾರದ ನಗೆಯನ್ನು ಮುಖದ ಮೇಲೆ ಅರಳಿಸುತ್ತ ಅವನೆಂದನು. "ಏನ ಮಾದಾ! ಈ ಗಟಾರಕ್ಕೆ ಮಂತರಾ ಹಾಕಿ ಹೋಗೀದಿ ಏನ! ನನಗ ಆಸುಗೊಳ್ಳುವಲ್ಲ."

"ಮಕಾಸೀ, ಈ ಕಲ್ಲ ಯಾಕ ತಗದೀ ?" ಎಂದು ಅನ್ನುತ್ತ ಗಟಾರದ ದಂಡೆಗೆ ಎತ್ತಿಟ್ಟ ಕಲ್ಲನ್ನು ಗಟಾರದ ಹೊರಳಿನಲ್ಲಿ ಮತ್ತೆ ಸೇರಿಸಿದನು.

"ಆ ಮ್ಯಾಲಮನಿಗೆ ಹೋಗು ನೀರು ಬಿಡ ಅನ್ನ" ಎಂದನು. ಗಟಾರಿಗನು ಮೇಲೆ ಹೋಗಿ ನೀರು ಬಿಡಿಸಿದನು. ಇಳುಕಲಗುಂಟ ಬಂದ ನೀರು ಕಲ್ಲಿನ ಹಿಂಬದಿಗೆ ಬಂದು, ದೊಡ್ಡ ನೀರಿನ ಸಂಚಯವಾಗಿ ನಿಂತಿತು. ಆ ನೀರಿನ ಪ್ರವಾಹದ ಗುಂಟ ಕಶ್ಮಲವೂ ರೊಜ್ಜೂ ಉಸುಕೂ ಮಣ್ಣೂ ತೇಲಿಬರದಿತು. ಮಾದನು ಸಾವಕಾಶವಾಗಿ ಕಶ್ಮಲವನ್ನು ಮೊದಲು ತೆಗೆದನು. "ಈಗ ರಾಡೀ ತಗೀಬ್ಯಾಡ. ಮತ್ತ ಯಾಕಂದರ ನೀರಿನೊಳಗ ರಾಡಿ ಕೂಡಿತು ಅಂದರ ಅದರ ಓಟ ಕಮ್ಮಿ ಆಕ್ಕತಿ" ಎಂದನು. "ನೀನು ಆ ಗಟಾರದ ಮ್ಯಾಲ ನಿಲ್ಲು. ಆ ಗಳಾ ಗಟಾರದೊಳಗ ತುರುಕು. ನಡವ ಬ್ಯಾಡ. ಕಡ್ಯಾಕ ನಡವಿನ ನೀರು ಮುಕಾಟಲೇ ಹರೀತದ. ನಿಲ್ಲೂದ ಅಂದರ ಕಡಿಯಂಕ. ಈ ನೀರು ಧುಮಕಾಡಿಸಿ ಹೋಗೂವಾಗ ತಟೀ ತುದೀಪಾರ ಮಾಡಿದೀ ಅಂದರ ನೀರ ಗದಗುಡಿಸಿ ಓಡತದ. ನೋಡ ಮತ್ತ ನಾ ಕಲ್ಲ ತಗಿಯೋದ ಒಂದ ತಡ.......ನೀ ಕೋಲ ತಯಾರಿಡು."

ಮಾದನು ಕಲ್ಲು ಎತ್ತಿದನು. ನೀರು ಹೊರಳಿನಲ್ಲಿ ಮೊದಲು ನಿಧಾನವಾಗಿ ಹಿಂದುಗಡೆ ಬಹು ರಭಸದಿಂದ ಮುನ್ನುಗ್ಗಿತು. ಗಟಾರಿಗನು ಕೋಲನ್ನು ಕೈನೋಯುವಂತೆ ಹಿಂದೆಮುಂದೆ ಮಾಡಿದನು. ತನ್ನ ಪ್ರಯತ್ನವೆಲ್ಲವೂ ಮೊದಲು ನಿಷ್ಫಲವಾಗುವದೆಂದು ಅವನಿಗೆನಿಸಿತು. ಆದರೆ ಅವನ ಕೋಲಿನ ಒಗ್ಗಾಟ ಹೆಚ್ಚಾದಂತೆ ನೀರು ಸಾವಕಾಶವಾಗಿ ಆದರೆ ನಿರ್ಧಾರದಿಂದ ಮುಂದೆ ಸಾಗಿತು. ತರುವಾಯ ಎರಡು ನಿಮಿಷಗಳಲ್ಲಿ ನೀರು ಒಂದು ಹನಿ ಉಳಿಯದಂತೆ ಹರಿದು ಹೋಯಿತು. ಗಟಾರಿಗನ ಮೋರೆಯ ಮೇಲೆ ಒಂದು ಮೆಲುನಗೆಯು ಅರಳಿತು. ಅವನು ಮಾದನನ್ನು ನೋಡಿದನು. ಅವನು ಕಲ್ಲನ್ನು ಎತ್ತಿ ಎಡೆಯ ರಾಡಿಯನ್ನು ಬಳಿಯುತ್ತಿದ್ದನು. ಗಟಾರಿಗನು ಓಡುತ್ತೇ ಬಂದು, "ಮಾದಾ ಪಗಾರ ತಿನ್ನಾವ ನಾ ! ನೀಯಾಕ ಕೆಲಸಾ ಮಾಡತೀ ಬಿಡ" ಎಂದು ಕೃತಜ್ಞತೆಯಿಂದ ಅವನ ಕೈಯಲ್ಲಿಯ ಕೋಲು ಮೆಲ್ಲಗೆ ಕಸಿದು ಉಳಿದ ರಾಡಿಯನ್ನು ಬಳಿದು ಮೇಲೆ ಚಲ್ಲಿದನು.

"ನನಗ ಈಗ ಸಮಾಧಾನ ಆತು,'' ಮಾದ ಅಂದನು.

"ಏನು ಸಮಾಧಾನ ಆತು ?''

"ಈ ಗಟಾರ ಇದ್ಯಾ ಮುನಸೀಪಾಲಿಟಿ ನನಗ ಕಲಿಸಿತು. ಅದನ್ನ ನಾ ಹಾಂಗ ಒಯ್ದಿದ್ದ ಅಂದರ ಉಂಡ ಮನಿಗೆ ಗಳಾ ಎಣಿಸಿಧಾಂಗ ಆಗತಿತ್ತು. ಇನ್ನ ಬೇಶಾತ. ನಾ ಮರೆತರೂ ಚಿಂತಿಲ್ಲ. ನನ್ನ ಇದ್ಯಾ ನಿನಗಾದರೂ ಕಲಿಸಿದೆನೊ ಅಷ್ಟ ನನಗ ಸಮಾಧಾನ. ನಾ ಹೋಕ್ಕೀನಿ. ಹರಿಯಾಗಿಂದ ಹೀಂಗ ತಿರಗೀನಿ ನೋಡ !" ಎಂದು ಗಟಾರದ ದಂಡೆಗಿಟ್ಟ ಸಲಿಕೆಯನ್ನು ಹೆಗಲಿಗೇರಿಸಿ "ಬಿಲಿಂಗಾ, ತಂಬಿಗೀ, ಬಾವಡೀ !" ಎಂದು ಸ್ವಾತಂತ್ರ್ಯದ ಕಹಳೆಯನ್ನು ಓಣಿಗುಂಟ ಊದುತ್ತ ಮುಂದೆ ಸಾಗಿದನು.